





★ E-Bengaluru Beragu ★

MAG (2) PRB/CR/36/24-25
T/KN2024/2076


# ಈ-ಬೆಂಗಳೂರು ಬೆರಗು


ಸಂಪುಟ: 3 Vol: 3 ಸಂಚಿಕೆ: 03 Issue: 03 ಜುಲೈ 15 - 31 ಪುಟಗಳು: 14 Pages: 14 ಬೆಲೆ: 15.00 ರೂ.




## ದೆಹಲಿ ದಂಗೆ: ಧರ್ಮೇಂದ್ರ ಪ್ರಧಾನ್ ರಾಜೀನಾಮೆ

## ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯ: 97 ಕೋಟಿ ಹರಿದು ಬಂದ ದೇಣಿಗೆ






## ಈ ಸಾವು ನ್ಯಾಯವೇ?

## ಬೆಂಗಳೂರು ಪಾದಚಾರಿ ಮಾರ್ಗ ತೆರವು ಆಂದೋಲನ




ನೇರ, ನಿರ್ಭೀತಿ, ನಿಷ್ಪಕ್ಷಪಾತ ಮತ್ತು ನಿಮ್ಮ ಆಯ್ಕೆಯ ಸುದ್ದಿಗಳಿಗಾಗಿ....





ಸಂಪಾದಕರ ಪುಟ

# ದೆಹಲಿ ದಂಗೆ: ಧರ್ಮೇಂದ್ರ ಪ್ರಧಾನ್ ರಾಜೀನಾಮೆ



ಕೆಲವು ದಿನಗಳಿಂದ ಪ್ರತಿಭಟನೆ, ಸರ್ಕಾರ ವಿರೋಧಿ ಘೋಷಣೆಗಳು, ಪೊಲೀಸ್ ಮತ್ತು ಯುವಜನರ ನಡುವಿನ ಕಿತ್ತಾಟಕ್ಕೆ ಸಾಕ್ಷಿಯಾಗಿದ್ದ ದೆಹಲಿಯ ಜಂತರ್ ಮಂತರ್‌ನಲ್ಲಿ ಶನಿವಾರ ಜುಲೈ 25 ರಂದು 'ವಂದೇ ಮಾತರಂ', ದೇಶಭಕ್ತಿ ಗೀತೆಗಳು ಮೊಳಗಿದವು. ಡ್ರಮ್ ಸದ್ದುಗಳು ಅನುರಣಿಸಿದವು. ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಮ್ಮ ಹುದ್ದೆಗೆ ರಾಜೀನಾಮೆ ಕೊಡುತ್ತಿದ್ದಂತೆ, ಅಲ್ಲಿ ನೆರೆದಿದ್ದ ಸಾವಿರಾರು ಪ್ರತಿಭಟನಕಾರರು ತಿಂಗಳುಗಳಿಂದ ನಡೆಸಿದ ತಮ್ಮ ಪ್ರಯತ್ನ ಫಲಿಸಿದೆ ಎಂದು ಪರಸ್ಪರ ಅಪ್ಪಿಕೊಂಡು, ತ್ರಿವರ್ಣ ಧ್ವಜ ಹಾರಿಸಿ ಸಂಭ್ರಮದಲ್ಲಿದ್ದರು.

ಒಡಿಶಾದ ಹಿರಿಯ ಬಿಜೆಪಿ ನಾಯಕ ಧರ್ಮೇಂದ್ರ ಪ್ರಧಾನ ಅವರು 2021ರಿಂದ ಕೇಂದ್ರ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು. ರಾಷ್ಟ್ರೀಯ ಶಿಕ್ಷಣ ನೀತಿ (NEP-2020) ಜಾರಿಗೆ ವೇಗ ನೀಡುವುದು, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ, ಡಿಜಿಟಲ್ ಶಿಕ್ಷಣದ ವಿಸ್ತರಣೆ, ಕೌಶಲ್ಯಾಭಿವೃದ್ಧಿ ಹಾಗೂ ಹೊಸ ಶಿಕ್ಷಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಹಲವು ಹೊಸ ಯೋಜನೆಗಳನ್ನು ಜಾರಿಗೆ ತಂದಿದ್ದರೂ, ಇತ್ತೀಚಿನ ಪರೀಕ್ಷಾ ಅಕ್ರಮಗಳ ವಿವಾದವು ಅವರ ಸಚಿವ ಸ್ಥಾನಕ್ಕೆ ಸವಾಲಾಗಿ ಪರಿಣಮಿಸಿತು. ಧರ್ಮೇಂದ್ರ ಪ್ರಧಾನ ಅವರ ರಾಜೀನಾಮೆ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿನ ದೌರ್ಬಲ್ಯಗಳ ಬಗ್ಗೆ ಗಂಭೀರ ಚರ್ಚೆಗೆ ಕಾರಣವಾಗಿದ್ದು, ಮುಂದಿನ ದಿನಗಳಲ್ಲಿ ಸರ್ಕಾರ ಕೈಗೊಳ್ಳುವ ಸುಧಾರಣಾ ಕ್ರಮಗಳು ಶಿಕ್ಷಣ ಕ್ಷೇತ್ರದ ಭವಿಷ್ಯವನ್ನು ನಿರ್ಧರಿಸಲಿವೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಪ್ರತಿಭಟನೆ ಹಿನ್ನೆಲೆ ಮತ್ತು ಕೇಂದ್ರ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ್ ರಾಜಿನಾಮೆ ನಡೆಯಲು ಕಾರಣವಾದ ಘಟನೆಗಳು.

ಮೇ 3 ರಂದು ನಡೆದ ನೀಟ್–ಯುಜಿ ಪರೀಕ್ಷೆ, 22 ಲಕ್ಷ ಅಭ್ಯರ್ಥಿಗಳು ಭಾಗಿಯಾಗಿ ತಮ್ಮ ಮಹತ್ವಾಕಾಂಕ್ಷೆಯ ಭವಿಷ್ಯದ ಭಾರತದ ವೈದ್ಯರಾಗಲು ಮೊದಲ ಮೆಟ್ಟಿಲು ಹತ್ತಿದ ದಿನ. ಮೇ 12 ರಂದು ಅನಿರೀಕ್ಷಿತವಾಗಿ ಪ್ರಶ್ನೆಪತ್ರಿಕೆ ಸೋರಿಕೆ ಕಾರಣ ದೇಶದ ನಾನಾ ಭಾಗಗಳಿಂದ ಕೇಳಿ ಬಂದ ದೂರುಗಳ ಆಧಾರದಿಂದ ನೀಟ್ 2026 ರ ಪರೀಕ್ಷೆ ರದ್ದು ಮಾಡಿ ಎನ್‌ಟಿಎ ಆದೇಶ.

ಮೇ 15 ರಂದು ಸುಪ್ರೀಂಕೋರ್ಟ್ ವಿಚಾರಣೆ ಅರ್ಜಿಯೊಂದರ ಸಂದರ್ಭದಲ್ಲಿ ದೇಶದ ನಿರುದ್ಯೋಗಿಗಳನ್ನು 'ಜಿರಳೆಗಳು', ಮತ್ತು 'ಪರಾವಲಂಬಿ ಜೀವಿಗಳು' ಎಂದು ಕರೆದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್‌ರವರ ಹೇಳಿಕೆ ನೀಡಿದ್ದರು.

ಮೇ 16 ರಂದು ಮುಖ್ಯ ನ್ಯಾಯಮೂರ್ತಿಗಳ ಈ ಹೇಳಿಕೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಯುವಕ–ಯುವತಿಯರಿಂದ ವ್ಯಾಪಕ ಆಕ್ರೋಶ ಮತ್ತು ಪ್ರತಿಭಟನೆ. ಈ ಸಂಬಂಧ ಅಮೇರಿಕಾದಲ್ಲಿದ್ದ ಅಭಿಜಿತ್ ದೀಪೈ ಅವರಿಂದ ಸಾಮಾಜಿಕ ಜಾಲತಾಣದಲ್ಲಿ 'ಕಾಕ್ರೋಚ್ ಜನತಾ ಪಾರ್ಟಿ' (ಸಿಜೆಪಿ) ಸ್ಥಾಪನೆ ಮತ್ತು ನೆಟ್ಟಿಗರಿಂದ ಭಾರಿ ಬೆಂಬಲ. ಹಾಗೂ ಪರ–ವಿರೋಧ ಚಳುವಳಿ ಆರಂಭ.

ಜೂನ್ 6 ರಂದು ಪರೀಕ್ಷಾ ಅಕ್ರಮಗಳ ವಿರುದ್ಧ ದೆಹಲಿಯಲ್ಲಿ ದೀಪೈ ನೇತೃತ್ವದಲ್ಲಿ ಸಿಜೆಪಿ ಪ್ರತಿಭಟನೆ ಪ್ರಾರಂಭ.

ಜೂನ್ 20 ರಂದು ಪ್ರಶ್ನೆಪತ್ರಿಕೆ ಸೋರಿಕೆ ಹೊಣೆ ಹೊತ್ತು ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಸಿಜೆಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳಿಂದ ದೆಹಲಿಯ ಜಂತರ್ ಮಂತರ್‌ನಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭ.

ಜೂನ್ 21 ರಂದು ದೇಶದಾದ್ಯಂತ ನೀಟ್ ಯುಜಿ ಮರುಪರೀಕ್ಷೆ ಯಶಸ್ವಿಯಾಗಿ ಮುಕ್ತಾಯ.

ಜೂನ್ 28 ರಂದು ಸಾಮಾಜಿಕ ಹೋರಾಟಗಾರ ಸೋನಮ್ ವಾಂಗ್ಚಕ್ ಅವರಿಂದ ಉಪವಾಸ ಸತ್ಯಾಗ್ರಹ ಪ್ರಾರಂಭ.

ಜುಲೈ 16 ರಂದು ನೀಟ್ ಯುಜಿ ಮರುಪರೀಕ್ಷೆಯ ಫಲಿತಾಂಶ ಘೋಷಣೆಯಾಗಿ ಯಾವುದೇ ಅಹಿತಕರ ಘಟನೆ ನಡೆದಿಲ್ಲವಾದರೂ ಪ್ರತಿಭಟನೆ ಮುಂದುವರಿಕೆ.

ಜುಲೈ 18 ರಂದು ಸೊನಮ್ ಅವರನ್ನು ಬಲವಂತವಾಗಿ ಜಂತರ್ ಮಂತರ್ ಉಪವಾಸ ಪ್ರತಿಭಟನಾ ಸ್ಥಳದಿಂದ ಆಸ್ಪತ್ರೆಗೆ ದಾಖಲಿಸಿದ ದೆಹಲಿ ಪೊಲೀಸರು.


ಜುಲೈ 20 ರಂದು ಜಂತರ್ ಮಂತರ್‌ನಿಂದ ಸಂಸತ್ತಿನವರೆಗೆ ಸಾವಿರಾರು ವಿದ್ಯಾರ್ಥಿಗಳಿಂದ 'ಸಂಸದ್ ಚಲೊ' ಮೆರವಣಿಗೆ, ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ಸಂಘರ್ಷ. ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ್, ಅಶ್ರುವಾಯು ಪ್ರಯೋಗ ಮಾಡಲಾಗಿ ದೇಶದಾದ್ಯಂತ ಆಕ್ರೋಶ ವ್ಯಕ್ತವಾಯಿತು.

ಜುಲೈ 21 ರಂದು ದೆಹಲಿಯಲ್ಲಿ ವಿದ್ಯಾರ್ಥಿಗಳ ಮೇಲೆ ಪೊಲೀಸರ ದೌರ್ಜನ್ಯ ಖಂಡಿಸಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರಿಂದ ಪ್ರಧಾನಿ ನಿವಾಸದ ಎದುರು ಧರಣಿ. ವಿದ್ಯಾರ್ಥಿಗಳ ಮೇಲಿನ ಹಲ್ಲೆ ಖಂಡಿಸಿ ದೇಶದ ಹಲವೆಡೆ ಪ್ರತಿಭಟನೆಗಳಾದವು.

ಜುಲೈ 23 ರಂದು ಪರೀಕ್ಷಾ ಅಕ್ರಮ ತಡೆಗೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಂದ ಇನ್‌ಸ್ಟಾಗ್ರಾಂ ಮೂಲಕ ಭರವಸೆ ನೀಡುವ ವಿಡಿಯೋ ಬಿಡುಗಡೆಯಾಯಿತು.

ಜುಲೈ 24 ರಂದು ಸೊನಮ್ ಅವರಿಂದ ಉಪವಾಸ ಸತ್ಯಾಗ್ರಹ ಅಂತ್ಯ ಮಾಡಿ ಕೇಂದ್ರ ಸರ್ಕಾರಕ್ಕೆ ಬೆಂಬಲ ಸೂಚಿಸಿದರು.

ಜುಲೈ 25 ರಂದು 'ಜೆನ್–ಝೀ' ಪ್ರತಿಭಟನೆಗೆ ಮಣಿದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಂದ ರಾಜೀನಾಮೆ ಸಲ್ಲಿಕೆಯಾಗಿ ಸರ್ಕಾರದೊಂದಿಗೆ ನಡೆದ ಮಾತುಕತೆಯ ಬಳಿಕ ಪ್ರತಿಭಟನೆಯನ್ನು ವಾಪಸ್ ಪಡೆದ ಸಿಜೆಪಿಯ ಎಲ್ಲಾ ಬೆಂಬಲಿಗರು ಜಂತರ್ ಮಂತರ್ ಪ್ರತಿಭಟನಾ ಸ್ಥಳದಿಂದ ಶಾಂತಿಯುತವಾಗಿ ನಿರ್ಗಮಿಸಿದರು. ಕೆಲವರು ಮೊಬೈಲ್ ಪರದೆ ಮೇಲಿದ್ದ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪತ್ರದತ್ತ ಬೊಟ್ಟು ಮಾಡಿ ತೋರಿಸುತ್ತ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದ 'ಮೀಮ್' ಒಂದನ್ನು ಮರುಸೃಷ್ಟಿಸಿದರು. ಸೇರಿದ್ದ ಜನರನ್ನು ಹುರಿದುಂಬಿಸಿದರು. ಈ ರಾಜೀನಾಮೆ ತುಂಬಾ ಮೊದಲೇ ಆಗಬೇಕಿತ್ತು. ಹಾಗೆ ಆಗಿದ್ದರೆ ಸೊನಮ್ ವಾಂಗ್ಚಕ್ 11 ಕೆ.ಜಿ. ತೂಕ ಕಳೆದುಕೊಳ್ಳುತ್ತಿರಲಿಲ್ಲ. ಜನರು ರಕ್ತ ಹರಿಸುವ ಅಗತ್ಯವೂ ಬರುತ್ತಿರಲಿಲ್ಲ. ಘರ್ಷಣೆ, ಕ್ರೌರ್ಯ, ಅಶಾಂತಿಯನ್ನು ತಡೆಯಬಹುದಿತ್ತು ಎಂದು ಹೇಳಿ ಪ್ರತಿಭಟನಾ ಸ್ಥಳದಿಂದ ಮನೆಯತ್ತ ತೆರಳಿದರು. ಕಾರ್ತಿಕ್, 24 ವರ್ಷದ ಯುವಕ ಮಾತನಾಡುತ್ತ ಪ್ರತಿಭಟನೆ ಆರಂಭದ ದಿನದಿಂದ ಇಲ್ಲಿದ್ದೇನೆ. ಅಶ್ರುವಾಯು ದಾಳಿ ಎದುರಿಸಿದ್ದೇನೆ. ಜುಲೈ, 20ರ ಕ್ರೌರ್ಯಕ್ಕೆ ಸಾಕ್ಷಿಯಾದ ನೋವಿದೆ. ಆದರೆ, ಒಗ್ಗಟ್ಟಿನಿಂದ ಬದಲಾವಣೆ ತರಲು ಸಾಧ್ಯ ಎನ್ನುವುದು ಜೆನ್ ಯುವಕ–ಯುವತಿಯರಲ್ಲಿ ಆತ್ಮವಿಶ್ವಾಸ ಮತ್ತು ನಂಬಿಕೆ ಈ ಘಟನೆಯಿಂದ ಬಲಗೊಂಡಿದೆ.



ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

**ಕಥೆ–ಕವನ ಕಳುಹಿಸುವ ಮುನ್ನ**

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.
* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.
* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.
* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.
* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.
* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

**ಇ–ಬೆಂಗಳೂರು ಬೆರಗು ವಿಳಾಸ:** ಇ–ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು–560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# ಕರ್ನಾಟಕ ಸಚಿವ ಸಂಪುಟ ವಿಸ್ತರಣೆ: ಹೈಕಮಾಂಡ್ ತೀರ್ಮಾನದತ್ತ ರಾಜ್ಯದ ಗಮನ



**ಹ**ಲವು ತಿಂಗಳುಗಳಿಂದ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದ್ದ ಕರ್ನಾಟಕ ಸಚಿವ ಸಂಪುಟ ವಿಸ್ತರಣೆಗೆ ಅಂತಿಮ ರೂಪ ನೀಡುವ ಪ್ರಕ್ರಿಯೆ ಇದೀಗ ವೇಗ ಪಡೆದುಕೊಂಡಿದೆ. ಆಡಳಿತದ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು, ಪ್ರಾದೇಶಿಕ ಹಾಗೂ ಸಾಮಾಜಿಕ ಸಮತೋಲನವನ್ನು ಕಾಪಾಡುವುದು ಮತ್ತು ಪಕ್ಷದೊಳಗಿನ ಅಸಮಾಧಾನವನ್ನು ಶಮನಗೊಳಿಸುವ ಉದ್ದೇಶದಿಂದ ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಜ್ಯ ನಾಯಕತ್ವ ಮಹತ್ವದ ಸಮಾಲೋಚನೆಗಳನ್ನು ನಡೆಸುತ್ತಿದೆ. ಈ ಬೆಳವಣಿಗೆ ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ. ಸಚಿವ ಸಂಪುಟ ವಿಸ್ತರಣೆ ಕುರಿತು ಕಳೆದ ಹಲವು ತಿಂಗಳುಗಳಿಂದ ವಿವಿಧ ಶಾಸಕರು ಹಾಗೂ ಪಕ್ಷದ ಹಿರಿಯ ಮುಖಂಡರು ತಮ್ಮ ನಿರೀಕ್ಷೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಕೆಲವರು ಸಚಿವ ಸ್ಥಾನಕ್ಕಾಗಿ ಬಹಿರಂಗವಾಗಿಯೇ ಬೇಡಿಕೆ ಇಟ್ಟರೆ, ಇನ್ನೂ ಕೆಲವರು ತಮ್ಮ ಅನುಭವ ಮತ್ತು ಹಿರಿಯತೆಯನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ. ಮತ್ತೊಂದೆಡೆ, ಯುವ ನಾಯಕರಿಗೂ ಅವಕಾಶ ನೀಡಬೇಕು ಎಂಬ ಅಭಿಪ್ರಾಯವೂ ಪಕ್ಷದೊಳಗೆ ಕೇಳಿಬಂದಿದೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ದೆಹಲಿಯಲ್ಲಿ ಪಕ್ಷದ ರಾಷ್ಟ್ರೀಯ ನಾಯಕರೊಂದಿಗೆ ನಡೆಸುತ್ತಿರುವ ಮಾತುಕತೆಗಳ ಬಳಿಕ ಅಂತಿಮ ಪಟ್ಟಿಗೆ ರೂಪ ಸಿಗುವ ಸಾಧ್ಯತೆ ಹೆಚ್ಚಿದೆ. ಕಾಂಗ್ರೆಸ್ ಅಧ್ಯಕ್ಷರು ಹಾಗೂ ಹೈಕಮಾಂಡ್ ನಾಯಕರು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ. ಈ ಬಾರಿ ಸಚಿವ ಸಂಪುಟ ವಿಸ್ತರಣೆಯಲ್ಲಿ ಹಲವು ಅಂಶಗಳಿಗೆ ಆದ್ಯತೆ ನೀಡುವ ಸಾಧ್ಯತೆ ಇದೆ. ಪ್ರಾದೇಶಿಕ ಸಮತೋಲನ, ಜಾತಿ ಮತ್ತು ಸಮುದಾಯಗಳ ಪ್ರತಿನಿಧಿತ್ವ, ಮಹಿಳೆಯರಿಗೆ ಹೆಚ್ಚಿನ ಅವಕಾಶ, ಯುವ ಶಾಸಕರಿಗೆ ಉತ್ತೇಜನ ಹಾಗೂ ಆಡಳಿತಾತ್ಮಕ ಅನುಭವ ಹೊಂದಿರುವ ನಾಯಕರಿಗೆ ಸಚಿವ ಸ್ಥಾನ ನೀಡುವ ಕುರಿತು ಚರ್ಚೆಗಳು ನಡೆದಿವೆ ಎಂದು ಹೇಳಲಾಗುತ್ತಿದೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ಮುಂದಿನ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ರಾಜಕೀಯ ಲೆಕ್ಕಾಚಾರವೂ ನಡೆಯುತ್ತಿದೆ. ಶ್ರೀ ಡಿ.ಕೆ. ಶಿವಕುಮಾರ್‌ರವರು ಮುಖ್ಯಮಂತ್ರಿಯಾಗಿ ಜೂನ್ 3 ರಂದು ಪ್ರಮಾಣ ವಚನ ಸ್ವೀಕರಿಸಿದ ದಿನದಿಂದ ಹಳೆಯ 12 ಹಿರಿಯ ಮಂತ್ರಿಗಳನ್ನು ಹೊರತುಪಡಿಸಿ ಇನ್ನುಳಿದ 124 ಶಾಸಕರು ಮಂತ್ರಿಯಾಗಲು ತುದಿಗಾಲಲ್ಲಿ ನಿಂತಿದ್ದು, ಹೈಕಮಾಂಡ್ ಒಲಿಸುವ ಪ್ರಯತ್ನವನ್ನು ದೆಹಲಿಯಾತ್ರೆ ಕೈಗೊಳ್ಳುವ ಮೂಲಕ ಹಲವಾರು ಬಾರಿ ಒತ್ತಡ ತಂದಿದ್ದರು. ಆದರೆ ಮೇ 23 ರಂದು ಸಿದ್ಧರಾಮಯ್ಯನವರು ರಾಜಿನಾಮೆ ನೀಡಿದ ನಂತರ ಅಲ್ಲಿಯುವರೆಗೂ ತಾವು ಮಂತ್ರಿಯಾಗಬಹುದೆಂದು ಆಶಾಭಾವನೆಯಲ್ಲಿದ್ದ ಮೂರು ವರ್ಷಗಳಿಂದ ಕನಸು ಕಾಣುತ್ತಿದ್ದ 124 ಶಾಸಕರಲ್ಲಿ ಯತೀಂದ್ರ ಸಿದ್ಧರಾಮಯ್ಯನವರನ್ನು ಹೊರತುಪಡಿಸಿ ಉಳಿದವರಾರಿಗೂ ಅವಕಾಶ ಸಿಗದಿರುವುದೇ ಆತಂಕ ಸೃಷ್ಟಿಸುವ ಸನ್ನಿವೇಶವು ಕಾಂಗ್ರೆಸ್ ಪಕ್ಷದಲ್ಲಿ ಬರಬಹುದೆಂದು ರಾಜಕೀಯ ವಿಶ್ಲೇಷಕರು ಪ್ರತಿಪಾದಿಸುತ್ತಿದ್ದಾರೆ. ವಿರೋಧ ಪಕ್ಷಗಳು ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಸರ್ಕಾರವನ್ನು ಟೀಕಿಸುತ್ತಿದ್ದು, ಆಡಳಿತದ ಸಾಧನೆಗಿಂತ ಒಳರಾಜಕೀಯಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ ಎಂದು ಆರೋಪಿಸಿವೆ. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ನಾಯಕರು, ಜನರ ಅಭಿವೃದ್ಧಿಯೇ ಸರ್ಕಾರದ ಮೊದಲ ಆದ್ಯತೆ ಹಾಗೂ ಸಚಿವ ಸಂಪುಟ ವಿಸ್ತರಣೆ ಆಡಳಿತವನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ. ರಾಜ್ಯದ ಜನತೆ ಇದೀಗ ಸಚಿವ ಸಂಪುಟ ವಿಸ್ತರಣೆಯ ಅಧಿಕೃತ ಘೋಷಣೆಯತ್ತ ಕಾತರದಿಂದ ಕಾಯುತ್ತಿದ್ದಾರೆ. ಯಾರಿಗೆ ಸಚಿವ ಸ್ಥಾನ ದೊರೆಯಲಿದೆ, ಯಾವ ಇಲಾಖೆಗಳ ಹಂಚಿಕೆ ನಡೆಯಲಿದೆ ಹಾಗೂ ಸರ್ಕಾರ ಯಾವ ಹೊಸ ರಾಜಕೀಯ ಸಂದೇಶ ನೀಡಲಿದೆ ಎಂಬುದು ಮುಂದಿನ ಕೆಲ ದಿನಗಳಲ್ಲಿ ಸ್ಪಷ್ಟವಾಗಲಿದೆ. ಹೈಕಮಾಂಡ್ ಅಂತಿಮ ತೀರ್ಮಾನ ಪ್ರಕಟಿಸಿದ ಬಳಿಕ ರಾಜ್ಯ ರಾಜಕೀಯದಲ್ಲಿ ಹೊಸ ಸಮೀಕರಣಗಳು ರೂಪುಗೊಳ್ಳುವ ಸಾಧ್ಯತೆ ಇದೆ. ಸಚಿವ ಸಂಪುಟ ವಿಸ್ತರಣೆ ಆಡಳಿತದ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರ ಜೊತೆಗೆ ಕಾಂಗ್ರೆಸ್ ಸರ್ಕಾರದ ರಾಜಕೀಯ ದಿಕ್ಕನ್ನೂ ನಿರ್ಧರಿಸುವ ಮಹತ್ವದ ಬೆಳವಣಿಗೆಯಾಗಲಿದೆ.

**ಸಂಭಾವ್ಯ ಸಚಿವರ ಎರಡನೇ ಪಟ್ಟಿ**

ಬೆಳಗಾವಿ – ಲಕ್ಷ್ಮಣ ಸವದಿ

ಬಾಗಲಕೋಟೆ–ವಿಜಯಾನಂದ ಕಾಶಪ್ಪನವರ್

ವಿಜಯಪುರ–ಯಶವಂತರಾಯಗೌಡ ಪಾಟೀಲ್

ಕಲಬುರಗಿ – ಡಾ. ಅಜಯ್ ಸಿಂಗ್

ಕೊಪ್ಪಳ – ರಾಘವೇಂದ್ರ ಹಿಟ್ನಾಳ್

ಧಾರವಾಡ – ಅಬ್ಬಯ್ಯ ಪ್ರಸಾದ್

ಹಾವೇರಿ – ಶ್ರೀನಿವಾಸ ಮಾನೆ

ಚಿತ್ರದುರ್ಗ – ಟಿ.ರಘುಮೂರ್ತಿ

ದಾವಣಗೆರೆ – ಎಸ್.ಎಸ್.ಮಲ್ಲಿಕಾರ್ಜುನ್

ಶಿವಮೊಗ್ಗ – ಮಧು ಬಂಗಾರಪ್ಪ

ಚಿಕ್ಕಬಳ್ಳಾಪುರ – ಎಸ್.ಎನ್. ಸುಬ್ಬಾರೆಡ್ಡಿ

ಕೋಲಾರ – ಎಂ. ರೂಪಕಲಾ

ಬೆಂಗಳೂರು – ಜಮೀರ್ ಅಹಮದ್ ಖಾನ್

ಮಂಡ್ಯ – ಪಿ.ಎಂ. ನರೇಂದ್ರಸ್ವಾಮಿ

ಮೈಸೂರು – ತನ್ವೀರ್ ಸೇಠ್

ಚಾಮರಾಜನಗರ – ಸಿ. ಪುಟ್ಟರಂಗಶೆಟ್ಟಿ

# ಹರ್ಷದ್ ಮೆಹ್ತಾ ಹಗರಣವನ್ನು ಬಯಲಿಗೆಳೆದ ಧೈರ್ಯಶಾಲಿ ಪತ್ರಕರ್ತೆ: ಸುಚೇತಾ ದಲಾಲ್



**1**990ರ ದಶಕದ ಆರಂಭದಲ್ಲಿ ಭಾರತದ ಷೇರು ಮಾರುಕಟ್ಟೆಯಲ್ಲಿ ಹರ್ಷದ್ ಮೆಹ್ತಾ ಎಂಬ ಹೆಸರು ಸಂಚಲನ ಮೂಡಿಸಿತ್ತು. ಬ್ಯಾಂಕುಗಳಿಂದ ನಕಲಿ ಬ್ಯಾಂಕ್ ರಸೀದಿಗಳು (Fake Bank Receipts) ಹಾಗೂ ಹಣಕಾಸು ವ್ಯವಸ್ಥೆಯಲ್ಲಿದ್ದ ಲೋಪಗಳನ್ನು ಬಳಸಿಕೊಂಡು ಸಾವಿರಾರು ಕೋಟಿ ರೂಪಾಯಿಗಳ ಸಾರ್ವಜನಿಕ ಹಣವನ್ನು ಪಡೆದು, ಅದನ್ನು ಷೇರು ಮಾರುಕಟ್ಟೆಗೆ ಹರಿಸಿ ಷೇರುಗಳ ಬೆಲೆಯನ್ನು ಕೃತಕವಾಗಿ ಏರಿಸುತ್ತಿದ್ದನು. ಈ ಅಕ್ರಮದ ಬಗ್ಗೆ ಅನುಮಾನ ವ್ಯಕ್ತಪಡಿಸಿದವರು ಹಿರಿಯ ಹಣಕಾಸು ಪತ್ರಕರ್ತೆ ಸುಚೇತಾ ದಲಾಲ್. ಅವರು ನಡೆಸಿದ ತನಿಖೆಯ ಫಲವಾಗಿ 1992ರ ಏಪ್ರಿಲ್ 23ರಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಮಹತ್ವದ ವರದಿ ಪ್ರಕಟವಾಯಿತು. ಆ ವರದಿ ದೇಶವನ್ನೇ ಬೆಚ್ಚಿಬೀಳುವಂತೆ ಮಾಡಿತು. ವಿಶೇಷವಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ಸೇರಿದಂತೆ ಹಲವು ಬ್ಯಾಂಕುಗಳ ಹಣ ಹರ್ಷದ್ ಮೆಹ್ತಾ ವ್ಯವಹಾರಗಳಿಗೆ ಸಂಬಂಧಿಸಿರುವುದು ಬೆಳಕಿಗೆ ಬಂತು. ಈ ಬಹಿರಂಗದ ನಂತರ ಷೇರು ಮಾರುಕಟ್ಟೆಯಲ್ಲಿ ಭಾರೀ ಕುಸಿತ ಉಂಟಾಯಿತು. ಹೂಡಿಕೆದಾರರು ಸಾವಿರಾರು ಕೋಟಿ ರೂಪಾಯಿ ನಷ್ಟ ಅನುಭವಿಸಿದರು. ಈ ಪ್ರಕರಣವು ಭಾರತದ ಅತಿದೊಡ್ಡ ಹಣಕಾಸು ಹಗರಣಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿತು. ಸುಚೇತಾ ದಲಾಲ್ ಅವರ ವರದಿಯ ಪರಿಣಾಮವಾಗಿ ಸರ್ಕಾರ ಮತ್ತು ನಿಯಂತ್ರಣ ಸಂಸ್ಥೆಗಳು ಹಣಕಾಸು ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆಗಳನ್ನು ಕೈಗೊಂಡವು.

ಷೇರು ಮಾರುಕಟ್ಟೆಯ ಮೇಲ್ವಿಚಾರಣೆ ಮತ್ತು ಪಾರದರ್ಶಕತೆಯನ್ನು ಬಲಪಡಿಸಲು ನಿಯಂತ್ರಣ ವ್ಯವಸ್ಥೆಯನ್ನು ಇನ್ನಷ್ಟು ಕಠಿಣಗೊಳಿಸಲಾಯಿತು. ಬ್ಯಾಂಕಿಂಗ್ ಮತ್ತು ಸೆಕ್ಯುರಿಟೀಸ್ ವ್ಯವಹಾರಗಳಲ್ಲಿ ಹಲವು ನಿಯಮಗಳನ್ನು ಬದಲಾಯಿಸಲಾಯಿತು. ಹಲವಾರು ವರ್ಷಗಳ ನಂತರ ಹರ್ಷದ್ ಮೆಹ್ತಾ ಜೀವನಾಧಾರಿತ ವೆಬ್ ಸರಣಿ ಬಿಡುಗಡೆಯಾಗಿ ಮತ್ತೆ ಈ ಹಗರಣ ಜನರ ಗಮನ ಸೆಳೆಯಿತು. ಆದರೆ ಆ ಕಥೆಯ ಹಿಂದೆ, ಜನಪ್ರಿಯತೆಯ ಹೊಳಪಿಗೆ ಮರುಳಾಗದೆ "ಈ ಹಣ ಎಲ್ಲಿಂದ ಬರುತ್ತಿದೆ?" ಎಂಬ ಸರಳ ಪ್ರಶ್ನೆಯನ್ನು ಕೇಳಿದ ಒಬ್ಬ ಪತ್ರಕರ್ತೆ ಇದ್ದರು. ಅವರ ತನಿಖಾ ಪತ್ರಿಕೋದ್ಯಮವೇ ದೇಶದ ಹಣಕಾಸು ಇತಿಹಾಸವನ್ನು ಬದಲಿಸಿತು. ಸುಚೇತಾ ದಲಾಲ್ ಅವರ ಕೆಲಸವು ನಿಷ್ಠಾವಂತ ಪತ್ರಿಕೋದ್ಯಮವು ಸಮಾಜದಲ್ಲಿ ಎಷ್ಟು ದೊಡ್ಡ ಬದಲಾವಣೆ ತರಬಲ್ಲದು ಎಂಬುದಕ್ಕೆ ಇಂದಿಗೂ ಅತ್ಯುತ್ತಮ ಉದಾಹರಣೆಯಾಗಿದೆ.

ಹರ್ಷದ್ ಮೆಹ್ತಾ ಮೇಲಿನ ಕಾನೂನು ಕ್ರಮಗಳು ಮತ್ತು ಹಗರಣದ ತನಿಖೆಯು 1992ರ ಹಗರಣ ಬಯಲಿಗೆ ಬಂದ ನಂತರ ಪ್ರಾರಂಭವಾಗಿ ಹರ್ಷದ್ ಮೆಹ್ತಾ ಮತ್ತು ಅವರ ಸಹಚರರನ್ನು ಬಂಧಿಸಿ ಕಾನೂನು ವ್ಯವಸ್ಥೆಯು ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲಾಯಿತು.

1. ಸಿಬಿಐ (CBI) ತನಿಖೆ ಮತ್ತು ಬಂಧನ–ಸುಚೇತಾ ದಲಾಲ್ ಅವರ ವರದಿ ಪ್ರಕಟವಾದ ಕೆಲವೇ ದಿನಗಳ ನಂತರ, ಜೂನ್ 1992ರಲ್ಲಿ ಕೇಂದ್ರೀಯ ತನಿಖಾ ದಳ (CBI) ಹರ್ಷದ್ ಮೆಹ್ತಾ ಮತ್ತು ಅವರ ಸಹೋದರ ಅಶ್ವಿನ್ ಮೆಹ್ತಾರನ್ನು ಬಂಧಿಸಿತು. ಅವರ ಮೇಲೆ ವಂಚನೆ, ನಕಲಿ ದಾಖಲೆ ಸೃಷ್ಟಿ, ಬ್ಯಾಂಕ್ ನಿಯಮಗಳ ಉಲ್ಲಂಘನೆ ಮತ್ತು ಸಾರ್ವಜನಿಕ ಹಣದ ದುರ್ಬಳಕೆ ಸೇರಿದಂತೆ 70 ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಯಿತು. ಈ ಹಗರಣವು ಇಡೀ ದೇಶವನ್ನು ಬೆಚ್ಚಿಬೀಳಿಸಿದ್ದರಿಂದ, ಭಾರತ ಸರ್ಕಾರವು ಸಂಸತ್ತಿನ ಉಭಯ ಸದನಗಳ ಸದಸ್ಯರನ್ನು ಒಳಗೊಂಡ 'ಜಂಟಿ ಸಂಸದೀಯ ಸಮಿತಿ'ಯನ್ನು (Joint Parliamentary Committee) ರಚಿಸಿತು. ಈ ಸಮಿತಿಯು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿದ್ದ ರಾಜಕೀಯ ಮತ್ತು ಆಡಳಿತಾತ್ಮಕ ಲೋಪದೋಷಗಳನ್ನು ಕೂಲಂಕಷವಾಗಿ ಪರಿಶೀಲಿಸಿತು. ಹಗರಣದ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ಸರ್ಕಾರವು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿತು.

ಸುದೀರ್ಘವಾದ ತನಿಖೆ ಮತ್ತು ವಿಚಾರಣೆಗಳ ನಂತರ ಸೆಪ್ಟೆಂಬರ್ 1999 ರಲ್ಲಿ, ಮುಂಬೈ ಹೈಕೋರ್ಟ್ ಹರ್ಷದ್ ಮೆಹ್ತಾಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಹಣ ದುರ್ಬಳಕೆ ಪ್ರಕರಣದಲ್ಲಿ 5 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ರೂ. 25,000 ಕ್ಕೂ ಹೆಚ್ಚು ದಂಡವನ್ನು ವಿಧಿಸಿತು. ನಂತರ ಸುಪ್ರೀಂಕೋರ್ಟ್ ಕೂಡ ಈ ಶಿಕ್ಷೆಯನ್ನು ಎತ್ತಿಹಿಡಿಯಿತು. ಹರ್ಷದ್ ಮೆಹ್ತಾ ಮತ್ತು ಅವರ ಕುಟುಂಬದ ಹೆಸರಲ್ಲಿದ್ದ ಮುಂಬೈನ ಸಮುದ್ರಕ್ಕೆ ಮುಖ ಮಾಡಿದ್ದ ಐಷಾರಾಮಿ ಪೆಂಟ್‌ಹೌಸ್, ನೂರಾರು ಕೋಟಿ ಮೌಲ್ಯದ ವಿದೇಶಿ ಕಾರುಗಳು ಮತ್ತು ಷೇರುಗಳನ್ನು ಸರ್ಕಾರ ಜಪ್ತಿ ಮಾಡಿತು. ಬ್ಯಾಂಕುಗಳಿಗೆ ಆಗಿದ್ದ ನಷ್ಟವನ್ನು ಸರಿದೂಗಿಸಲು ಈ ಆಸ್ತಿಗಳನ್ನು ಹರಾಜು ಹಾಕಲಾಯಿತು. ಹಲವಾರು ಪ್ರಕರಣಗಳಲ್ಲಿ ಜಾಮೀನು ಪಡೆದಿದ್ದ ಮೆಹ್ತಾರನ್ನು 2001 ರ ಕೊನೆಯಲ್ಲಿ ಮತ್ತೊಂದು ವಂಚನೆ ಪ್ರಕರಣದಲ್ಲಿ ಮತ್ತೆ ಬಂಧಿಸಿ ಮಹಾರಾಷ್ಟ್ರದ ಥಾಣೆ ಜೈಲಿನಲ್ಲಿ ಇಡಲಾಗಿತ್ತು.

ಡಿಸೆಂಬರ್ 31, 2001 ರಂದು ಜೈಲಿನಲ್ಲಿದ್ದಾಗಲೇ ಅವರಿಗೆ ತೀವ್ರ ಹೃದಯಾಘಾತವಾಯಿತು. ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ತಮ್ಮ 47ನೇ ವಯಸ್ಸಿನಲ್ಲಿ ಅವರು ನಿಧನರಾದರು. ಅವರ ಸಾವಿನೊಂದಿಗೆ ಹಲವು ಪ್ರಕರಣಗಳ ವಿಚಾರಣೆಗಳು ಅಲ್ಲಿಗೇ ಕೊನೆಗೊಂಡವು. ಈ ಹಗರಣದ ತರುವಾಯ ಭಾರತದ ಷೇರು ಮಾರುಕಟ್ಟೆ ಡಿಜಿಟಲ್ ರೂಪಕ್ಕೆ ಬದಲಾಯಿತು.

# ಈ ಸಾವು ನ್ಯಾಯವೇ?



**ದ**ಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಅತ್ಯಂತ ನಡುಕ ಹುಟ್ಟಿಸುವ ಘಟನೆಯೊಂದು ಜುಲೈ 16ರ ಗುರುವಾರ ನಡೆದಿದೆ. ಇಲ್ಲಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರ ಕಣ್ಣೆದುರೇ ಯುವತಿಯೊಬ್ಬಳನ್ನು ಮಾರಕಾಸ್ತ್ರದಿಂದ ಕೊಚ್ಚಿ ಅಮಾನುಷವಾಗಿ ಕೊಲೆ ಮಾಡಲಾಗಿದೆ. ಬಂಟ್ವಾಳದ ಉಳಿಗ್ರಾಮದ ನಿವಾಸಿಯಾದ ಲಾವಣ್ಯ (21) ಕೊಲೆಯಾದ ದುರ್ದೈವಿ. ಕಲ್ಲಡ್ಕದ ಖಾಸಗಿ ನರ್ಸಿಂಗ್ ಹೋಂ ಒಂದರಲ್ಲಿ ಕೆಲಸ ಮಾಡುತ್ತಿದ್ದ ಈಕೆಯನ್ನು ಹತ್ಯೆ ಮಾಡಿದ ಆರೋಪಿಯನ್ನು ಬೆಳ್ತಂಗಡಿಯ ಒಡಿಲ್ನಾಳ ನಿವಾಸಿ ಚೇತನ್ (22) ಎಂದು ಗುರುತಿಸಲಾಗಿದೆ.

ಈ ಘಟನೆಯು ಮಹಿಳೆಯರ ಸುರಕ್ಷತೆ ಮತ್ತು ಸ್ಟಾಕಿಂಗ್ (ಬೆನ್ನಟ್ಟುವುದು) ಕುರಿತು ದೇಶಾದ್ಯಂತ ತೀವ್ರ ಆಕ್ರೋಶ ಮತ್ತು ಪ್ರತಿಭಟನೆಗಳಿಗೆ ಕಾರಣವಾಯಿತು.

ಘಟನೆಯ ಹಿನ್ನೆಲೆಯ ಪ್ರಕಾರ, ಲಾವಣ್ಯ ಅವರು ಎಂದಿನಂತೆ ಕಕ್ಯಪದವು ಕಡೆಗೆ ಪ್ರಯಾಣಿಸಲು ಬಸ್ ನಿಲ್ದಾಣದಲ್ಲಿದ್ದ ಕೆಎಸ್‌ಆರ್‌ಟಿಸಿ ಬಸ್ ಹತ್ತಿದ್ದರು. ಬಸ್ಸಿನಲ್ಲಿ ಕುಳಿತಿದ್ದಾಗ ಆಕೆಗೆ ಅಪರಿಚಿತ ಯುವಕನ ವರ್ತನೆ ಅನುಮಾನ ತಂದಿದ್ದು, ತಕ್ಷಣವೇ ತನ್ನ ಸಂಬಂಧಿಕರೊಬ್ಬರಿಗೆ ಮೊಬೈಲ್ ಕರೆ ಮಾಡಿ, 'ನನ್ನ ಪಕ್ಕದಲ್ಲಿ ಒಬ್ಬ ಯುವಕ ಬಂದು ಕುಳಿತಿದ್ದಾನೆ' ಎಂದು ಆತಂಕದಿಂದ ತಿಳಿಸಿದ್ದರು. ಆದರೆ, ಅಷ್ಟರಲ್ಲೇ ಫೋನ್ ಸಂಪರ್ಕ ಕಡಿತಗೊಂಡಿತ್ತು. ಬಳಿಕ ಲಾವಣ್ಯ ಬಸ್ಸಿನಿಂದ ಕೆಳಗಿಳಿಯುತ್ತಿದ್ದಂತೆ, ಹಠಾತ್ತನೆ ಹಿಂಬಾಲಿಸಿದ ಆ ಯುವಕ ತನ್ನ ಬ್ಯಾಗಿನಿಂದ ತೀಕ್ಷ್ಣವಾದ ಮಚ್ಚನ್ನು ಹೊರತೆಗೆದು ಆಕೆಯ ಮೇಲೆ ಮುಗಿಬಿದ್ದಿದ್ದಾನೆ.

ಪ್ರತ್ಯಕ್ಷದರ್ಶಿಗಳು ನೀಡಿರುವ ಮಾಹಿತಿ ಪ್ರಕಾರ, ರಕ್ತಪಿಪಾಸು ಯುವಕನಿಂದ ತನ್ನ ಪ್ರಾಣ ಉಳಿಸಿಕೊಳ್ಳಲು ಲಾವಣ್ಯ ತೀವ್ರವಾಗಿ ಹೋರಾಡಿದ್ದಾಳೆ. ಆದಾಗ್ಯೂ, ಮೃಗೀಯವಾಗಿ ಆಕೆಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ ಪರಿಣಾಮವಾಗಿ ಗಂಭೀರವಾದ ಗಾಯಗಳಾಗಿ ಯುವತಿ ಸ್ಥಳದಲ್ಲೇ ರಕ್ತದ ಮಡುವಿನಲ್ಲಿ ಕೊನೆಯುಸಿರೆಳೆದಿದ್ದಾಳೆ. ಕೃತ್ಯ ಎಸಗಿದ ತಕ್ಷಣವೇ ಆರೋಪಿ ಚೇತನ್ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಈ ಇಡೀ ಭೀಕರ ದಾಳಿಯ ದೃಶ್ಯಗಳನ್ನು ಸ್ಥಳದಲ್ಲಿದ್ದ ಪ್ರವಾಸಿ ಅಥವಾ ಸಾರ್ವಜನಿಕರೊಬ್ಬರು ರಹಸ್ಯವಾಗಿ ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ. ಪ್ರಸ್ತುತ ಈ ವಿಡಿಯೋ ಕ್ಲಿಪ್ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರವಾಗಿ ಹರಿದಾಡುತ್ತಿದ್ದು, ಆರೋಪಿಯ ಪತ್ತೆಗೆ ಪೊಲೀಸರಿಗೆ ಇದು ಅತ್ಯಂತ ಪ್ರಮುಖ ಸಾಕ್ಷ್ಯವಾಗುವ ಸಾಧ್ಯತೆಯಿದೆ. ಈ ಪ್ರಕರಣವು ನಮ್ಮ ನಾಡಿಗೆ ಮೊದಲನೆದಲ್ಲ.

ಈ ಹಿಂದೆ 2024 ರಲ್ಲಿ ನೇಹಾ ಹಿರೇಮಠ ಕೊಲೆ ಪ್ರಕರಣವು 2024ರ ಏಪ್ರಿಲ್ 18 ರಂದು ಉತ್ತರ ಕರ್ನಾಟಕದ ಹುಬ್ಬಳ್ಳಿಯ ಬಿ.ವಿ.ಬಿ (BVB) ಕಾಲೇಜು ಆವರಣದಲ್ಲಿ ನಡೆಯಿತು. 23 ವರ್ಷದ ಹಿಂದೂ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರನ್ನು ಆಕೆಯ ಮಾಜಿ ಸಹಪಾಠಿ ಫಯಾಜ್ ಎಂಬಾತ ಚಾಕುವಿನಿಂದ ಇರಿದು ಕೊಲೆ ಮಾಡಿದನು.

ನೇಹಾ ಹಿರೇಮಠವರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಕಾಂಗ್ರೆಸ್ ಕಾರ್ಪೊರೇಟರ್ ನಿರಂಜನ್ ಹಿರೇಮಠ ಅವರ ಪುತ್ರಿ. ಈಕೆ ಎಂ.ಸಿ.ಎ (MCA) ವಿದ್ಯಾರ್ಥಿನಿಯಾಗಿದ್ದರು.

ಈ ಘಟನೆಯು ಕರ್ನಾಟಕದಲ್ಲಿ ದೊಡ್ಡ ರಾಜಕೀಯ ಸಂಚಲನ ಮೂಡಿಸಿತು. ವಿರೋಧ ಪಕ್ಷವಾದ ಬಿಜೆಪಿ (BJP) ಇದನ್ನು "ಲವ್ ಜಿಹಾದ್" ಪ್ರಕರಣ ಎಂದು ಕರೆದು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತು. ಆದರೆ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಮತ್ತು ಪೊಲೀಸರು ಇದು ಪ್ರೀತಿಯ ತಿರಸ್ಕಾರ ಮತ್ತು ವೈಯಕ್ತಿಕ ದ್ವೇಷದಿಂದ ನಡೆದ ಕೊಲೆ ಎಂದು ತಿಳಿಸಿದರು.

ಎಬಿವಿಪಿ (ABVP) ಸೇರಿದಂತೆ ಹಲವು ವಿದ್ಯಾರ್ಥಿ ಸಂಘಟನೆಗಳು ಕಾಲೇಜು ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿನಿಯರ ರಕ್ಷಣೆಗಾಗಿ ಮತ್ತು ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವಂತೆ ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದವು. 2025ರ ಅರಂಭದಲ್ಲಿ ನೇಹಾ ಪೋಷಕರು ಈ ಪ್ರಕರಣದ ತನಿಖೆಯನ್ನು ಸಿಬಿಐ (CBI) ಗೆ ವಹಿಸುವಂತೆ ಅಧಿಕೃತವಾಗಿ ವಿನಂತಿಸಿದರು.

ಮೂರನೆ ಪ್ರಕರಣವು ನಗರದ ಹೊರವಲಯದ ರಾಜಾನುಕುಂಟೆ ಸಮೀಪದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿನಿಯೊಬ್ಬಳು ಹತ್ಯೆಗೆ ಒಳಗಾದ ಘಟನೆ ರಾಜ್ಯಾದ್ಯಂತ ತೀವ್ರ ಆಘಾತಕ್ಕೆ ಕಾರಣವಾಗಿದೆ. ಬಿ.ಟೆಕ್ ಪ್ರಥಮ ವರ್ಷದ ವಿದ್ಯಾರ್ಥಿನಿ ಲಯಸ್ಮಿತಾ ಅವರನ್ನು ಪರಿಚಿತನಾಗಿದ್ದ ಯುವಕ ಚಾಕುವಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ ಎಂದು ಪೊಲೀಸ್ ತನಿಖೆಯಲ್ಲಿ ತಿಳಿದುಬಂದಿದೆ. ಘಟನೆಯ ಬಳಿಕ ಆರೋಪಿ ತನ್ನ ಮೇಲೆಯೂ ಹಲ್ಲೆ ಮಾಡಿಕೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಪೊಲೀಸರ ಪ್ರಕಾರ, ಆರೋಪಿ ಯುವಕ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಪ್ರವೇಶಿಸಿ ವಿದ್ಯಾರ್ಥಿನಿಯನ್ನು ಮಾತನಾಡುವ ನೆಪದಲ್ಲಿ ಹೊರಗೆ ಕರೆದುಕೊಂಡು ಹೋಗಿದ್ದನು. ಬಳಿಕ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, ಆಕ್ರೋಶಗೊಂಡ ಆರೋಪಿ ಚಾಕುವಿನಿಂದ ಹಲವು ಬಾರಿ ಇರಿದಿದ್ದಾನೆ ಎಂದು ಹೇಳಲಾಗಿದೆ. ವಿದ್ಯಾರ್ಥಿನಿಯನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ವೈದ್ಯರು ಮೃತಪಟ್ಟಿರುವುದಾಗಿ ಘೋಷಿಸಿದರು.

ಈ ಘಟನೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರಲ್ಲಿ ಆತಂಕ ಉಂಟುಮಾಡಿದೆ. ಕ್ಯಾಂಪಸ್‌ಗೆ ಹೊರಗಿನ ವ್ಯಕ್ತಿಗಳು ಹೇಗೆ ಸುಲಭವಾಗಿ ಪ್ರವೇಶಿಸುತ್ತಾರೆ? ವಿದ್ಯಾರ್ಥಿಗಳ ಸುರಕ್ಷತೆಗೆ ಅಗತ್ಯ ಭದ್ರತಾ ಕ್ರಮಗಳು ಸಮರ್ಪಕವಾಗಿವೆಯೇ? ಎಂಬ ಪ್ರಶ್ನೆಗಳು ಮತ್ತೆ ಉದ್ಭವಿಸಿವೆ. ಘಟನೆ ಹಿನ್ನೆಲೆಯಲ್ಲಿ ಪೊಲೀಸರು ಕಾಲೇಜು ಆಡಳಿತದ ವಿರುದ್ಧವೂ ಭದ್ರತಾ ಲೋಪದ ಕುರಿತು ಪ್ರಕರಣ ದಾಖಲಿಸಿದ್ದಾರೆ.

ಶೈಕ್ಷಣಿಕ ಸಂಸ್ಥೆಗಳು ಕೇವಲ ವಿದ್ಯಾಭ್ಯಾಸದ ಕೇಂದ್ರಗಳಷ್ಟೇ ಅಲ್ಲ, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಮಾನಸಿಕ ನೆಮ್ಮದಿಯನ್ನೂ ಖಾತ್ರಿಪಡಿಸಬೇಕಾಗಿದೆ. ಕ್ಯಾಂಪಸ್‌ಗಳಲ್ಲಿ ಸಿಸಿಟಿವಿ ನಿಗಾ, ಪ್ರವೇಶ ನಿಯಂತ್ರಣ ವ್ಯವಸ್ಥೆ ಹಾಗೂ ಸಮರ್ಪಕ ಭದ್ರತಾ ಸಿಬ್ಬಂದಿ ವ್ಯವಸ್ಥೆ ಅಗತ್ಯವಾಗಿದೆ. ಇನ್ನು ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸಿ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸುರಕ್ಷಿತೆ ಮತ್ತು ಜೀವಭದ್ರತೆ ವಹಿಸಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದ್ದು ಈ ನಿಟ್ಟಿನಲ್ಲಿ ರಾಜ್ಯಸರ್ಕಾರವು ಏನು ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂಬುದು ಕಾದುನೋಡಬೇಕಿದೆ.

# ತಮಿಳುನಾಡಿಗೆ 15 ದಿನ 3.500 ಕ್ಯೂಸೆಕ್ ನೀರು ಬಿಡಲು ಶಿಫಾರಸು



ನವದೆಹಲಿ: ಕಾವೇರಿ ನದಿ ನೀರು ವಿಚಾರಕ್ಕೆ ಸಂಬಂಧಪಟ್ಟಂತೆ ಕರ್ನಾಟಕಕ್ಕೆ ಮತ್ತೊಂದು ಹಿನ್ನಡೆಯಾಗಿದ್ದು, ತಮಿಳುನಾಡಿಗೆ ದಿನಕ್ಕೆ 3500 ಕ್ಯೂಸೆಕ್ ನೀರು ಹರಿಸಲು ಕಾವೇರಿ ನೀರು ನಿಯಂತ್ರಣ ಸಮಿತಿಯ ಮಹತ್ವದ ಶಿಫಾರಸು ಮಾಡಿದೆ.

ದೆಹಲಿಯಲ್ಲಿ ನಡೆದ ಸಿಡಬ್ಲ್ಯೂಆರ್‌ಸಿ ಸಭೆಯಲ್ಲಿ ನೀರು ಹರಿಸುವ ಸಂಬಂಧ ತೀರ್ಮಾನ ಕೈಗೊಳ್ಳಲಾಗಿದ್ದು, ತಮಿಳುನಾಡಿಗೆ ನಿತ್ಯ 3,500 ಕ್ಯೂಸೆಕ್‌ನಂತೆ 15 ದಿನಗಳ ಕಾಲ ನೀರು ಹರಿಸುವಂತೆ ಸಮಿತಿ ಶಿಫಾರಸು ಮಾಡಿದೆ.

ವರ್ಚುವಲ್ ಮೂಲಕ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಹತ್ವದ ಶಿಫಾರಸು ಮಾಡಿದ್ದು, ಪ್ರತಿ ದಿನ 3,500 ಕ್ಯೂಸೆಕ್‌ನಂತೆ 15 ದಿನಗಳ ಕಾಲ ಒಟ್ಟು 4 ಟಿಎಂಸಿಗಳಷ್ಟು ನೀರು ಹರಿಸಲು ಸಿಡಬ್ಲ್ಯೂ ಆರ್‌ಸಿ ಹೇಳಿದೆ.

ಸಭೆಯಲ್ಲಿ ಕರ್ನಾಟಕದ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಮತ್ತು ತಜ್ಞರ ತಂಡವು ರಾಜ್ಯದಲ್ಲಿ ಎದುರಾಗಿರುವ ತೀವ್ರ ಮಳೆ ಕೊರತೆ ಹಾಗೂ ಜಲಾಶಯಗಳಲ್ಲಿನ ಕಡಿಮೆ ನೀರಿನ ಮಟ್ಟದ ಬಗ್ಗೆ ವಿವರವಾದ ಮಾಹಿತಿ ನೀಡಿದ್ದರು. ಹಾರಂಗಿ ಹೊರತುಪಡಿಸಿ ಕೆಆರ್‌ಎಸ್, ಕಬಿನಿ, ಹೇಮಾವತಿ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿದ್ದು, ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳ ಕುಡಿಯುವ ನೀರಿಗೆ ಮತ್ತು ಸ್ಥಳೀಯ ರೈತರ ಬೆಳೆಗೆ ನೀರಿಲ್ಲ ಎಂದು ಬಲವಾಗಿ ವಾದ ಮಂಡಿಸಲಾಗಿತ್ತು. ಆದಾಗ್ಯೂ, ಸಮಿತಿಯು ತಮಿಳುನಾಡಿಗೆ ನೀರು ಹರಿಸುವಂತೆ ಸೂಚಿಸಿರುವುದು ಹಾಗೂ ಕರ್ನಾಟಕದ ವಾದವನ್ನು ಪರಿಗಣಿಸದ ಈ ಆದೇಶದಿಂದಾಗಿ ರಾಜ್ಯದ ರೈತರು ಹಾಗೂ ಬೆಂಗಳೂರು ಸೇರಿದಂತೆ ಹಲವು ನಗರಗಳ ಜನರಲ್ಲಿ ಆತಂಕ ಮೂಡಿದೆ.

ಸಿಡಬ್ಲ್ಯೂಆರ್‌ಸಿ ನೀಡಿರುವ ಈ ಆದೇಶದಿಂದಾಗಿ ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದ ಜನರಿಗೆ ಮತ್ತೆ ನೀರಿನ್ ಅಭಾವ ಎದುರಾಗುವ ಭೀತಿ ಶುರುವಾಗಿದೆ. ಹೀಗಾಗಿ ಕಾವೇರಿ ನೀರು ನಿಯಂತ್ರಣ ಸಮಿತಿಯ ಈ ತೀರ್ಮಾನದ ವಿರುದ್ಧ ಕರ್ನಾಟಕ ಸರ್ಕಾರವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವ ಸಾಧ್ಯತೆಯಿದೆ.

ಕಾವೇರಿ ನೀರು ನಿಯಂತ್ರಣ ಸಮಿತಿಯ ಈ ಮಹತ್ವದ ಶಿಫಾರಸ್ಸಿಗೆ ಕರ್ನಾಟಕ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಸಂಬಂಧ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ, ಪ್ರತಿ ದಿನ 3,500 ಕ್ಯೂಸೆಕ್‌ನಂತೆ 15 ದಿನಗಳ ಕಾಲ ಒಟ್ಟು 4 ಟಿಎಂಸಿಗಳಷ್ಟು ನೀರು ಹರಿಸಲು ಶಿಫಾರಸು ಹೊರಬಿದ್ದಿದೆ. ಆದರೆ ನಮಗೆ ನೀರಿನ ಕೊರತೆ ಇದೆ, ನಾನು ಸಿಎಂ ಜೊತೆಗೆ ಚರ್ಚಿಸಿ ನಿರ್ಧರಿಸುತ್ತೇನೆ ಎಂದರು.

ನಮಗೆ ಮಳೆ ಇಲ್ಲ, ವರ್ಷ ಪೂರ್ತಿ ಕುಡಿಯುವ ನೀರು ಬೇಕು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವ ಬಗ್ಗೆ ಚರ್ಚಿಸಿ ನಿರ್ಧಾರ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

# ಏನಿದು NEET ವಿವಾದ MBBS ಸೀಟ್ ಉಚಿತವೇ?

**ರಾ**ಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ಪ್ರಕಟಿಸಿರುವ NEET UG 2026 ಫಲಿತಾಂಶದಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ದೇಶದ ಅತ್ಯಂತ ಸ್ಪರ್ಧಾತ್ಮಕ ವೈದ್ಯಕೀಯ ಪ್ರವೇಶ ಪರೀಕ್ಷೆಗಳಲ್ಲಿ ಒಂದಾದ ನೀಟ್‌ನಲ್ಲಿ ರಾಜ್ಯದ ಸಾವಿರಾರು ವಿದ್ಯಾರ್ಥಿಗಳು ಅರ್ಹತೆ ಪಡೆದು ವೈದ್ಯಕೀಯ ಶಿಕ್ಷಣದ ಕನಸಿನತ್ತ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಈ ಬಾರಿಯ ಪರೀಕ್ಷೆಯಲ್ಲಿ ದೇಶದಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA)ಯು NEET UG 2026 ಪರೀಕ್ಷೆಯ ಫಲಿತಾಂಶಗಳನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಪರೀಕ್ಷೆ ಬರೆದಿದ್ದ 20 ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳ ಪೈಕಿ ಒಟ್ಟು 11.21 ಲಕ್ಷ ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ. ಅಭ್ಯರ್ಥಿಗಳು ತಮ್ಮ ಅಪ್ಲಿಕೇಶನ್ (Application Number) ಜನ್ಮ ದಿನಾಂಕವನ್ನು ಬಳಸಿಕೊಂಡು ಫಲಿತಾಂಶವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಭಾರತದಲ್ಲಿ ವೈದ್ಯಕೀಯ ಶಿಕ್ಷಣದ ಕ್ಷೇತ್ರದಲ್ಲಿ ಕರ್ನಾಟಕವು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ನಿರ್ಮಿಸಿಕೊಂಡಿದೆ. 2026-27ನೇ ಶೈಕ್ಷಣಿಕ ವರ್ಷದ ವೇಳೆಗೆ ರಾಜ್ಯದಲ್ಲಿ ಒಟ್ಟು 74 ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ವೈದ್ಯಕೀಯ ಶಿಕ್ಷಣದ ಪ್ರಮುಖ ಕೇಂದ್ರವಾಗಿ ಕರ್ನಾಟಕ ಗುರುತಿಸಿಕೊಂಡಿದೆ.

ಈ 74 ಕಾಲೇಜುಗಳಲ್ಲಿ 24 ಸರ್ಕಾರಿ ವೈದ್ಯಕೀಯ ಕಾಲೇಜುಗಳು, 38 ಖಾಸಗಿ ವೈದ್ಯಕೀಯ ಕಾಲೇಜುಗಳು ಹಾಗೂ 12 ಡೀಮ್ಡ್ ವಿಶ್ವವಿದ್ಯಾಲಯಗಳ ವೈದ್ಯಕೀಯ ಕಾಲೇಜುಗಳು ಸೇರಿವೆ. ಈ ಕಾಲೇಜುಗಳಲ್ಲಿ ಒಟ್ಟಾರೆ ಸುಮಾರು 15,222 (MBBS) ಸೀಟುಗಳು ಲಭ್ಯವಿದ್ದು, ವೈದ್ಯಕೀಯ ಶಿಕ್ಷಣದಲ್ಲಿ ದೇಶದಲ್ಲೇ ಅತಿ ಹೆಚ್ಚು ವೈದ್ಯಕೀಯ ಸೀಟ್‌ಗಳ ಲಭ್ಯವಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ.

ಮುಂದುವರಿದು ರಾಜ್ಯದ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟದ ಕಾಲೇಜುಗಳು ಹಾಗೂ ಹೆಚ್ಚುತ್ತಿರುವ ಸೀಟುಗಳ ಹಿನ್ನೆಲೆಯಲ್ಲಿ, ಈ ಬಾರಿಯ ಅರ್ಹ ಅಭ್ಯರ್ಥಿಗಳಿಗೆ ಉತ್ತಮ ಅವಕಾಶಗಳು ದೊರೆಯುವ ನಿರೀಕ್ಷೆಯಿದೆ. ಗ್ರಾಮೀಣ ಪ್ರದೇಶಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಯಶಸ್ಸು ಸಾಧಿಸಿರುವುದು ವಿಶೇಷವಾಗಿದೆ.

ಬೆಂಗಳೂರು ನಗರವು ಓಇಇಖಿ ಗಉ 2026 ಪರೀಕ್ಷೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದು, ಇಡೀ ಕರ್ನಾಟಕ ರಾಜ್ಯಕ್ಕೆ ಹೆಮ್ಮೆ ತಂದಿದೆ. ಬೆಂಗಳೂರಿನ ಜೆ.ಪಿ. ನಗರದ ಶ್ರೀ ಚೈತನ್ಯ ಟೆಕ್ನೋ ಶಾಲೆಯ ವಿದ್ಯಾರ್ಥಿನಿ ವೈಷ್ಣವಿ ದಾಸ್ (Vaishnavi Das) ಅವರು ಒಟ್ಟು 720 ಅಂಕಗಳಿಗೆ 700 ಅಂಕಗಳನ್ನು ಪಡೆಯುವ ಮೂಲಕ ಅಖಿಲ ಭಾರತ ಮಟ್ಟದಲ್ಲಿ 20ನೇ ಶ್ರೇಣಿ (AIR 20) ಪಡೆದು ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ (State Topper) ಗಳಿಸಿದ್ದಾರೆ.

ನಂತರ ಅಲೆನ್ ಕೆರಿಯರ್ ಇನ್ಸ್ಟಿಟ್ಯೂಟ್ (ALLEN) ಬೆಂಗಳೂರು ಮತ್ತು ದಕ್ಷಿಣ ವಲಯದ ಸಂಸ್ಥೆಯಿಂದ ಒಟ್ಟು 4 ಅಭ್ಯರ್ಥಿಗಳು ಟಾಪ್ 100 ರೊಳಗೆ ಸ್ಥಾನ ಪಡೆದಿದ್ದಾರೆ (AIR 12, AIR 41, AIR 48, ಮತ್ತು AIR 97). ಅಷ್ಟೇ ಅಲ್ಲದೆ, 21 ವಿದ್ಯಾರ್ಥಿಗಳು ಟಾಪ್ 500 ಮತ್ತು 52 ವಿದ್ಯಾರ್ಥಿಗಳು ಟಾಪ್ 1000 ರೊಳಗೆ ಸ್ಥಾನ ಗಳಿಸಿದ್ದಾರೆ. ಬೆಂಗಳೂರು ವಿದ್ಯಾಪೀಠ (Physics Wallah) ನಗರದ ವಿವಿಧ ಕೇಂದ್ರಗಳಿಂದ (ಜೆ.ಪಿ. ನಗರ, ರಾಜಾಜಿನಗರ, ವೈಟ್‌ಫೀಲ್ಡ್, ಯಲಹಂಕ, ಎಚ್‌ಎಸ್‌ಆರ್ ಲೇಔಟ್) ಉತ್ತಮ ಫಲಿತಾಂಶ ಬಂದಿದೆ. ಇಲ್ಲಿನ ವಿದ್ಯಾರ್ಥಿ ಶಶಾಂಕ್ ಪಿ. ಅವರು 641 ಅಂಕಗಳೊಂದಿಗೆ AIR 2,197 ಪಡೆದು ಸಂಸ್ಥೆಯ ಟಾಪರ್ ಆಗಿದ್ದಾರೆ. ಧ್ರುವ ಎಸ್. ಅವರು 639 ಅಂಕಗಳೊಂದಿಗೆ 2,422ನೇ ರ್‍ಯಾಂಕ್ ಪಡೆದಿದ್ದಾರೆ.

ಬೆಂಗಳೂರಿನ ನಂತರ ಅತೀ ಹೆಚ್ಚು ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳೆಂದರೆ ಮಂಗಳೂರು ಜಿಲ್ಲೆಯವರು. ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜ್ ಮತ್ತು ಕೋಚಿಂಗ್ ಸೆಂಟರ್‌ನಿಂದ 3698 ವಿದ್ಯಾರ್ಥಿಗಳು, ಗುರುವಾಯೂರ್‌ನ ಕೆರೆ ಎಕ್ಸೆಲ್ ಕಾಲೇಜಿನಿಂದ 310 ವಿದ್ಯಾರ್ಥಿಗಳು ಮತ್ತು ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಿಂದ 659 ವಿದ್ಯಾರ್ಥಿಗಳು ವೈದ್ಯರಾಗುವ ತಮ್ಮ ಕನಸನ್ನು ನನಸು ಮಾಡಿಕೊಂಡಿದ್ದಾರೆ.

ಈ ಮಧ್ಯೆ ಮೇ 5 ರಂದು ನಡೆದ ನೀಟ್ 2026ರ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಿಂದ ಮರುಪರೀಕ್ಷೆಯನ್ನು ಜೂನ್ 26 ರಂದು ನಡೆಸಲಾಗಿತ್ತು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಖಂಡಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ 'ಕಾಕ್ರೋಚ್ ಜನತಾ ಪಾರ್ಟಿ' ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದೆ. ಪರಿಸರವಾದಿ ಮತ್ತು ಸಾಮಾಜಿಕ ಕಾರ್ಯಕರ್ತ ಸೋನಮ್ ವಾಂಗ್ಚುಕ್ ಪ್ರತಿಭಟನೆಯನ್ನು ಬೆಂಬಲಿಸಿ ಜೂನ್ 28ರಿಂದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ.

ಈ ಉಪವಾಸ ಇದೀಗ 21ನೇ ದಿನಕ್ಕೆ ಕಾಲಿಟ್ಟಿದೆ. 9 ಕೆ.ಜಿ.ಗೂ ಹೆಚ್ಚು ತೂಕ ಕಳೆದುಕೊಂಡು ಆರೋಗ್ಯ ತೀವ್ರ ಹದಗೆಟ್ಟಿದ್ದರೂ, ತಮ್ಮ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ವಾಂಗ್ಚುಕ್ ಘಂಟಾಘೋಷವಾಗಿ ಹೇಳಿದ್ದಾರೆ. ಪರಿಸರ ಸಂರಕ್ಷಣೆ ಸಲುವಾಗಿ ಈ ಹಿಂದೆಯೂ ಹಲವು ಬಾರಿ ಉಪವಾಸ ಕುಳಿತಿದ್ದ ಅವರು, 'ಉಪವಾಸ ನಿಲ್ಲಿಸಿ ಎಂದು ಹೇಳುವ ಬದಲು, ಪ್ರತಿಭಟನೆಯಲ್ಲಿ ಪಾಲ್ಗೊಳ್ಳಿ' ಎಂದು




ಹಿತೈಷಿಗಳಿಗೆ ಕರೆ ನೀಡಿದ್ದಾರೆ.

ಯಾರು ಈ ಸೋನಮ್ ವಾಂಗ್ಚುಕ್?

ಪರಿಸರವಾದಿ ಹಾಗೂ ಲಡಾಖ್‌ಗೆ ಹೆಚ್ಚಿನ ಸಾಂವಿಧಾನಿಕ ರಕ್ಷಣೆಯೂ ಸೇರಿದಂತೆ ಪ್ರಾದೇಶಿಕ ಹಕ್ಕುಗಳ ಧ್ವನಿಯಾಗಿ ಜಾಗತಿಕವಾಗಿ ಗುರುತಿಸಿಕೊಂಡವರು ವಾಂಗ್ಚುಕ್. ಲಡಾಖ್‌ನ ಶ್ಯಾಮ್ ಜಿಲ್ಲೆಯ 'ಐಚಿ' ಎಂಬ ಗ್ರಾಮದಲ್ಲಿ 1966ರ ಸೆಪ್ಟೆಂಬರ್ 1ರಂದು ಜನಿಸಿದ ಅವರ ವಯಸ್ಸಿಗ 59.

ಕಾಶ್ಮೀರದ ಶ್ರೀನಗರದಲ್ಲಿರುವ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯಲ್ಲಿ (NIT) ಎಂಜಿನಿಯರಿಂಗ್ ಓದುತ್ತಿದ್ದಾಗ ವಾಂಗ್ಚುಕ್ ಅವರು ತಮ್ಮ ಶೈಕ್ಷಣಿಕ ವೆಚ್ಚ ಭರಿಸಿಕೊಳ್ಳಲು ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೆರವಾಗುವ ಸಲುವಾಗಿ, ಟ್ಯೂಷನ್ ಮಾಡುತ್ತಿದ್ದರು.

ವಾಂಗ್ಚುಕ್ ಅವರ ಪತ್ನಿ ಗೀತಾಂಜಲಿ ಜೆ. ಆಂಗ್ಮೋ ಅವರು ಸಾಮಾಜಿಕ ಉದ್ಯಮಿ, ಶಿಕ್ಷಣತಜ್ಞೆ ಮತ್ತು ಹಿಮಾಲಯನ್ ಇನ್‌ಸ್ಟಿಟ್ಯೂಟ್ ಆಫ್ ಆಲ್ಟರ್ನೇಟಿವ್ಸ್ (HIAL) ಸಹ-ಸಂಸ್ಥಾಪಕಿ ಮತ್ತು ನಿರ್ದೇಶಕಿಯಾಗಿದ್ದಾರೆ.

ವಾಂಗ್ಚುಕ್ ಅವರ ತಂದೆ ಸೋನಮ್ ವಾಂಗ್ಯಾಲ್, ಲಡಾಖ್‌ನ ಪ್ರಮುಖ ರಾಜಕಾರಣಿ. ಅವರು ಫಾರೂಕ್ ಅಬ್ದುಲ್ಲಾ ಅವರ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಜೊತೆ ಒಡನಾಟ ಹೊಂದಿದ್ದರು.

ಜಮ್ಮು ಮತ್ತು ಕಾಶ್ಮೀರ ಸರ್ಕಾರದಲ್ಲಿ ಹಿಮ ಕರಗಿ ಹರಿಯುವ ನೀರನ್ನು ಹೆಪ್ಪುಗಟ್ಟಿಸಿ ಕೃತಕ ಪರ್ವತದಂತೆ ಅಥವಾ ಗೋಪುರದಂತೆ ರೂಪಿಸುವ ಮೂಲಕ ಸಂಗ್ರಹಿಸಿ, ಬೇಸಿಗೆಯಲ್ಲಿ ಉಪಯೋಗಕ್ಕೆ ಬರುವಂತೆ ರೂಪಿಸಿದ್ದ 'ಐಸ್ ಸ್ತೂಪ' ತಂತ್ರಜ್ಞಾನಕ್ಕೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಈ ತಂತ್ರವು ಜಾಗತಿಕವಾಗಿ ಮುಕ್ತವಾಗಿರಬೇಕು ಎಂಬ ಕಾರಣಕ್ಕೆ ಅವರು ಪೇಟೆಂಟ್ ಅನ್ನೂ ಪಡೆದುಕೊಂಡಿಲ್ಲ.

ಸರ್ಕಾರದ ಗಮನ ಸೆಳೆಯಲು ಮತ್ತು ಉನ್ನತ ಶಿಕ್ಷಣ ಸಚಿವರ ರಾಜೀನಾಮೆಗೆ ಒತ್ತಾಯಿಸುತ್ತಿರುವ ಸತ್ಯಾಗ್ರಹ ನಿರತರನ್ನು ಸಂಧಾನಕ್ಕೆ ಕರೆಯುವ ಯಾವ ಸೂಚನೆ ಕಂಡುಬರದ ಹಿನ್ನೆಲೆಯಲ್ಲಿ ಮತ್ತು ವಾಂಗ್ಚೂಕ್‌ರವರ ಆರೋಗ್ಯ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ಜುಲೈ 18ರ ಬೆಳಿಗ್ಗೆ ಅವರನ್ನು ಪೊಲೀಸ್ ಬಂದೋಬಸ್ತಿನಲ್ಲಿ ಬಲವಂತವಾಗಿ ಆಸ್ಪತ್ರೆಗೆ ಸೇರಿಸುವ ಮೂಲಕ ಸತ್ಯಾಗ್ರಹದ ಸ್ಥಳದಿಂದ ಅವರ ಆರೋಗ್ಯ ದೃಷ್ಟಿಯಿಂದ ಸ್ಥಳಾಂತರಿಸಿದ್ದಾರೆ. ಈ ಪ್ರಕರಣವು ಇನ್ನು ಮುಂದೆ ಯಾವ ತಿರುವು ಪಡೆಯುವುದೋ ಕಾದು ನೋಡಬೇಕಿದೆ?

## ಆ. 1ರಂದು ಮೈಸೂರಿಗೆ ಪ್ರಧಾನಿ ಮೋದಿ ಭೇಟಿ

ಮೈಸೂರು: ಪ್ರಧಾನಿ ನರೇಂದ್ರ ಮೋದಿಯವರು ಆಗಸ್ಟ್ 1 ರಂದು ಮೈಸೂರಿಗೆ ಭೇಟಿ ನೀಡಲಿದ್ದು, ಅಂದು ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದ ಸ್ಮಾರಕವನ್ನು ಲೋಕಾರ್ಪಣೆ ಮಾಡುವರು.

ಮೈಸೂರಿನ ದೇವರಾಜ ಮೊಹಲ್ಲಾ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಈ ಸ್ಮಾರಕ ಸ್ಥಳದಲ್ಲಿ ಹಿಂದೆ ಸ್ವಾಮಿ ವಿವೇಕಾನಂದರು ತಂಗಿದ್ದರು ಎನ್ನಲಾಗಿದ್ದು, ಇದು ಅವರ ನೆನಪಿನಲ್ಲಿ ಈಗ ಇಲ್ಲಿ ಸಾಂಸ್ಕೃತಿಕ ಮತ್ತು ಯುವಜನ ಚಟುವಟಿಕೆಗಳ ಕೇಂದ್ರವನ್ನು ಮೈಸೂರಿನ ರಾಮಕೃಷ್ಣ ಆಶ್ರಮ ಅಭಿವೃದ್ಧಿಪಡಿಸಿದೆ.

ಈ ಸ್ಮಾರಕವನ್ನು ಪ್ರಧಾನಿ ನರೇಂದ್ರ ಮೋದಿಯವರು ಲೋಕಾರ್ಪಣೆ ಮಾಡುವರು ಎಂದು ಮೈಸೂರು ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಜೀ ಮಹಾರಾಜ್ ತಿಳಿಸಿದರು.

ಈ ಸ್ಮಾರಕವನ್ನು ಸುಮಾರು 45 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ.

ಸ್ಮಾರಕ ಹಾಗೂ ಸಾಂಸ್ಕೃತಿಕ ಯುವ ಕೇಂದ್ರವನ್ನು ಪ್ರಧಾನಿ ಮೋದಿ ಲೋಕಾರ್ಪಣೆ ಮಾಡಿದ ನಂತರ ರಾಮಕೃಷ್ಣ ಆಶ್ರಮಕ್ಕೆ ತೆರಳಿ ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಪುಷ್ಪನಮನ ಸಲ್ಲಿಸುವರು. ಹಾಗೆಯೇ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ವಿಶೇಷ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಸುಮಾರು 6 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ವಿಶೇಷ ಪಾಸ್ ವಿತರಿಸಲಾಗುತ್ತಿದೆ. ಪಾಸ್ ಹೊಂದಿರುವವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ.

# ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯ: 97 ಕೋಟಿ ಹರಿದು ಬಂದ ದೇಣಿಗೆ



**ಭಕ್ತಿ**, ನಂಬಿಕೆ ಮತ್ತು ಪವಾಡಗಳ ಮಹಾಕ್ಷೇತ್ರ–ಆಂಧ್ರ ಪ್ರದೇಶದ ತಿರುಪತಿ ಸಮೀಪದ ಏಳು ಬೆಟ್ಟಗಳ ಮೇಲಿರುವ ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯವು ವಿಶ್ವದ ಅತ್ಯಂತ ಶ್ರೀಮಂತ ಹಾಗೂ ಹೆಚ್ಚು ಭಕ್ತರು ಭೇಟಿ ನೀಡುವ ಹಿಂದೂ ದೇವಾಲಯಗಳಲ್ಲಿ ಒಂದಾಗಿದೆ. ಕೋಟ್ಯಂತರ ಭಕ್ತರು ಸಾಕ್ಷಾತ್ ಮಹಾವಿಷ್ಣುವೇ ಭೂಲೋಕಕ್ಕೆ ಇಳಿದು ಬಂದು ಕಲಿಯುಗದ ಪ್ರತ್ಯಕ್ಷ ದೈವ ಶ್ರೀನಿವಾಸನ ರೂಪದಲ್ಲಿ ನೆಲೆ ನಿಂತಿದ್ದಾರೆಂದು ನಂಬುತ್ತಾರೆ. ಪ್ರತಿದಿನ ಸಾವಿರಾರು ಭಕ್ತರು ಸ್ವಾಮಿಯ ದರ್ಶನ ಪಡೆದು ತಮ್ಮ ಕಷ್ಟ–ಕಾರ್ಪಣ್ಯಗಳನ್ನು ನಿವಾರಿಸಿಕೊಳ್ಳುವ ವಿಶ್ವಾಸದಿಂದ ಹರಕೆಗಳನ್ನು ಸಲ್ಲಿಸುತ್ತಾರೆ.

ಪವಾಡಗಳ ಬಗ್ಗೆ ಭಕ್ತರ ನಂಬಿಕೆ–ತಿರುಮಲ ದೇವಾಲಯದೊಂದಿಗೆ ಅನೇಕ ಪವಾಡಗಳ ಕಥೆಗಳು ತಲೆಮಾರುಗಳಿಂದ ಪ್ರಚಲಿತದಲ್ಲಿವೆ. ಅನೇಕ ಭಕ್ತರು ತಮ್ಮ ಜೀವನದಲ್ಲಿ ಎದುರಾದ ಸಂಕಷ್ಟಗಳು ಸ್ವಾಮಿಯ ಅನುಗ್ರಹದಿಂದ ದೂರವಾದವು, ಅನಾರೋಗ್ಯ ದಿಂದ ಗುಣಮುಖರಾದರು, ಉದ್ಯೋಗ ದೊರೆಯಿತು, ಸಂತಾನ ಭಾಗ್ಯ ಲಭಿಸಿತು ಹಾಗೂ ಕುಟುಂಬದ ಸಮಸ್ಯೆಗಳು ನಿವಾರಣೆಯಾದವು ಎಂದು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಇವು ಭಕ್ತರ ವೈಯಕ್ತಿಕ ಅನುಭವಗಳು ಮತ್ತು ಧಾರ್ಮಿಕ ನಂಬಿಕೆಗಳಾಗಿದ್ದು, ವೈಜ್ಞಾನಿಕವಾಗಿ ದೃಢೀಕರಿಸಲ್ಪಟ್ಟ ಘಟನೆಗಳಲ್ಲ.

ದೇವಾಲಯದ ವಿಶೇಷತೆಗಳು–ತಿರುಮಲ ದೇವಾಲಯದ ವಾಸ್ತುಶಿಲ್ಪ, ಶತಮಾನಗಳ ಇತಿಹಾಸ, ನಿತ್ಯ ನಡೆಯುವ ವೈದಿಕ ಪೂಜೆಗಳು, ಲಡ್ಡು ಪ್ರಸಾದ ಮತ್ತು ಭಕ್ತರ ಅಚಲ ವಿಶ್ವಾಸ ಈ ಕ್ಷೇತ್ರವನ್ನು ವಿಶಿಷ್ಟವಾಗಿಸಿವೆ. ಪ್ರತಿದಿನ ಲಕ್ಷಾಂತರ ರೂಪಾಯಿಗಳ ಕಾಣಿಕೆ ದೇವರಿಗೆ ಸಲ್ಲಿಕೆಯಾಗುತ್ತದೆ. ಜಗತ್ತಿನ ವಿವಿಧ ದೇಶಗಳಿಂದಲೂ ಭಕ್ತರು ಇಲ್ಲಿಗೆ ಆಗಮಿಸಿ ಶ್ರೀನಿವಾಸನ ದರ್ಶನ ಪಡೆಯುತ್ತಾರೆ.

ಆಧ್ಯಾತ್ಮಿಕ ಅನುಭವ–ಭಕ್ತರ ಅಭಿಪ್ರಾಯದಲ್ಲಿ ತಿರುಮಲಕ್ಕೆ ಭೇಟಿ ನೀಡುವುದು ಕೇವಲ ಯಾತ್ರೆಯಲ್ಲ, ಅದು ಆಧ್ಯಾತ್ಮಿಕ ಅನುಭವ. ಸ್ವಾಮಿಯ ದರ್ಶನದ ನಂತರ ಮನಸ್ಸಿಗೆ ಶಾಂತಿ, ಆತ್ಮವಿಶ್ವಾಸ ಹಾಗೂ ಹೊಸ ಬದುಕಿನ ಉತ್ಸಾಹ ದೊರೆಯುತ್ತದೆ ಎಂಬುದು ಅನೇಕ ಭಕ್ತರ ಅನುಭವವಾಗಿದೆ.

ನಂಬಿಕೆ ಮತ್ತು ವಿವೇಕ–ಧಾರ್ಮಿಕ ನಂಬಿಕೆ ವ್ಯಕ್ತಿಯ ವೈಯಕ್ತಿಕ ವಿಷಯವಾಗಿದೆ. ತಿರುಮಲದಲ್ಲಿ ನಡೆಯುತ್ತವೆ ಎನ್ನಲಾಗುವ ಪವಾಡಗಳನ್ನು ಅನೇಕರು ದೈವಕೃಪೆಯ ಸಂಕೇತವೆಂದು ನಂಬಿದರೆ, ಕೆಲವರು ಅವನ್ನು ವೈಯಕ್ತಿಕ ಅನುಭವಗಳೆಂದು ಪರಿಗಣಿಸುತ್ತಾರೆ. ಆದರೆ ಭಕ್ತಿ, ಸೇವೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಪವಿತ್ರ ಕ್ಷೇತ್ರವಾಗಿ ತಿರುಮಲದ ಮಹತ್ವ ಮಾತ್ರ ನಿರ್ವಿವಾದವಾಗಿದೆ. ಕೋಟ್ಯಂತರ ಜನರ ವಿಶ್ವಾಸ, ಸಾವಿರಾರು ವರ್ಷಗಳ ಪರಂಪರೆ ಮತ್ತು ನಿರಂತರ ಭಕ್ತಿಯ ಬೆಳಕಿನಲ್ಲಿ ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯವು ಭಾರತದ ಅತ್ಯಂತ ಮಹತ್ವದ ಆಧ್ಯಾತ್ಮಿಕ ಕೇಂದ್ರಗಳಲ್ಲಿ ಒಂದಾಗಿ ಇಂದಿಗೂ ಪ್ರಮುಖ ಯಾತ್ರಾ ಕೇಂದ್ರವಾಗಿದೆ.

ತಿರುಪತಿ ದೇವಸ್ಥಾನವು ಜಗತ್ತಿನ ಅತ್ಯಂತ ಶ್ರೀಮಂತ ಧಾರ್ಮಿಕ ಸಂಸ್ಥೆಗಳಲ್ಲಿ ಒಂದಾಗಿದೆ. ಅಂದಾಜು ಪ್ರಕಾರ ಇದರ ಒಟ್ಟು ಆಸ್ತಿ ಮೌಲ್ಯ ರೂ. 3.38 ಲಕ್ಷ ಕೋಟಿ. 2024–25 ಹಣಕಾಸು ವರ್ಷದಲ್ಲೇ ದೇವಸ್ಥಾನಕ್ಕೆ ಸುಮಾರು ರೂ. 1,798 ಕೋಟಿ ದೇಣಿಗೆ ಬಂದಿದೆ. ಅಂದರೆ ಪ್ರತಿದಿನ ಸರಾಸರಿ ರೂ. 4.9 ಕೋಟಿ ಕಾಣಿಕೆ ಹರಿದು ಬರುತ್ತಿದೆ.

ಜುಲೈ 15ರಂದು ತಿರುಮಲ ತಿರುಪತಿ ದೇವಸ್ಥಾನ (TTD) ಹೊಸ ಡೊನೇಷನ್ ಪಾಲಿಸಿಯನ್ನು ಜಾರಿಗೆ ತರುವ ಮುನ್ನ ಭಾರೀ ಪ್ರಮಾಣದಲ್ಲಿ ದೇಣಿಗೆ ಸ್ವೀಕರಿಸಿತು. ಒಂದೇ ದಿನ 2,465ಕ್ಕೂ ಹೆಚ್ಚು ದಾನಿಗಳು ದೇಣಿಗೆ ನೀಡಿದ್ದು, ಅದರಲ್ಲಿ ಬಹುತೇಕರು ಆನ್‌ಲೈನ್ ಮೂಲಕವೇ ಹಣ ಪಾವತಿಸಿದ್ದಾರೆ. ಅದರಲ್ಲೂ, ಸಾವಿರಕ್ಕೂ ಹೆಚ್ಚು ಭಕ್ತರು ರೂ. 1 ಲಕ್ಷದಿಂದ ರೂ. 10 ಲಕ್ಷದವರೆಗೆ ದೇಣಿಗೆ ನೀಡಿದರು. ಸಾವಿರಕ್ಕೂ ಹೆಚ್ಚು ಭಕ್ತರು ರೂ. 10 ಲಕ್ಷದಿಂದ ರೂ. 1 ಕೋಟಿವರೆಗೆ ಕಾಣಿಕೆ ಸಲ್ಲಿಸಿದರು. ಇಬ್ಬರು ದಾನಿಗಳು ತಲಾ ರೂ. 1 ಕೋಟಿಗೂ ಹೆಚ್ಚು ದೇಣಿಗೆ ನೀಡಿದರು. ಇವೆಲ್ಲ ಸೇರಿ ಕೇವಲ ಒಂದೇ ದಿನದಲ್ಲಿ ರೂ. 96.98 ಕೋಟಿ ದೇವಸ್ಥಾನಕ್ಕೆ ಹರಿದುಬಂತು.

ಇಷ್ಟೊಂದು ದೇಣಿಗೆಗೆ ಕಾರಣವಾದ ಹೊಸ ನಿಯಮ. ಇಲ್ಲಿಯವರೆಗೆ ದೇವಸ್ಥಾನಕ್ಕೆ ದೊಡ್ಡ ಮೊತ್ತದ ದೇಣಿಗೆ ನೀಡಿದವರಿಗೆ ಜೀವಿತಾವಧಿಯವರೆಗೆ (Lifetime) ಹಲವು ವಿಶೇಷ ಸೌಲಭ್ಯಗಳು ಸಿಗುತ್ತಿದ್ದವು. ಅವುಗಳಲ್ಲಿ, ವಿಶೇಷ ದರ್ಶನ. VIP Break Darshan. ಸುಪ್ರಭಾತ ಸೇವೆ. ಕಲ್ಯಾಣೋತ್ಸವ ಸೇವೆ. ಉಚಿತ ವಸತಿ. ಲಡ್ಡು ಪ್ರಸಾದ. ವಿಶೇಷ ಉಡುಗೊರೆಗಳು. ಚಿನ್ನ ಮತ್ತು ಬೆಳ್ಳಿ ನಾಣ್ಯಗಳು ಮುಂತಾದ ಸೌಲಭ್ಯಗಳು ಸೇರಿದ್ದವು.

ಜುಲೈ 15ರ ಮಧ್ಯರಾತ್ರಿಯಿಂದ ಜಾರಿಗೆ ಬಂದ ಹೊಸ ನಿಯಮಗಳ ಪ್ರಕಾರ, ವೈಯಕ್ತಿಕ ದಾನಿಗಳಿಗೆ ವಿಶೇಷ ಸೌಲಭ್ಯಗಳು 20 ವರ್ಷಗಳವರೆಗೆ ಮಾತ್ರ. ಟ್ರಸ್ಟ್ ಹಾಗೂ ಸಂಸ್ಥೆಗಳಿಗೆ 15 ವರ್ಷಗಳವರೆಗೆ ಮಾತ್ರ. ಅಂದರೆ, ಹಿಂದೆ ಇದ್ದಂತೆ ಜೀವಿತಾವಧಿಯವರೆಗೆ ಸೌಲಭ್ಯಗಳು ಇನ್ನು ದೊರೆಯುವುದಿಲ್ಲ.

ಜುಲೈ 15ರ ಮಧ್ಯರಾತ್ರಿಗೂ ಮುನ್ನ ದೇಣಿಗೆ ನೀಡಿರುವ ಎಲ್ಲ ಹಳೆಯ ದಾನಿಗಳಿಗೆ ಯಾವುದೇ ತೊಂದರೆ ಇಲ್ಲ. ಅವರಿಗೆ ಮೊದಲಿನಂತೆಯೇ ಜೀವಿತಾವಧಿಯವರೆಗೆ ಎಲ್ಲಾ ವಿಶೇಷ ಸೌಲಭ್ಯಗಳು ಮುಂದುವರಿಯಲಿವೆ. ಇದೇ ಕಾರಣಕ್ಕೆ ಸಾವಿರಾರು ಶ್ರೀಮಂತ ದಾನಿಗಳು ಕೊನೆಯ ಕ್ಷಣದಲ್ಲಿ ದೇಣಿಗೆ ನೀಡಲು ಮುಗಿಬಿದ್ದರು.

TTD ಹೊಸ ವ್ಯವಸ್ಥೆಯಲ್ಲಿ ಹಲವು ಪ್ರಮುಖ ಬದಲಾವಣೆಗಳನ್ನು ಮಾಡಿದೆ. ಹಳೆಯ ದೇಣಿಗೆ ಸ್ಲ್ಯಾಬ್‌ಗಳನ್ನು ರದ್ದುಪಡಿಸಲಾಗಿದೆ. ಹೊಸ ನಾಲ್ಕು ಸ್ಲ್ಯಾಬ್ ವ್ಯವಸ್ಥೆ ಜಾರಿಗೆ ಬಂದಿದೆ. ಸಂಪೂರ್ಣ Online Donor Management System ಪರಿಚಯಿಸಲಾಗಿದೆ. ದರ್ಶನ ಬುಕ್ಕಿಂಗ್ ಸಂಪೂರ್ಣ ಡಿಜಿಟಲ್ ಆಗಲಿದೆ. ಸಿಬ್ಬಂದಿಗಳ ಹಸ್ತಕ್ಷೇಪ ಹಾಗೂ ವಿಶೇಷ ವಿನಂತಿಗಳಿಗೆ ಅವಕಾಶ ಕಡಿಮೆಯಾಗಲಿದೆ.

TTD ಹೇಳುವ ಪ್ರಕಾರ, ಈ ಬದಲಾವಣೆಗಳಿಂದ, ಗಣ್ಯರ ದರ್ಶನದ ಒತ್ತಡ ಕಡಿಮೆಯಾಗಲಿದೆ.

ಸಾಮಾನ್ಯ ಭಕ್ತರಿಗೆ ದರ್ಶನದ ಅವಕಾಶ ಹೆಚ್ಚಾಗಲಿದೆ. ಸಂಪೂರ್ಣ ಪಾರದರ್ಶಕ ವ್ಯವಸ್ಥೆ ಜಾರಿಗೆ ಬರಲಿದೆ. ಆನ್‌ಲೈನ್ ಬುಕ್ಕಿಂಗ್ ಮೂಲಕ ಎಲ್ಲರಿಗೂ ಸಮಾನ ಅವಕಾಶ ಸಿಗಲಿದೆ. ಇದು ಎಷ್ಟರ ಮಟ್ಟಿಗೆ ಜಾರಿಗೊಂಡು ಭಕ್ತರ ಮನ ಗೆಲ್ಲುತ್ತದೆ ಕಾದುನೋಡಬೇಕಿದೆ.

# ರುಕ್ಮಾಬಾಯಿ-ಒಂದು ಹೆಣ್ಣುಮಗುವಿನ ಧೈರ್ಯದಿಂದ ಆರಂಭವಾದ ಸಾಮಾಜಿಕ ಕ್ರಾಂತಿ



1887 ರಲ್ಲಿ ಬಾಂಬೆ ನ್ಯಾಯಾಲಯದಲ್ಲಿ ಒಬ್ಬ ಯುವತಿಯ ಮುಂದೆ ಎರಡು ಆಯ್ಕೆಗಳು ಇಡಲಾಯಿತು. ಬಾಲ್ಯದಲ್ಲೇ ಬಲವಂತವಾಗಿ ಮಾಡಿದ ಮದುವೆಯ ಗಂಡನ ಜೊತೆ ಬದುಕು. ಅಥವಾ ಜೈಲು, ರೂಕ್ಮಾಬಾಯಿ ಜೈಲನ್ನೇ ಆರಿಸಿದರು. ಈ ಉತ್ತರವು ಬ್ರಿಟಿಷ್ ಇಂಡಿಯಾ ಮಾತ್ರವಲ್ಲ, ಇಂಗ್ಲೆಂಡಿನವರೆಗೆ ಚರ್ಚೆಯನ್ನು ಹೊತ್ತೊಯ್ದಿತು. ಅದು ನಂತರ ಲಕ್ಷಾಂತರ ಹುಡುಗಿಯರ ಭವಿಷ್ಯವನ್ನು ಬದಲಿಸಿದ ಕಾನೂನು ಪರಿವರ್ತನೆಯ ದಾರಿಗೆ ದಾರಿ ಮಾಡಿದ ಬೆಳವಣಿಗೆಯಾಯಿತು. ಬಾಲ್ಯ, ಶಿಕ್ಷಣ ಮತ್ತು ಬಲವಂತದ ಮದುವೆ 1864ರಲ್ಲಿ ಬಾಂಬೆಯಲ್ಲಿ ಜನಿಸಿದ ರೂಕ್ಮಾಬಾಯಿ, ತಮ್ಮ ತಾಯಿ ಜಯಂತಿಬಾಯಿ ಬಾಲ್ಯವಿವಾಹದ ನೋವನ್ನು ಅನುಭವಿಸಿದವಳು 14ನೇ ವಯಸ್ಸಿನಲ್ಲಿ ಮದುವೆ. 15ರಲ್ಲೇ ತಾಯಿತನ, 17ರಲ್ಲೇ ವಿಧವತ್ವ ರೂಕ್ಮಾಬಾಯಿ ಎಂಟರರಲ್ಲಿದ್ದಾಗ, ತಾಯಿ ಪ್ರಸಿದ್ಧ ವೈದ್ಯರಾದ ಡಾ. ಸಾಕಾರಂ ಅರ್ಜುನ್ ಅವರನ್ನು ಮರುಮದುವೆಯಾಗಿದರು. ಅವರು ಮಹಿಳಾ ಶಿಕ್ಷಣಕ್ಕೆ ಬೆಂಬಲಕರಾಗಿದ್ದರು. ಮನೆಯೇ ಪುಸ್ತಕಗಳಿಂದ ತುಂಬಿತ್ತು. ರೂಕ್ಮಾಬಾಯಿ ಓದಲು, ಕಲಿಯಲು ಪ್ರೋತ್ಸಾಹ ಸಿಗುತ್ತಿತ್ತು. ಆದರೆ ಆ ಕಾಲದ ಸಮಾಜದ ಮಿತಿಗಳನ್ನು ಅವರು ಕೂಡ ಮೀರಲು ಸಾಧ್ಯವಾಗಲಿಲ್ಲ. 11ನೇ ವಯಸ್ಸಿನಲ್ಲಿ ರೂಕ್ಮಾಬಾಯಿ, 19 ವರ್ಷದ ದಾರಾಜಿ ಭಿಕಾಜಿಯವರೊಂದಿಗೆ ಮದುವೆ ಯಾಗಿದ್ದರು-ಸಾಮಾಜಿಕ ಆಚರಣೆ, ಕುಟುಂಬದ ನಿರ್ಧಾರ ಹೆಣ್ಣಿಗೆ ಪ್ರಶ್ನಿಸುವ ಹಕ್ಕೇ ಇರಲಿಲ್ಲ. ವಯಸ್ಸಾದ ಮೇಲೆ ಬಂದ ನಿರಾಕರಣೆ ಮತ್ತು ನ್ಯಾಯಾಲಯದ ಹೋರಾಟ ಮದುವೆಯಾದ ತಕ್ಷಣವೇ ಗಂಡನ ಮನೆಗೆ ಹೋಗಬೇಕಾದ ಅಗತ್ಯ ಇರಲಿಲ್ಲ. ರೂಕ್ಮಾಬಾಯಿ ತಾಯಿ-ಮಾವುಗಳ ಮನೆಯಲ್ಲಿ ಉಳಿದುಕೊಂಡು ಓದು ಮುಂದು ವರಿಸಿದರು. ಆದರೆ ದಾದಾಜಿ ಒಳ್ಳೆಯ ಜೀವನದ ದಾರಿಯಿಂದ ದೂರಹೋದ, ಓದು ಬಿಟ್ಟು ಆಳಸೆಗೆ, ಸಾಲಕ್ಕೆ ಒಳಗಾದ. ಹೆಂಡತಿಯೊಂದಿಗಿನ ಸಂಸಾರವೇ ತನ್ನ ಬದುಕಿನ ಏಕೈಕ ಗುರಿಯಂತೆ ಕಂಡರು. 1884ರಲ್ಲಿ, ರೂಕ್ಮಾಬಾಯಿ 20ರ ವಯಸ್ಸಿನಲ್ಲಿ, ಅವಳು ಗಂಡನ ಮನೆಯಲ್ಲಿ ವಾಸಿಸಬೇಕೆಂದು ದಾದಾಜಿ ಒತ್ತಾಯಿಸಿದರು. ರೂಕ್ಮಾಬಾಯಿ ಸ್ಪಷ್ಟವಾಗಿ ನಕಾರ ತಿಳಿಸಿದರು. ದಾದಾಜಿ ನ್ಯಾಯಾಲಯಕ್ಕೆ ಮೊರೆಹೋದರು. "ರಿಸ್ಟಿಟ್ಯೂಷನ್ ಆಫ್ ಕಾಂಜುಗಲ್ ರೈಟ್ಸ್" ಎಂಬ ಕಾಯ್ದೆಯ ಆಧಾರದ ಮೇಲೆ ಹೆಂಡತಿ ಗಂಡನ ಆಸ್ತಿಯಂತೆ. ಅವಳನ್ನು ಬಲವಂತವಾಗಿ ತನ್ನ ಬಳಿ ತರಿಸಿಕೊಳ್ಳಲು ಅನುಮತಿಸುವ ಕ್ರೂರ ಕಾನೂನು ರೂಕ್ಮಾಬಾಯಿ ತಮ್ಮ ವಾದದಲ್ಲಿ ಇತಿಹಾಸ ನಿರ್ಮಿಸಿದರು. ಬಾಲ್ಯದಲ್ಲೇ ಮಾಡಿದ ಮದುವೆ ಮಾನ್ಯವಾಗಬಾರದು. ಅವರು ಹೇಳುವಂತೆ ಮದುವೆಗೆ ಒಪ್ಪಿಗೆ ನೀಡಲೇ ಇಲ್ಲ. ಹೆಣ್ಣನ್ನು ಆಸ್ತಿಯಂತೆ ಬಲವಂತಪಡಿಸಬಾರದು. 1885ರಲ್ಲಿ ನ್ಯಾಯಮೂರ್ತಿ ರಾಬರ್ಟ್ ಪಿನ್‌ಹೆ ಅವರು ರೂಕ್ಮಾಬಾಯಿಯ ಪರ ತೀರ್ಪು ಕೊಟ್ಟರು. ಭಾರತದಲ್ಲಿ ಸಂಪ್ರದಾಯವಾದಿಗಳು ಬಿರುಸಾಗಿ ವಿರೋಧಿಸಿದರು. ಹೈಕೋರ್ಟ್ ತಿರುಗುಬಾಣ ಮತ್ತು ಧೈರ್ಯದ ಘೋಷಣೆ 1886ರಲ್ಲಿ ತೀರ್ಪು ತಿರುಗಿತು. 1887ರ ಮಾರ್ಚ್‌ನಲ್ಲಿ ನ್ಯಾಯಾಧೀಶ ಫೆರಾನ್ ತೀರ್ಪು ನೀಡಿದರು. 'ಗಂಡನ ಬಳಿ ಹೋಗಿ. ಇಲ್ಲದಿದ್ದರೆ ಜೈಲು.' ರೂಕ್ಮಾಬಾಯಿಯ ಪ್ರತಿಕ್ರಿಯೆ ಇತಿಹಾಸದಲ್ಲಿ ಅಕ್ಷರವಾಗಿದೆ. "ಸಮ್ಮತಿಯಿಲ್ಲದ ಮದುವೆಗೆ ಒಳಗಾಗುವುದಕ್ಕಿಂತ ಜೈಲಿಗೆ ಹೋಗಲು ಸಿದ್ಧ." ಈ ಮಾತು ಆಟ್ಲಾಂಟಿಕ್ ಸಮುದ್ರ ದಾಟಿತು. ಇಂಗ್ಲಿಷ್ ಪತ್ರಿಕೆಗಳು. ಮಹಿಳಾ ಸಂಘಟನೆಗಳು. ತಜ್ಞರು ರೂಕ್ಮಾಬಾಯಿಗೆ ಬೆಂಬಲ ಕೋರಿದರು. ಲೇಖಕಿ 'A Hindu Lady ಮತ್ತು ರಾಣಿ ವಿಕ್ಟೋರಿಯಾ ತನಕ ತಲುಪಿದ ಮನವಿ ರೂಕ್ಮಾಬಾಯಿ ತಮ್ಮ ತನವನ್ನು ಹಿಡಿದರು. The Times of India ಯಲ್ಲಿ "A Hinಜಣ ಐಚಿಜಥಿ" ಎಂಬ ಹೆಸರಿನಲ್ಲಿ ಲೇಖನಗಳನ್ನು ಬರೆದರು. ಬಾಲ್ಯವಿವಾಹದ ಕ್ರೂರತೆ, ಹುಡುಗಿಯರ ಕನಸುಗಳ ನಾಶ, ಶಿಕ್ಷಣದ ಕಳವು-all exposed. ಅವರು ರಾಣಿ ವಿಕ್ಟೋರಿಯಾಕ್ಕೆ ನೇರ ಪತ್ರ ಬರೆದು. 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗಿಯರ ಮದುವೆ ಕಾನೂನುಬದ್ಧ ವಾಗಬಾರದು ಎಂದು ಒತ್ತಾಯಿಸಿದರು. 1888ರಲ್ಲಿ ಪರಿಹಾರ ತಲುಪಿತು, ದಾದಾಜಿ 2,000 ರೂಪಾಯಿಗೆ ಮದುವೆಯಿಂದ ಕೈಬಿಟ್ಟರು. ರೂಕ್ಮಾಬಾಯಿ ಮುಕ್ತರಾದರು. ಡಾ. ಇಡಿತ್ ಪೀಚಿಯವರ ಸಹಕಾರದಿಂದ ರೂಕ್ಮಾಬಾಯಿ ಇಂಗ್ಲೆಂಡಿಗೆ ಹೋಗಿ ವೈದ್ಯಕೀಯ ವಿದ್ಯಾಭ್ಯಾಸ ಪಡೆದರು. 1894ರಲ್ಲಿ ಪದವಿ ಪಡೆದರು. ಭಾರತದ ಮೊದಲ ಮಹಿಳಾ ವೈದ್ಯೆಯರಲ್ಲಿ ಒಬ್ಬರು ದೇಶಕ್ಕೆ ಮರಳಿದ ನಂತರ 35 ವರ್ಷ ಮಹಿಳಾ ಆಸ್ಪತ್ರೆಗಳಲ್ಲಿ ಮುಖ್ಯ ವೈದ್ಯಾಧಿಕಾರಿ ಯಾಗಿ ಸೇವೆ ಸಲ್ಲಿಸಿದರು. ಸೂರತ್‌ನಲ್ಲಿ ಎಲ್ಲೆಡೆ ಮಹಿಳೆಯರ ಆರೋಗ್ಯಕ್ಕಾಗಿ ಶ್ರಮಿಸಿದರು. ಇದರ ಪರಿಣಾಮ-ಬಾಲ್ಯವಿವಾಹ ವಿರೋಧ ಕಾನೂನುಗಳ ಆರಂಭವಾಗಿ ರೂಕ್ಮಾಬಾಯಿಯ ಹೋರಾಟದ ಫಲವಾಗಿ 1891ರಲ್ಲಿ Age of Consent Act ಆಗಿ ಜಾರಿಗೆ ಬಂತು. ಇದು ಭಾರತದ ಹುಡುಗಿಯರ ಹಕ್ಕುಗಳಿಗಾಗಿ ಬಂದ ಮೊದಲ ಕಾನೂನು ಪರಿವರ್ತನೆ, ಅಂತಿಮ ದಿನಗಳು ಮತ್ತು ನಿತ್ಯಸ್ಮರಣೆ 1955ರ ಸೆಪ್ಟೆಂಬರ್ 25ರಂದು ರೂಕ್ಮಾಬಾಯಿ ನಿಧನರಾದರು.

ತನ್ನನ್ನು ಒತ್ತಾಯಿಸಿದ್ದ ಗಂಡನಿಗಿಂತಲೂ, ತನ್ನ ದೇಶದ ಮೇಲೆ ಆಳಿದ ಬ್ರಿಟಿಷ್ ಸಾಮ್ರಾಜ್ಯಕ್ಕಿಂತಲೂ, ಸಂಪ್ರದಾಯಗಳಿಗಿಂತಲೂ ಹೆಚ್ಚು ಕಾಲ ಬದುಕಿದ ಮಹಿಳೆ ಎಂಬ ಕೀರ್ತಿಯೊಂದಿಗೆ ಇತಿಹಾಸದಲ್ಲಿ ಛಾಪು ಮೂಡಿಸಿ ಪ್ರಸಿದ್ಧಿ ಹೊಂದಿದ ಇವರಿಗೆ 2017ರಲ್ಲಿ Google ಅವರ ಜನ್ಮದಿನಕ್ಕೆ ಡೂಡಲ್ ನೀಡಿ ಗೌರವಿಸಿತು.

ಆದರೆ ನಿಜವಾದ ಸ್ಮಾರಕವೇನೆಂದರೆ ಶಾಲೆಗೆ ಹೋಗುವ ಪ್ರತಿಯೊಂದು ಹುಡುಗಿ, ತಮ್ಮ ಭವಿಷ್ಯವನ್ನು ತಾವು ಆರಿಸುವ ಪ್ರತಿಯೊಂದು ಮಹಿಳೆ, "ಸಮ್ಮತಿ ಇಲ್ಲದೆ ಯಾವುದೂ ಸಾಧ್ಯವಿಲ್ಲ" ಎಂದು ಹೇಳುವ ಪ್ರತಿಯೊಂದು ಧ್ವನಿಯನ್ನು ರುಕ್ಮಾಬಾಯಿಯು ಐತಿಹಾಸಿಕ ಅಂದಿನ ಕಾಲದ ಬಾಲ್ಯವಿವಾಹದ ಬಾಗಿಲನ್ನು ಮುಚ್ಚಿ ಹೆಣ್ಣು ಮಕ್ಕಳ ಭವಿಷ್ಯಕ್ಕೆ ಬೆಳಕನ್ನು ಹಚ್ಚಿದ ಹೆಮ್ಮೆಭರಿತ ಹೆಸರು ಎಂದು ನಾವೆಲ್ಲರು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು.

# ಕೆಪಿಎಸ್‌ಸಿ ಅಕ್ರಮ ಸಿಐಡಿಗೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ದಲ್ಲಿ ನಡೆದಿರುವ ನೇಮಕಾತಿ ಅಕ್ರಮದ ತನಿಖೆ ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದೆ.

ಕೆಪಿಎಸ್‌ಸಿ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಎರಡು ಪ್ರಕರಣಗಳ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ ಎಂದು ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ನ್ಯಾಯ ಸಮ್ಮತ ಮತ್ತು ನಿಷ್ಪಕ್ಷಪಾತ ಜತೆಗೆ ಅಕ್ರಮದ ಸಮಗ್ರ ತನಿಖೆ ನಡೆಸುವ ಉದ್ದೇಶದಿಂದ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಕೆಪಿಎಸ್‌ಸಿ ನೇಮಕಾತಿ ಅಕ್ರಮದ ಬಗ್ಗೆ ದಾಖಲಾಗಿದ್ದ ಎರಡು ಪ್ರಕರಣಗಳನ್ನು ಮುಂದಿನ ತನಿಖೆಗೆ ಸಿಐಡಿಗೆ ವಹಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಕೆಪಿಎಸ್‌ಸಿ ನೇಮಕಾತಿ ಅಕ್ರಮದ ಪ್ರಕರಣಗಳನ್ನು ಸಿಐಡಿಗೆ ವರ್ಗಾಯಿಸುವ ಮೂಲಕ ಸ್ವತಂತ್ರ ಹಾಗೂ ಪಾರದರ್ಶಕ ತನಿಖೆ ನಡೆಸುವ ಸರ್ಕಾರದ ಬದ್ಧತೆಯನ್ನು ತೋರಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಸಾರ್ವಜನಿಕ ನೇಮಕಾತಿ ಪ್ರಕ್ರಿಯೆಗಳ ಪಾವಿತ್ರ್ಯ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡಲು ರಾಜ್ಯ ಸರ್ಕಾರ ಸಂಪೂರ್ಣ ಬದ್ಧವಾಗಿದೆ. ಪರೀಕ್ಷೆಗಳು ಅಥವಾ ನೇಮಕಾತಿ ಪ್ರಕ್ರಿಯೆಗಳಲ್ಲಿನ ಭ್ರಷ್ಟಾಚಾರ, ಅಕ್ರಮಗಳ ಬಗ್ಗೆ ಯಾವುದೇ ಒತ್ತಡವಿಲ್ಲದೆ ನಿಷ್ಪಕ್ಷಪಾತವಾದ ತನಿಖೆ ನಡೆಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಿಐಡಿ ತನಿಖೆಯಲ್ಲಿ ಕೆಪಿಎಸ್ಸಿ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ತಪ್ಪಿತಸ್ಥರು ಯಾವುದೇ ಹುದ್ದೆಯಲ್ಲಿ ಇರಲಿ, ಅವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಪಾವಿತ್ರ್ಯತೆಯನ್ನು ಕಾಪಾಡುವುದು ಮತ್ತು ಪ್ರತಿಭಾವಂತರಿಗೆ ನ್ಯಾಯ ದೊರಕುವಂತೆ ಮಾಡುವುದು ರಾಜ್ಯ ಸರ್ಕಾರದ ಆದ್ಯತೆಯಾಗಿದೆ. ಈ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ಗೃಹ ಸಚಿವರು ತಿಳಿಸಿದ್ದಾರೆ.

ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್ಸಿ) ದಲ್ಲಿ ಸರ್ಕಾರಿ ಹುದ್ದೆಗಾಗಿ ನಡೆದಿದೆ ಎನ್ನಲಾದ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ಎಫ್‌ಐಆರ್‌ಗಳು ದಾಖಲಾಗಿವೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ತಿಳಿಸಿದ್ದಾರೆ.

ಕಮೀಷನರ್ ಕಚೇರಿಯಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಎಸ್‌ಸಿ ಯಲ್ಲಿ ಹುದ್ದೆಗಾಗಿ ನಡೆದಿದೆ ಎನ್ನಲಾದ ಡೀಲಿಂಗ್ ಪ್ರಕರಣ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಮೂರು ಎಫ್‌ಐಆರ್‌ಗಳು ದಾಖಲಾಗಿವೆ ಎಂದು ಹೇಳಿದರು.

# ಬೆಂಗಳೂರು ಪಾದಚಾರಿ ಮಾರ್ಗ ತೆರವು ಆಂದೋಲನ (Safe Footpath Campaign)




**ಜು**ಲೈ 1, 2026 ರಂದು ಗ್ರೇಟರ್ ಬೆಂಗಳೂರು ಅಥಾರಿಟಿ (GBA) ನಗರದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಪಾದಚಾರಿ ಮಾರ್ಗ ಮುಕ್ತ ಆಂದೋಲನಕ್ಕೆ ಚಾಲನೆ ನೀಡಿತು. ಮೊದಲನೇ ದಿನವೇ ನಗರದ ಐದು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಒಟ್ಟು 76.55 ಕಿಲೋಮೀಟರ್ ಉದ್ದದ ಪಾದಚಾರಿ ಮಾರ್ಗವನ್ನು ಒತ್ತುವರಿಯಿಂದ ಮುಕ್ತಗೊಳಿಸಲಾಯಿತು.

ನಗರದಲ್ಲಿ ಪಾದಚಾರಿಗಳಿಗೆ ಸುರಕ್ಷಿತವಾಗಿ ಸಂಚರಿಸಲು ಅನುಕೂಲವಾಗುವಂತೆ ಫುಟ್‌ಪಾತ್‌ಗಳ ಮೇಲಿನ ಅಕ್ರಮ ಅಂಗಡಿಗಳು, ತಾತ್ಕಾಲಿಕ ಶೆಡ್‌ಗಳು ಹಾಗೂ ಇತರೆ ಅತಿಕ್ರಮಣಗಳನ್ನು ತೆರವುಗೊಳಿಸುವ ವಿಶೇಷ ಕಾರ್ಯಾಚರಣೆಯನ್ನು ಜಿಬಿಎ ಜೂನ್ 29 ರಿಂದ ಪ್ರಾರಂಭಿಸಿ ಹಂತ ಹಂತವಾಗಿ ನಗರದ ಎಲ್ಲಾ ರಸ್ತೆಗಳಿಗೂ ವಿಸ್ತರಿಸಿ ಮುಂದುವರೆಸಿತು. ಆದರೆ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಒಂದಾದ ಶಿವಾಜಿನಗರದಲ್ಲಿ ಫುಟ್‌ಪಾತ್ ಅತಿಕ್ರಮಣ ತೆರವು ಕಾರ್ಯಾಚರಣೆ ದಿನಾಂಕ ಜುಲೈ 21 ರಂದು ಬೆಳಿಗ್ಗೆ ಪ್ರಾರಂಭಿಸಿದ ವೇಳೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿ, ಕರ್ತವ್ಯ ನಿರ್ವಹಿಸುತ್ತಿದ್ದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (GBA) ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ ಘಟನೆ ತುಂಬಾ ದಾರುಣವಾಗಿ ತೀವ್ರತರವಾಗಿದ್ದು ಈ ಬಗ್ಗೆ ವಿಡಿಯೋ ಎಲ್ಲಾ ಟಿವಿ ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿ ಚರ್ಚೆಗೆ ಗ್ರಾಸವಾಗಿದೆ.

ಈ ವೇಳೆ ಹಲವಾರು ಮುಖ್ಯರಸ್ತೆಗಳಲ್ಲಿ ಕೆಲವು ವ್ಯಾಪಾರಿಗಳು ಹಾಗೂ ಸ್ಥಳೀಯರು ಕಾರ್ಯಾಚರಣೆಗೆ ವಿರೋಧ ವ್ಯಕ್ತಪಡಿಸಿದ್ದು, ಪರಿಸ್ಥಿತಿ ವಾಗ್ವಾದದಿಂದ ತಳ್ಳಾಟ-ನೂಕಾಟಕ್ಕೆ ತಿರುಗಿ, ಕೆಲ ಅಧಿಕಾರಿಗಳ ಮೇಲೆ ಹಲ್ಲೆ ನಡೆದಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಅಧಿಕಾರಿಗಳಿಗೆ ಚಿಕಿತ್ಸೆ ನೀಡಲಾಗಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸ್ಥಳಕ್ಕೆ ಆಗಮಿಸಿದ ಶಿವಾಜಿನಗರ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದು, ದಾಳಿ ನಡೆಸಿದ ಆರೋಪದಡಿ 10 ಮಂದಿಯನ್ನು ಬಂಧಿಸಿದ್ದಾರೆ. ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪ ಸೇರಿದಂತೆ ವಿವಿಧ ಕಾನೂನುಗಳ ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಿದ್ದಾರೆ.

ಒಂದು ಕಡೆ ಸಾರ್ವಜನಿಕರು ಪಾದಚಾರಿಗಳಿಗೆ ಫುಟ್‌ಪಾತ್‌ಗಳು ಮುಕ್ತವಾಗಿರಬೇಕು ಎಂದು ಒತ್ತಾಯಿಸುತ್ತಿದ್ದರೆ, ಮತ್ತೊಂದೆಡೆ ಬೀದಿ ವ್ಯಾಪಾರಿಗಳು ತಮ್ಮ ಜೀವನೋಪಾಯಕ್ಕೆ ಧಕ್ಕೆಯಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಬೀದಿ ವ್ಯಾಪಾರಿಗಳ ಹಕ್ಕುಗಳನ್ನು ರಕ್ಷಿಸುವ "ಸ್ಟ್ರೀಟ್ ವೆಂಡರ್ಸ್ (ಪ್ರೊಟೆಕ್ಷನ್ ಆಫ್ ಲೈವ್ಲಿಹುಡ್ ಅಂಡ್ ರೆಗ್ಯುಲೇಷನ್ ಆಫ್ ಸ್ಟ್ರೀಟ್ ವೆಂಡಿಂಗ್) ಕಾಯ್ದೆ-2014" ಪ್ರಕಾರ ಪರ್ಯಾಯ ವ್ಯವಸ್ಥೆ ಕಲ್ಪಿಸಿ, ಕಾನೂನುಬದ್ಧ ಕ್ರಮ ಅನುಸರಿಸಬೇಕು ಎಂಬ ಬೇಡಿಕೆಯೂ ಕೇಳಿಬರುತ್ತಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಜಿಬಿಎ ಅಧಿಕಾರಿಗಳು, ನಗರದ ಎಲ್ಲ ಫುಟ್‌ಪಾತ್‌ಗಳನ್ನು ಅತಿಕ್ರಮಣ ಮುಕ್ತಗೊಳಿಸುವ ಕಾರ್ಯಾಚರಣೆ ಮುಂದುವರಿಯಲಿದ್ದು ಇದು ಇತ್ತೀಚಿನ ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಸೂಚಿಸಿದಂತೆ ಸುರಕ್ಷಿತ ಪಾದಚಾರಿ ಒದಗಿಸಿಕೊಡಲು ಈ ಆಂದೋಲನವನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಶಿವಾಜಿನಗರದಲ್ಲಿ ಫುಟ್ ಪಾತ್ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಹಲ್ಲೆಗೆ ಒಳಗಾದ ಅಧಿಕಾರಿಗಳಿಗೆ ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡರವರು ದಿನಾಂಕ: ಜುಲೈ 24 ರಂದು ವಿಧಾನಸೌಧದ ತಮ್ಮ ಕಛೇರಿಯಲ್ಲಿ ಸನ್ಮಾನಿಸಿ ಧೈರ್ಯ ತುಂಬಿದರು. ಹಾಗೆಯೇ ಅಧಿಕಾರಿಗಳ ಕರ್ತವ್ಯನಿಷ್ಠೆ ಹಾಗೂ ಸಾರ್ವಜನಿಕ ಸೇವೆಯಲ್ಲಿನ ಅವರ ಬದ್ಧತೆಯನ್ನು ಶ್ಲಾಘಿಸಿದ ಅವರು. “ನಿಮ್ಮ ಸೇವೆಗೆ ಧನ್ಯವಾದಗಳು" ಎಂದು ಕೈ ಮುಗಿದು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಕೃಷ್ಣಬೈರೇಗೌಡ, "ಈ ಘಟನೆ ಬಗ್ಗೆ ತಿಳಿದು ನನಗೆ ನೋವಿನ ಜೊತೆಗೆ ಸಿಟ್ಟು ಕೂಡ ಬಂತು. ಸಾರ್ವಜನಿಕರ ಹಿತಕ್ಕಾಗಿ ಕೆಲಸ ಮಾಡುವ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವಾಗ ಹಲ್ಲೆಗೆ ಒಳಗಾಗುವುದು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ. ಸಾರ್ವಜನಿಕ ಕೆಲಸ ಮಾಡಿ ಪೆಟ್ಟು ತಿನ್ನಬೇಕಾ ಎಂಬ ಪ್ರಶ್ನೆ ನನ್ನಲ್ಲಿ ಮೂಡಿದೆ" ಎಂದು ಬೇಸರ ವ್ಯಕ್ತಪಡಿಸಿದರು. ಹಲ್ಲೆಗೊಳಗಾದ ಅಧಿಕಾರಿಗಳಾದ ಮಾಧವ ರಾವ್, ಗೌತಮ್, ಸಾವಿತ್ರಿ ಹಾಗೂ ರುಚಿತ ಅವರಿಗೆ ಸಚಿವರು ವಿಶೇಷವಾಗಿ ಸನ್ಮಾನಿಸಿ, ಮುಂದೆಯೂ ನಿರ್ಭಯವಾಗಿ ಕರ್ತವ್ಯ ನಿರ್ವಹಿಸುವಂತೆ ಪ್ರೋತ್ಸಾಹಿಸಿದರು. ಈ ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸ್ವಚ್ಛತೆ, ತ್ಯಾಜ್ಯ ತೆರವು ಹಾಗೂ ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಆದ್ಯತೆ ನೀಡಿ: ಆಯುಕ್ತ ಮಹೇಶ್ವರ್ ರಾವ್

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಆಗಸ್ಟ್ 1ರಿಂದ ಆರಂಭವಾಗಲಿರುವ “ತ್ಯಾಜ್ಯದಿಂದ ಸ್ವಾತಂತ್ರ್ಯ” ಅಭಿಯಾನದಲ್ಲಿ ಸ್ವಚ್ಛತೆ, ತ್ಯಾಜ್ಯ ತೆರವು ಹಾಗೂ ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಆದ್ಯತೆ ನೀಡಲು ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ರವರು ಅಧಿಕಾರಿಗಳು ಸೂಚನೆ ನೀಡಿದರು.

ಬೆಂಗಳೂರು ಉತ್ತರ ಹಾಗೂ ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಗಳವಾರ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕೆಳಕಂಡಂತೆ ನಿರ್ದೇಶನಗಳನ್ನು ನೀಡಿದ್ದಾರೆ.

**ಹೆಬ್ಬಾಳ ಜಂಕ್ಷನ್-ಎಸ್ಟೀಮ್ ಮಾಲ್ ಪ್ರದೇಶ:** * ಎಸ್ಟೀಮ್ ಮಾಲ್ ಮುಂಭಾಗದಲ್ಲಿ ನಡೆಯುತ್ತಿರುವ ಮೆಟ್ರೋ ಕಾಮಗಾರಿ ಪ್ರದೇಶದಲ್ಲಿ ಮಳೆನೀರು ಚರಂಡಿಗೆ ಕೊಳಚೆ ನೀರು (Sewer) ಹರಿಯುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ, ಜಲ ಮಂಡಳಿ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲಿಸಿ, ಯಾವ ಕಟ್ಟಡದಿಂದ ಕೊಳಚೆ ನೀರು ಹರಿಯುತ್ತಿದೆ ಎಂಬುದನ್ನು ಪತ್ತೆಹಚ್ಚಿ ಸಂಬಂಧಿಸಿದ ಕಟ್ಟಡ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಿ ಸಮಸ್ಯೆಯನ್ನು ಶೀಘ್ರದಲ್ಲಿ ಪರಿಹರಿಸುವಂತೆ ಸೂಚಿಸಲಾಯಿತು.

* ಮೆಟ್ರೋ ಕಾಮಗಾರಿ ಪ್ರದೇಶದಲ್ಲಿ ಹಾಳಾಗಿರುವ ಚರಂಡಿ ಸ್ಲ್ಯಾಬ್‌ಗಳನ್ನು ಬದಲಿಸಿ, ತೆರೆದಿರುವ ಚರಂಡಿಗಳಿಗೆ ಹೊಸ ಸ್ಲ್ಯಾಬ್ ಅಳವಡಿಸಿ ಸಾರ್ವಜನಿಕ ಸುರಕ್ಷತೆ ಖಚಿತಪಡಿಸಿಕೊಳ್ಳುವಂತೆ ಸೂಚಿಸಲಾಯಿತು.

* ಎಸ್ಟೀಮ್ ಮಾಲ್ ಬಳಿಯ ಸಾರ್ವಜನಿಕ ಶೌಚಾಲಯದ ಸ್ವಚ್ಛತೆ ಹಾಗೂ ನಿರ್ವಹಣೆಯನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

* ಎಸ್ಟೀಮ್ ಮಾಲ್‌ನಿಂದ ಹೆಬ್ಬಾಳ ಜಂಕ್ಷನ್‌ವರೆಗೆ ಎಡಭಾಗದಲ್ಲಿರುವ KIADB ಹಾಗೂ BDA ಭೂಸ್ವಾಧೀನ ಪ್ರದೇಶಗಳಲ್ಲಿ ಮತ್ತು ಮೆಟ್ರೋ ಕಾಮಗಾರಿ ಪ್ರದೇಶದಲ್ಲಿ ದೀರ್ಘಕಾಲದಿಂದ ಸಂಗ್ರಹವಾಗಿರುವ ಡೆಬ್ರಿಸ್ ಹಾಗೂ ಬೆಳೆದಿರುವ ಗಿಡಗಂಟೆಗಳನ್ನು ಆಗಸ್ಟ್ 1ರಿಂದ ಆರಂಭವಾಗುವ “ತ್ಯಾಜ್ಯದಿಂದ ಸ್ವಾತಂತ್ರ್ಯ” ಅಭಿಯಾನದಡಿ ತೆರವುಗೊಳಿಸಿ ಪ್ರದೇಶವನ್ನು ಸ್ವಚ್ಛ ಹಾಗೂ ಸುಂದರವಾಗಿಸಲು ಬೆಂಗಳೂರು ಉತ್ತರ ನಗರ ಪಾಲಿಕೆ, KIADB, BDA ಹಾಗೂ BMRCL ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಸೂಚಿಸಲಾಯಿತು.

* ಹೆಬ್ಬಾಳ ಜಂಕ್ಷನ್‌ನ ಕೆ.ಆರ್.ಪುರಂ ಕಡೆಗಿನ ಎಡ ತಿರುವು ಹಾಗೂ ಮೇಲ್ಸೇತುವೆ ಪಕ್ಕದ ಸರ್ವೀಸ್ ರಸ್ತೆಯ ಮಧ್ಯದಲ್ಲಿರುವ ಐಲ್ಯಾಂಡ್ ಪ್ರದೇಶದಲ್ಲಿನ ಡೆಬ್ರಿಸ್ ತೆರವುಗೊಳಿಸಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ Place Making ಸೌಲಭ್ಯಗಳೊಂದಿಗೆ



ಅಭಿವೃದ್ಧಿಪಡಿಸಲು BDA ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

* ಹೆಬ್ಬಾಳ ಜಂಕ್ಷನ್‌ನಿಂದ BEL ಸರ್ಕಲ್ ಕಡೆಗೆ K-RIDE ವತಿಯಿಂದ ನಡೆಯುತ್ತಿರುವ ಕಾಮಗಾರಿ ಪ್ರದೇಶದಲ್ಲಿರುವ ಮಣ್ಣು, ಡೆಬ್ರಿಸ್ ಹಾಗೂ ಗಿಡಗಂಟೆಗಳನ್ನು ಆಗಸ್ಟ್ 1ರಿಂದ ಆರಂಭವಾಗುವ ಅಭಿಯಾನದಡಿ ತೆರವುಗೊಳಿಸುವ ಕಾರ್ಯ ಕೈಗೊಳ್ಳಲಾಗುವುದು ಎಂದು K-RIDE ಅಧಿಕಾರಿಗಳು ಮಾಹಿತಿ ನೀಡಿದರು.

* ಭದ್ರಪ್ಪ ಲೇಔಟ್ ಮೇಲ್ಸೇತುವೆ ಇಳಿಜಾರು (Ramp) ಭಾಗದಲ್ಲಿ ಪ್ರಯಾಣಿಕರು ಬಸ್ ನಿಲ್ದಾಣವನ್ನು ಬಳಸದೇ ರಸ್ತೆಯಲ್ಲೇ ಬಸ್ ಏರುತ್ತಿರುವುದು ಅಪಾಯಕಾರಿ ಎಂದು ಸೂಚಿಸಿದ ಮುಖ್ಯ ಆಯುಕ್ತರು, BMTC ಹಾಗೂ ಬಿ-ಸ್ಮೈಲ್ ಹೈ ಡೆನ್ಸಿಟಿ ಕಾರಿಡಾರ್ (HDC) ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಬಸ್ ಶೆಲ್ಟರ್ ಅನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಿ, ಬಸ್‌ಗಳು ಅಲ್ಲೇ ನಿಲ್ಲುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

# ನಬಾಟಿಯನ್ನರ ನಾಡಿನಲ್ಲಿ (ಮಧ್ಯಪ್ರಾಚ್ಯದ ರಹಸ್ಯಗಳು)

## ಸಾಹಸಿ ಕನ್ನಡಿಗನೊಬ್ಬನ ಪ್ರವಾಸಿ ಕಥನ




**(ಹಿಂದಿನ ಸಂಚಿಕೆಯಿಂದ)**

**ಸ**ಫಾರಿ ಮುಗಿಸಿದ ನಮ್ಮನ್ನು ನಮ್ಮ Transporter ಅದ್ನಾನ್ ಜೋರ್ಡಾನಿನ ದಕ್ಷಿಣದ ತುದಿ ಅಕಾಬ ನಗರಕ್ಕೊಮ್ಮೆ ರೌಂಡು ಹಾಕಿಸಿ ನಾಲ್ಕು ಗಂಟೆಗಳ, 270 ಕಿ.ಮೀ.ಗಳ ಇಸ್ರೇಲು ಬಾರ್ಡರಿನೊಂದಿಗಿನ ಡ್ರೈವಿಗೆ ಸಜ್ಜಾದ. ಅದ್ನಾನ್ ನೇರ ನಿಷ್ಟುರ ವ್ಯಕ್ತಿ. ವಯಸ್ಸು ಅರವತ್ತೆರಡು. ಆಗಾಗ ಕೆಮ್ಮುತ್ತಲೇ ಇದ್ದ. ಅರವತ್ತರಲ್ಲೂ ಕುಸ್ತಿ ಮಾಡಲು ಮಾತ್ರ ಮುಂದೆ ಇದ್ದಂತಿತ್ತು. ತಲೆಯನ್ನು ನುಣ್ಣಗೆ ಬೋಳಿಸಿಕೊಂಡಿದ್ದ. Hollywood ನ Jason Statham ನ ಲುಕ್ಕು ಅವನದು. ಎರಡು ಗಂಟೆಗೊಮ್ಮೆ ಸಿಗರೇಟು ಹೊಡೆಯದಿದ್ದರೆ ಚಡಪಡಿಸಿಬಿಡುತ್ತಿದ್ದ. ಮಾರ್ಗ ಮಧ್ಯದಲ್ಲಿ ಇರುತ್ತಿದ್ದ ಸೂಪರ್ ಮಾರ್ಕೇಟು ತರಹದ ಸ್ಟಾಪುಗಳಲ್ಲಿ ಹೋಗಿ ಸಿಗರೇಟೊಂದನ್ನ ಹಚ್ಚಿ ಒಂದು ಧಮ್ ಹೊಡೆದ ನಂತರ ನಿರಾಳನಾಗುತ್ತಿದ್ದ. ಜೋರ್ಡಾನಿನ ಹೈವೆಯ ಕೆಲ ಸ್ಥಳಗಳಲ್ಲಿ ಸೂಪರ್ ಮಾರ್ಕೆಟ್ ರೀತಿಯ ಶಾಪುಗಳಿರುತ್ತಿದ್ದವು. ಹೊರಗಡೆಯಿಂದ ಬಾಗಿಲು ಮುಚ್ಚಿದ ಅಂತಾ ಏನೂ ಅಟ್ರಾಕ್ಷನ್ ಇಲ್ಲದ ಒಂದೇ ಮಹಡಿಯ ಬಿಲ್ಡಿಂಗುಗಳವು. ಅವುಗಳ ಬಾಗಿಲು ತಳ್ಳಿ ಒಳಗೆ ಹೋದರೆ ಮಾತ್ರ ಕಲರ್ ಫುಲ್ ಶಾಪುಗಳವು.

ಬಫೆ ಊಟದಿಂದಿಡಿದು ಶಾಪಿಂಗ್ ಐಟಮ್ಮುಗಳು ಸಾಲುಸಾಲು ಇರುತ್ತಿದ್ದವು. ಕೆಲ ಸೀ ಶೆಲ್‌ನಿಂದ ತಯಾರಿಸಿದ ಫರ್ನೀಚರುಗಳು, ಮಹಿಳೆಯರ ಬ್ಯಾಗುಗಳು, ಮೇಕಪ್ಪು ಸಾಧನಗಳ ಬೆಲೆ ಗಗನದಷ್ಟು. ಸುಮಾರು ಅರವತ್ತರ ಬ್ರಿಟೀಷ್ ಹೆಂಗಸೊಬ್ಬಳು ಸೀ ಶೆಲ್‌ನಿಂದ ಮಾಡಿದ ಎರಡು ಛೇರು ಒಂದು ಸಣ್ಣ ಟೀಪಾಯಿಯನ್ನು ಎರಡುವರೆ ಸಾವಿರ ದಿನಾರ್ (ಅಂದಾಜು ಮೂರು ಲಕ್ಷ ರೂಪಾಯಿ)ಗೆ ಕೊಂಡುಕೊಂಡು ಅರೇಬ್ಬಿಯನೊಂದಿಗೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರೆ ಅವಳ ಗಂಡ ಮಿಕ ಅದ್ಯಾರ್ಯಾರಿಗೋ ಫೋನ್ ಮಾಡಿ ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದ. ದಾರಿಯುದ್ದಕ್ಕೂ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಇಸ್ರೇಲಿನ ಹೈವೇಯೊಂದು ಇತ್ತು. ವಾಹನ ಸಂಚಾರ ಸ್ಪಷ್ಟವಾಗಿ ಬರಿಗಣ್ಣಿಗೆ ಕಾಣುತ್ತಿತ್ತು. ಒಮ್ಮೆ ರಸ್ತೆ ಹತ್ತಿರವಾಗುತ್ತಿದ್ದರೆ ಮತ್ತೊಮ್ಮೆ ದೂರವಾಗುತ್ತಿತ್ತು. ಎರಡೂ ಕಡೆ ಬರಡು ಗುಡ್ಡಗಳ ಸರಣಿ. ಏಸುಕ್ರಿಸ್ತ ಹುಟ್ಟಿ ಬೆಳೆದು ತಿರುಗಾಡಿ ಕ್ರೈಸ್ತ ಧರ್ಮ ಸ್ಥಾಪಿಸಿದನೆಂದು ಹೇಳಲಾಗುವ ಜಾಗಗಳವು. ಇಸ್ರೆಲಿನ ನಾಲ್ಕು ಗಂಟೆಗಳ ಸತತ ಡ್ರೈವ್ ನಂತರ ಬಂದು ತಲುಪಿದ್ದು ಸಮುದ್ರ ಮಟ್ಟದಿಂದಲೂ ಕೆಳಗಿನ ಮತ್ತೊಂದು ವಿಸ್ಮಯಕ್ಕೆ. ಅದರೆಸರು ಡೆಡ್ ಸೀ/ ಮೃತ ಸಮುದ್ರ/ಸತ್ತ ಸಮುದ್ರ. ಅಲ್ಲಿ ಯಾವ ಸಸ್ಯ ಪ್ರಾಣಿಗಳೂ ಬದುಕೋಲ್ಲ. ಅದಕ್ಕದು ಸತ್ತ ಸಮುದ್ರ.

ಈಜು ಬಾರದ ಮನುಷ್ಯನೊಬ್ಬ ಸಮುದ್ರದಲ್ಲಿ ತೇಲುತ್ತಾ ಮಲಗಬಹುದು ಅನ್ನುವ ಕಲ್ಪನೆಯೇ ಎಷ್ಟೊಂದು ಅದ್ಭುತ. ಅದನ್ನು ನನಸು ಮಾಡೋದು Dead Sea. ಗುಂಡಗಿರುವ ಭೂಮಿಯ ಭೂಭಾಗದ ಸುತ್ತ ಅದರ ಎರಡು ಪಟ್ಟು ಸಮುದ್ರದ ನೀರು Gravitational Force ನಿಂದಾಗಿ ಒಂದು ಲೆವೆಲ್ಲಿನಲ್ಲಿ ನಿಂತಿರುತ್ತೆ. ಆದರೆ ನೀವು ಸತ್ತ ಸಮುದ್ರದಲ್ಲಿದ್ದೀರೆಂದರೆ ಸೀ ಲೆವೆಲ್ಲಿಗಿಂತ ಸುಮಾರು ನಾಲ್ಕು ನೂರು ಮೀಟರು ಕೆಳಗಿದ್ದೀರಿ ಎಂದರ್ಥ. ಮನುಷ್ಯನೊಬ್ಬ ಈಜು ಬಾರದೆ ಹೇಗೆ ತೇಲುತ್ತಾನೆಂದು ತಿಳಿದುಕೊಳ್ಳುವ ಮೊದಲು ನೀವು ರಸಾಯನಶಾಸ್ತ್ರದ Density (ಸಾಂದ್ರತೆ), Salinity (ಕ್ಷಾರೀಯತೆ/ ಲವಣೀಯತೆ) ಮತ್ತು Buoyancy (ತೇಲುವಿಕೆ) ಶಬ್ದಗಳನ್ನು ಅರ್ಥಮಾಡಿಕೊಳ್ಳಬೇಕು. ನಾವೆಲ್ಲರೂ ನೋಡಿರುವ ಸಮುದ್ರದ Salinity ಶೇಕಡಾ 3.5%. ಆದರೆ ಸತ್ತ ಸಮುದ್ರದ Salinity 34.2%. ಅಂದರೆ ಮಾಮೂಲಿ ಸಮುದ್ರಕ್ಕಿಂತ ಹತ್ತು ಪಟ್ಟು ಹೆಚ್ಚು. ಅಂದರೆ ಅದರ ಕ್ಷಾರೀಯತೆಯ ಮಟ್ಟವನ್ನು ನೀವು ಊಹಿಸಬಹುದು. ಕಡಿಮೆ Density ಯ ವಸ್ತುಗಳು ಅದಕ್ಕಿಂತ ಹೆಚ್ಚು ಆಜಟುಣಥಿಯ ದ್ರವ ವಸ್ತುಗಳ ಮೇಲೆ Upward Force ನಿಂದಾಗಿ ತೇಲುವುದನ್ನೇ Buoyancy ಎಂದು ಕರೆಯೋದು. ಉದಾಹರಣೆಗೆ ಮನುಷ್ಯನ ಸರಾಸರಿ ಸಾಂದ್ರತೆ ಕ್ಯೂಬಿಕ್ ಮೀಟರ್ ಒಂದಕ್ಕೆ 985 ಏಉ ಆದರೆ, ಸತ್ತ ಸಮುದ್ರದ ಸಾಂದ್ರತೆ ಕ್ಯೂಬಿಕ್ ಮೀಟರ್ ಒಂದಕ್ಕೆ 1240 KG. ಆದ್ದರಿಂದ ತನಗಿಂತ ಕಡಿಮೆ ಸಾಂದ್ರತೆ ಹೊಂದಿರುವ ಮನುಷ್ಯನನ್ನು ಡೆಡ್ ಸೀ ತೇಲಿಸಿಬಿಡುತ್ತೆ. ಆಕ್ಚುಯಲಿ ಡೆಡ್ ಸೀ ಒಂದು ಸಮುದ್ರವೇ ಅಲ್ಲ. ಅದೊಂದು ಭೂ ಭಾಗಗಳಿಂದ ಲಾಕ್ ಆಗಿರುವ ಐವತ್ತು ಕಿ.ಮೀ ಉದ್ದ, ಗರಿಷ್ಠ ಹದಿನೈದು ಕಿ.ಮಿ. ಅಗಲವಿರುವ, ಇಸ್ರೇಲು ಜೋರ್ಡಾನು ಸಮವಾಗಿ ಹಂಚಿಕೊಂಡಿರುವ ಕೆರೆ. ಅದಕ್ಕೀಗ ಹೊರ ಹರಿವು ಇಲ್ಲ. ಆದರೆ ಒಂದಾನೊಂದು ಕಾಲದಲ್ಲಿ (Few million years Ago) ಅದು ಮೆಡಿಟರೇನಿಯನ್ ಸಮುದ್ರದ ಭಾಗವೇ ಅಗಿದ್ದು, ತದನಂತರ ಭೂ ಅಂತರಾಳದ Tectonic ಆ್ಯಕ್ಟಿವಿಟಿಯಿಂದಾಗಿ ಪಶ್ಚಿಮಕ್ಕೆ ತಳ್ಳಲ್ಪಟ್ಟು ಇದೀಗ Land Locked Lake ಆಗಿ ಬದಲಾಗಿದೆ. ಡೆಡ್ ಸೀ ಯಲ್ಲಿ ಸುಮಾರು ಇಪ್ಪತ್ತಾರಕ್ಕೂ ಹೆಚ್ಚು ಖನಿಜಗಳಿವೆ. ಇಸ್ರೇಲು ಮತ್ತು ಜೋರ್ಡಾನು ಟನ್ನುಗಟ್ಟಲೆ ಪೊಟಾಷ್, ಬ್ರೋಮೈಡ್, ಕಾಸ್ಟಿಕ್ ಸೋಡ, ಮೆಗ್ನೀಷಿಯಂ, ಸೋಡಿಯಂಗಳನ್ನು ಉತ್ಪಾದಿಸುತ್ತವೆ. ಜೋರ್ಡಾನಿನ ಅರಬ್ ಪೊಟ್ಯಾಷ್ ಎಂಬ ಕಂಪನಿಯೊಂದೆ ಹಲವು ಕಿ.ಮೀ.ಗಳಷ್ಟು ಉದ್ದಕ್ಕಿತ್ತು.

ಡೆಡ್ ಸೀ ಉತ್ಪಾದಿಸುವ ವಿಶೇಷ Asphalt (ಡಾಂಬರು) ಅನ್ನು ಪುರಾತನ ಈಜಿಪ್ಷಿಯನ್ನರು ಮಮ್ಮಿ ಮಾಡಲು ಬಳಸುತ್ತಿದ್ದರಂತೆ. ಡೆಡ್ ಸೀಯ ಮಡ್ ಬಾತ್ ಬಹಳ ಪಾಪ್ಯುಲರ್. ಅಲ್ಲಿ ಸಿಗುವ ಕಪ್ಪು ಬಣ್ಣದ ಮಣ್ಣನ್ನು ಮುಖ ಮತ್ತು ದೇಹಕ್ಕೆಲ್ಲ ಹಚ್ಚಿ ಒಂದತ್ತು ನಿಮಿಷದ ನಂತರ ತೊಳೆದು ಕೊಳ್ಳುವುದು ವಾಡಿಕೆ. ಅದರಲ್ಲಿನ ರಿಚ್ ಮಿನರಲ್ಲುಗಳು ಚರ್ಮಕ್ಕೆ ಕಾಂತಿ ನೀಡಿ, ಸುಕ್ಕನ್ನು ಹೋಗಲಾಡಿಸುತ್ತಂತೆ. ಅಷ್ಟೇ ಅಲ್ಲದೆ ಮೈ ಕೈ ನೋವನ್ನೂ ತೆಗೆದು ಹಾಕಿ, ಚರ್ಮದ ಡೀಟಾಕ್ಸ್ ಮಾಡುತ್ತೆ. ಇನ್ನೂ ಹಲವು ಮೆಡಿಕಲ್ ಬೆನಿಫಿಟ್ಟುಗಳಿವೆ ಎಂದು ಹೇಳಲಾಗುತ್ತೆ. ಒಟ್ಟಾರೆ ಡೆಡ್ ಸೀ ಒಂದು ಪುಗುಸಟ್ಟೆ ನ್ಯಾಚುರಲ್ ಸ್ಪಾ. ಅಲ್ಲಿನ ಸೂರ್ಯಾಸ್ತ ಮೈ ಮನಗಳಿಗೆಲ್ಲ ಹಿತ. ಸೂರ್ಯ, ಅರೆನಗ್ನ ಬೆಡಗಿಯರ ಮೇಲೆಲ್ಲ ಹಿತವಾಗಿ ರಂಗುಗಳನ್ನು ಚೆಲ್ಲಿ ಇನ್ನಷ್ಟು ಸೌಂದರ್ಯ ಹೆಚ್ಚಿಸುತ್ತ, ಇಸ್ರೇಲಿನ Judaea ಬೆಟ್ಟಗಳ ಹಿಂದಕ್ಕೆ ಕರಗಿ ಹೋಗಿ ಬಿಡುತ್ತಾನೆ. ಕತ್ತಲೆಯಾದಂತೆ ಸಮುದ್ರಾದೆಚೆಗಿನ ಮಗ್ಗುಲಿನಲ್ಲಿ ಲೈಟುಗಳು ಕಾಣಿಸಿಕೊಳ್ಳುತ್ತವೆ. ಅದು ಪ್ಯಾಲಿಸ್ಟೈನ್ ವೆಸ್ಟ್ ಬ್ಯಾಂಕಿನ Jericho ಸಿಟಿ. ನಾವುಳಿದುಕೊಂಡಿದ್ದ ಮೂವೆನ್ ಪಿಕ್ ಪಂಚತಾರಾ ಹೊಟೇಲ್ಲಿನ ಲ್ಯಾಡ್ ಸ್ಕೇಪು ಮತ್ತದರ ಗಾರ್ಡನಿಂಗು ಡೆಡ್ ಸೀ ಯ ಸುಂದರ ಸಂಜೆಯನ್ನು ಮತ್ತಷ್ಟು ಸುಂದರವನ್ನಾಗಿಸಿತ್ತು. ಆದರೆ ಅದಕ್ಕಿಂತಲೂ ಮೈಮನಗಳಿಗೆ ಮುದ ನೀಡಿದ್ದು ರಾತ್ರಿ ಎಂಟಕ್ಕೆ ಹತ್ತು ನಿಮಿಷ ಸುರಿದ ಮಳೆ. ಮರುಭೂಮಿಯೊಂದರಲ್ಲಿ ಮಳೆಯಲ್ಲಿ ಮೊದಲ ಬಾರಿ ನೆನೆದ ನೆನಪು ಜೀವನದುದ್ದಕ್ಕೂ ಉಳಿಯಲಿದೆ. ಖಣ ತಿಛಿ ಈಛಿಛಿಟಿಚಿಣುಟಿರ. ಜೋರ್ಡಾನು ಒಟ್ಟಾರೆ ಘಾಂಡಿಣು Visiting country with all precautions. But Definitely not at the Time of Arab wars or Palestinian Issues. ವರುಷಕ್ಕೆ ಐದತ್ತು ಇಂಚು ಮಳೆಯಾಗುತ್ತೆ. ಪಶ್ಚಿಮ ಜೋರ್ಡಾನಿನಲ್ಲಿ ಒಂದೆರಡು ತಿಂಗಳು Snowfall ಕೂಡ ಆಗುತ್ತೆ. ಮರುಭೂಮಿಯ ಮಧ್ಯದಲ್ಲಿ polythene ಶೀಟುಗಳನ್ನು ಹಾಕಿಕೊಂಡು ಮಿತವಾದ ನೀರು ಬಳಸಿ ಬಹುತೇಕ ತರಕಾರಿ, ಹಣ್ಣುಗಳನ್ನು ಬೆಳೆಯಯಲಾಗುತ್ತೆ. ಜಗತ್ತಿನ Top Ten ಆಲಿವ್ ಬೆಳೆಯುವ ದೇಶಗಳಲ್ಲೊಂದು ಜೋರ್ಡಾನು.



Mt. Nebo ಬೆಟ್ಟದಲ್ಲಿ ಪೋಪ್ ಜಾನ್ ಪಾಲ್ ನೆಟ್ಟಿರುವ ಆಲಿವ್ ಗಿಡವೀಗ ಹಣ್ಣುಗಳಿಂದ ಕೂಡಿದೆ.

ಕುರಿಯ ಮಾಂಸದಿಂದ ಮಾಡಿದ ಅಲ್ಲಿಯ ರಾಷ್ಟ್ರೀಯ ಫುಡ್ ಮನ್ಸಾಫ್ ಸ್ವಾದಿಷ್ಟಕರ. Konafa ಎಂಬುವ ಸಿಹಿತಿಂಡಿ ಕೂಡ ರುಚಿಕರ. ಮಡಾಬಾದ ಗ್ರೀಕ್ ಆರ್ಥೋಡಾಕ್ಸ್ ಚರ್ಚುಗಳು, ಪೆಟ್ರಾ ಮತ್ತು ಅಮ್ಮಾನಿನಲ್ಲಿ ಬಿಕ್ಷೆ ಬೇಡುವ ಹಲವು ಮುಸ್ಲಿಂ ಮಹಿಳೆಯರು, ಮೂಲ ಜೋರ್ಡಾನಿಯರನ್ನೇ ಮೀರಿಸುತ್ತಿರುವ ನಿರಾಶ್ರಿತ ಪ್ಯಾಲಿಸ್ಟೀನಿಯರು, ಟೋಟಲಿ ಸಿರಿವಂತಿಕೆ ಬಡತನಗಳೆರಡರ ಮಿಶ್ರಣ ಜೋರ್ಡಾನು. ನಕ್ಷತ್ರವೊಂದನ್ನು ಹೊರತುಪಡಿಸಿ ಜೋರ್ಡಾನು ಮತ್ತು ಪ್ಯಾಲಿಸ್ಟೀನಿನ ರಾಷ್ಟ್ರಧ್ವಜಗಳು ಬಹುತೇಕ ಸೇಮ್ ಟು ಸೇಮ್. ಕೊನೇ ದಿನ ಅಮ್ಮಾನು ನಗರ ಸುತ್ತುವ ಧೈರ್ಯ ಮಾಡದೆ ಡೆಡ್ ಸೀಯಲ್ಲೇ ಒಂದಷ್ಟು ಸಮಯ ಕಳೆದು ಏರ್ ಪೋರ್ಟುಕಡೆ ಪ್ರಯಾಣ ಬೆಳೆಸಿದಿವಿ. ಅದ್ನಾನ್ ಬಳಿ ಕಾರು ತೆಗೆದುಕೊಂಡು ಲೆಫ್ಟ್ ಹ್ಯಾಂಡ್ ಡ್ರೈವ್‌ನ ಕಾರನ್ನೊಂದಷ್ಟು ದೂರ ಓಡಿಸಿದೆ. ಶುಕ್ರವಾರದ ಪ್ಯಾಲಿಸ್ಟೀನೀಯರ ಆರ್ಭಟ, ಜಗತ್ತಿನ ಅದ್ಭುತಗಳಲ್ಲೊಂದಾದ ಪೆಟ್ರಾ, ಅನ್ಯಗ್ರಹದ ಹಾಗಿರುವ ವಾಡಿರಮ್ ಡೆಸರ್ಟು, ಇಸ್ರೇಲು ಸಿರಿಯಾ ಇರಾಕಿನ ಬಾರ್ಡರ್ರು, ಡೆಡ್ ಸೀಯಲ್ಲಿ ತೇಲುತ್ತಾ ಮಲಗಿದ್ದು ಯೆಹೂದಿ ಅರಬ್ಬರ ನಡುವಿನ ಯುದ್ಧದಂತಹ ಯುದ್ಧದ ಮಗ್ಗುಲಿಗೆ ಹೋಗಿ ಬಂದಿದ್ದು ಎಲ್ಲವುಗಳನ್ನು ಮೆಲುಕು ಹಾಕುತ್ತ ಏರ್‌ಪೋರ್ಟಿಗೆ ಬಂದಿದ್ದೆ. Immigration ನಲ್ಲಿ ನನ್ನ ಹ್ಯಾಂಡ್ ಬ್ಯಾಗಿನಲ್ಲಿದ್ದ ಬೈನಾಕ್ಯುಲರ್ ನೋಡಿ ಅಧಿಕಾರಿಯೊಬ್ಬ ಹತ್ತು ನಿಮಿಷ Enquiry ಮಾಡಿ ಒಳಗೆ ಬಿಟ್ಟ. ಮತ್ತೊಮ್ಮೆ ಎದೆ ಧಗ್ ಅಂದಿತ್ತು. ಡೆಡ್ ಸೀ ಇಂದ ಒಂದು ಬಾಟಲ್ ನೀರು, ಒಂದಷ್ಟು ನ್ಯಾಚುರಲ್ ಕ್ರಿಸ್ಟಲ್ ಸಾಲ್ಟು, ಪೆಟ್ರಾದಿಂದ ಸ್ಯಾಂಡ್ ಆರ್ಟಿನ ಬಾಟಲ್ಲನ್ನು ಜೋರ್ಡಾನು ನೆನಪಿಗಾಗಿ ತೆಗೆದುಕೊಂಡೆ. ಏರ್ ಅರೇಬಿಯಾ ನಮ್ಮನ್ನೊತ್ತು ಸಾಗುತ್ತಿದ್ದಂತೆ ಹುಚ್ಚು ಸಾಹಸ ಸುಖಾಂತ್ಯ ಕಂಡಿತ್ತು.

**ಲೇಖಕರು:ದಿವಿನ್ ಮಗ್ಗಲಮಕ್ಕಿ, ಚಿಕ್ಕಮಗಳೂರು**

# ಎಚ್‌ಎಂಟಿ ಹಾದಿಯಲ್ಲಿದೆಯೇ ಇಸ್ರೋ? ಪ್ರತಿಭೆಗಳ ನಿರ್ಗಮನದ ಬಗ್ಗೆ ಹೆಚ್ಚುತ್ತಿರುವ ಆತಂಕ




**ಭಾ**ರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ವಿಶ್ವದ ಗಮನ ಸೆಳೆದಿರುವ ಅನೇಕ ಸಾಧನೆಗಳನ್ನು ಮಾಡುತ್ತಿದ್ದರೂ, ಸಂಸ್ಥೆಯಿಂದ ಅನುಭವಿ ವಿಜ್ಞಾನಿಗಳು ಖಾಸಗಿ ವಲಯದತ್ತ ಮುಖ ಮಾಡುತ್ತಿರುವ ಬೆಳವಣಿಗೆ ಚರ್ಚೆಗೆ ಕಾರಣವಾಗಿದೆ. ಈ ಪ್ರತಿಭಾ ವಲಸೆ (Brain Drain) ದೀರ್ಘಾವಧಿಯಲ್ಲಿ ಇಸ್ರೋದ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರಬಹುದೇ ಎಂಬ ಪ್ರಶ್ನೆ ಮೂಡಿದೆ. ಇತ್ತೀಚಿನ ವರ್ಷಗಳಲ್ಲಿ ಅನೇಕ ವಿಜ್ಞಾನಿಗಳು ನಿವೃತ್ತಿಗೆ ಮುನ್ನವೇ ರಾಜೀನಾಮೆ ನೀಡಿ ಖಾಸಗಿ ಬಾಹ್ಯಾಕಾಶ ಸಂಸ್ಥೆಗಳನ್ನು ಸೇರಿದ್ದಾರೆ. ಖಾಸಗಿ ವಲಯದಲ್ಲಿ ಹೆಚ್ಚಿನ ವೇತನ, ಆಧುನಿಕ ಸಂಶೋಧನಾ ಸೌಲಭ್ಯ, ವೇಗವಾದ ನಿರ್ಧಾರ ಪ್ರಕ್ರಿಯೆ ಹಾಗೂ ವೃತ್ತಿಜೀವನದ ಉತ್ತಮ ಅವಕಾಶಗಳು ದೊರೆಯುತ್ತಿರುವುದು ಈ ಪ್ರವೃತ್ತಿಗೆ ಪ್ರಮುಖ ಕಾರಣವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಭಾರತದಲ್ಲಿ ಬಾಹ್ಯಾಕಾಶ ಕ್ಷೇತ್ರಕ್ಕೆ ಖಾಸಗಿ ಕಂಪನಿಗಳಿಗೆ ಅವಕಾಶ ಕಲ್ಪಿಸಿದ ಬಳಿಕ ಹೊಸ ತಲೆಮಾರಿನ ಸ್ಟಾರ್ಟ್‌ಅಪ್‌ಗಳು ವೇಗವಾಗಿ ಬೆಳೆಯುತ್ತಿವೆ. ಇವು ಅನುಭವಿ ವಿಜ್ಞಾನಿಗಳನ್ನು ಹೆಚ್ಚಿನ ಸಂಭಾವನೆ ಮತ್ತು ಆಕರ್ಷಕ ಹುದ್ದೆಗಳ ಮೂಲಕ ಸೆಳೆಯುತ್ತಿರುವುದು ಸರ್ಕಾರಿ ಸಂಸ್ಥೆಗಳ ಮುಂದೆ ಹೊಸ ಸವಾಲಾಗಿ ಪರಿಣಮಿಸಿದೆ. ಇನ್ನೊಂದೆಡೆ, ಇಸ್ರೋ ಚಂದ್ರಯಾನ, ಮಂಗಳಯಾನ, ಆದಿತ್ಯ–ಎಲ್1 ಸೇರಿದಂತೆ ಹಲವು ಮಹತ್ವದ ಯೋಜನೆಗಳ ಮೂಲಕ ದೇಶದ ಹೆಮ್ಮೆ ಹೆಚ್ಚಿಸಿದೆ. ಇಂತಹ ಸಾಧನೆಗಳ ಹಿಂದೆ ಸಾವಿರಾರು ವಿಜ್ಞಾನಿಗಳ ಪರಿಶ್ರಮ ಅಡಗಿದ್ದು, ಅವರ ಅನುಭವವನ್ನು ಉಳಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಎಚ್‌ಎಂಟಿ (HMT) ಸಂಸ್ಥೆ ಕಾಲಕ್ರಮೇಣ ಸ್ಪರ್ಧೆಯಲ್ಲಿ ಹಿಂದೆ ಬಿದ್ದ ಉದಾಹರಣೆಯನ್ನು ಉಲ್ಲೇಖಿಸುತ್ತಿರುವ ಕೆಲ ವಿಶ್ಲೇಷಕರು, ಇಸ್ರೋ ಕೂಡ ಪ್ರತಿಭೆಗಳ ನಿರಂತರ ನಿರ್ಗಮನವನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ಎಚ್ಚರಿಸುತ್ತಿದ್ದಾರೆ. ಆದರೆ ಇಸ್ರೋ ಮತ್ತು ಎಚ್‌ಎಂಟಿಯ ಕಾರ್ಯವೈಖರಿ, ಉದ್ದೇಶ ಹಾಗೂ ಕಾರ್ಯಕ್ಷೇತ್ರಗಳು ವಿಭಿನ್ನವಾಗಿರುವುದರಿಂದ ಎರಡನ್ನೂ ನೇರವಾಗಿ ಹೋಲಿಕೆ ಮಾಡುವುದು ಸಮಂಜಸವಲ್ಲ ಎಂಬ ಅಭಿಪ್ರಾಯವೂ ಇದೆ. ತಜ್ಞರ ಪ್ರಕಾರ, ವಿಜ್ಞಾನಿಗಳಿಗೆ ಉತ್ತಮ ವೃತ್ತಿ ಬೆಳವಣಿಗೆ, ಸಂಶೋಧನಾ ಸ್ವಾತಂತ್ರ್ಯ, ಸ್ಪರ್ಧಾತ್ಮಕ ವೇತನ ಹಾಗೂ ಅತ್ಯಾಧುನಿಕ ಸಂಶೋಧನಾ ಮೂಲಸೌಕರ್ಯ ಒದಗಿಸಿದರೆ ಪ್ರತಿಭೆಗಳ ನಿರ್ಗಮನವನ್ನು ತಡೆಯಬಹುದು. ದೇಶದ ಬಾಹ್ಯಾಕಾಶ ಕ್ಷೇತ್ರದ ಮುಂಚೂಣಿ ಸ್ಥಾನವನ್ನು ಉಳಿಸಿಕೊಳ್ಳಲು ಪ್ರತಿಭಾವಂತ ಮಾನವ ಸಂಪನ್ಮೂಲವನ್ನು ಕಾಪಾಡಿಕೊಳ್ಳುವುದು ಕಾಲದ ಅಗತ್ಯವಾಗಿದೆ.

ಇತ್ತೀಚೆಗೆ ಇಸ್ರೋ ದಿಂದ ಸುಮಾರು 120 ಮಂದಿ ಉದ್ಯೋಗಿಗಳು ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿ ಚರ್ಚೆಗೆ ಗ್ರಾಸವಾಗಿದೆ. ಇವರಲ್ಲಿ ಹೆಚ್ಚಿನವರು ಬೆಂಗಳೂರಿನ ಕೇಂದ್ರಗಳಿಂದ, ಉಳಿದವರು ತಿರುವನಂತಪುರದ ಕೇಂದ್ರಗಳಿಂದ ಹೊರನಡೆದಿದ್ದಾರೆ ಎನ್ನಲಾಗಿದೆ. ಸುಮಾರು 15–16 ಸಾವಿರ ಉದ್ಯೋಗಿಗಳಿರುವ ಸಂಸ್ಥೆಯಲ್ಲಿ 120 ಎಂಬ ಸಂಖ್ಯೆ ದೊಡ್ಡದಾಗಿ ಕಾಣಿಸದೇ ಇರಬಹುದು. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಖ್ಯೆಗಳಿಗಿಂತ ಪ್ರತಿಭೆಯ ಮೌಲ್ಯನ ಮೌಲ್ಯವೇ ದೊಡ್ಡದು. ಒಬ್ಬ ಅನುಭವಿ ವಿಜ್ಞಾನಿಯನ್ನು ಕಳೆದುಕೊಳ್ಳುವುದು ಎಂದರೆ ವರ್ಷಗಳ ಅನುಭವ, ಸಂಶೋಧನಾ ದೃಷ್ಟಿ ಮತ್ತು ಹೊರಹೋಗುವುದೆಂದೇ ಅರ್ಥ. ಸಾಮರ್ಥ್ಯ ಸಂಸ್ಥೆಯಿಂದ ಈ ಬೆಳವಣಿಗೆಯ ನಡುವೆ ಮತ್ತೊಂದು ಮಹತ್ವದ ಆಡಳಿತಾತ್ಮಕ ಬದಲಾವಣೆ ಕೂಡ ಗಮನ ಸೆಳೆಯುತ್ತಿದೆ. ಇಸ್ರೋದಲ್ಲಿ ವಿಜ್ಞಾನಿಗಳು ಭಾರಿ ಪ್ರಮಾಣದಲ್ಲಿ ರಾಜೀನಾಮೆ ನೀಡುತ್ತಿರುವುದನ್ನು ತಡೆಯಲು ಬಾಹ್ಯಾಕಾಶ ಇಲಾಖೆಯು (DoS) (Resignation Acceptance) ಪ್ರಕ್ರಿಯೆಯನ್ನು ಕೇಂದ್ರೀಕರಿಸುವ ಮೂಲಕ ನಿಯಮಗಳನ್ನು ಕಠಿಣಗೊಳಿಸಿದೆ. 14 ಜುಲೈ 2026ರಂದು ಹೊರಡಿಸಲಾದ ಕಚೇರಿ ಜ್ಞಾಪನಾ (Office Memorandum) ಪತ್ರದ ಪ್ರಕಾರ, ಸೈಂಟಿಸ್ಟ್/ಇಂಜಿನಿಯರ್–ಎಸ್‌ಜಿ ಹಂತದವರೆಗಿನ ಹಿರಿಯ ಸಿಬ್ಬಂದಿಯ ರಾಜೀನಾಮೆಗಳನ್ನು ಸ್ವತಂತ್ರವಾಗಿ ಅಂಗೀಕರಿಸಲು ಇಸ್ರೋ ಕೇಂದ್ರದ ನಿರ್ದೇಶಕರಿಗೆ ಅಧಿಕಾರ ನೀಡಿದ್ದ 2020ರ ಆಡಳಿತಾತ್ಮಕ ನೀತಿಯನ್ನು ಈ ಹೊಸ ಆದೇಶವು ಸಂಪೂರ್ಣವಾಗಿ ರದ್ದುಗೊಳಿಸಿದೆ. ಈ ಹಿಂದೆ ಸಂಬಂಧಿತ ಇಸ್ರೋ ಕೇಂದ್ರಗಳ ಉನ್ನತ ಆಡಳಿತವೇ ರಾಜೀನಾಮೆ ಅಂಗೀಕರಿಸುವ ಅಧಿಕಾರ ಹೊಂದಿತ್ತು. ಈಗ ಆ ಪ್ರಕ್ರಿಯೆಯಲ್ಲಿ ತಿದ್ದುಪಡಿ ಮಾಡಲಾಗಿದೆ. ಆದರೆ ಕೇವಲ ರಾಜೀನಾಮೆ ಅಂಗೀಕರಿಸುವ ವಿಧಾನವನ್ನು ಬದಲಾಯಿಸುವುದರಿಂದ ಸಮಸ್ಯೆಯ ಮೂಲ ಕಾರಣ ಪರಿಹಾರವಾಗುವುದಿಲ್ಲ, ಪ್ರತಿಭಾವಂತ ವಿಜ್ಞಾನಿಗಳು ರಾಜೀನಾಮೆ ನೀಡುವ ಪರಿಸ್ಥಿತಿಯೇ ಏಕೆ ನಿರ್ಮಾಣವಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಇನ್ನೂ ಮುಖ್ಯ. ಇಸ್ರೋದ ಅನುಭವಿ ವಿಜ್ಞಾನಿಗಳನ್ನು ಆಕರ್ಷಿಸುತ್ತಿರುವ ಮತ್ತು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿರುವ ಭಾರತದ ಪ್ರಮುಖ ಖಾಸಗಿ ಬಾಹ್ಯಾಕಾಶ ಸ್ಟಾರ್ಟಪ್‌ಗಳು– ಸ್ಕೈರೂಟ್ ಏರೋಸ್ಪೇಸ್, ಪಿಕ್ಸೆಲ್, ಅಗ್ನಿಕುಲ್ ಕಾಸ್ಮೋಸ್, ಧ್ರುವ ಸ್ಪೇಸ್, ವೆಲ್ಲಾಟ್ರಿಕ್ಸ್ ಏರೋ ಸ್ಪೇಸ್, ಈ ಕಂಪನಿಗಳ ಬಹುಪಾಲು ಉದ್ಯೋಗಿಗಳು ಇಸ್ರೋನಿಂದ ಹೊರ ಹೋದವರೆ ಎಂಬುದು ಗಮನಾರ್ಹ ಜುಲೈ 18ರಂದು ತನ್ನ ಮೊದಲ ಆರ್ಬಿಟಲ್ ರಾಕೆಟ್ ಆದ ವಿಕ್ರಮ್–1 ಅನ್ನು ಯಶಸ್ವಿಯಾಗಿ ಪರೀಕ್ಷಾರ್ಥ ಉಡಾವಣೆ ಮಾಡುವ ಮೂಲಕ ಇತಿಹಾಸ. ನಿರ್ಮಿಸಿದೆ, ಸ್ಕೈರೂಟ್ ಏರೋ ಸ್ಪೇಸ್ ಕಂಪೆನಿ.

## ಕಾವೇರಿ ನೀರಿನ ಕೊರತೆ ಬಗ್ಗೆ ಮನವರಿಕೆ ಮಾಡುವಲ್ಲಿ ವಿಫಲವಾದ ಕಾಂಗ್ರೆಸ್ ಸರ್ಕಾರ: ಆರ್. ಅಶೋಕ



ಬೆಂಗಳೂರು: ಕೆಆರ್‌ಎಸ್ ನಲ್ಲಿ ನೀರಿನ ಕೊರತೆ ಇದೆ ಎಂದು ತಿಳಿಸಿಕೊಡುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲ ವಾಗಿದೆ. ಆದ್ದರಿಂದಲೇ ಮರಣ ಶಾಸನದಂತಹ ಆದೇಶ ರಾಜ್ಯಕ್ಕೆ ಸಿಕ್ಕಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕದ ಹಿತಾಸಕ್ತಿ ಕಾಪಾಡಲು ಕಾಂಗ್ರೆಸ್ ಸರ್ಕಾರ ವಿಫಲ ವಾಗಿದೆ. ತಮಿಳುನಾಡಿಗೆ ದಿನಕ್ಕೆ 3,500 ಕ್ಯೂಸೆಕ್ ನೀರು ಬಿಡಬೇಕೆಂದು ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ಕಾರ ಸರಿಯಾಗಿ ವಾದ ಮಂಡನೆ ಮಾಡುವಲ್ಲಿ ವಿಫಲವಾಗಿದೆ. ಬಲವಂತದ ಮದುವೆ ಎಂಬಂತೆ ರಾಮಲಿಂಗಾರೆಡ್ಡಿ ಅವರಿಗೆ ಜಲಸಂಪನ್ಮೂಲ ಖಾತೆ ನೀಡಲಾಗಿದೆ. ಅವರಿಗೆ ಇಲಾಖೆ ಬಗ್ಗೆ ಇರುವ ನಿರ್ಲಕ್ಷ್ಯದಿಂದಾಗಿಯೇ ಇಂತಹ ಆದೇಶ ಬಂದಿದೆ ಎಂದರು.

ನಾನು ಮಂಡ್ಯದ ಗ್ರಾಮಗಳಲ್ಲಿ ಹಾಗೂ ಕೆಆರ್‌ಎಸ್ ಜಲಾಶಯದ ಬಳಿ ಪರಿಶೀಲನೆ ಮಾಡಿದ್ದೆ. ಜಲಾಶಯದಲ್ಲಿ ನೀರು ಕಡಿಮೆ ಇದೆ ಹಾಗೂ ಬೆಳೆಗಳು ಒಣಗಿವೆ. ಎಲ್ಲ ಕಡೆ ಜಲಾಶಯಗಳು ಬರಿದಾಗಿದ್ದು, ಬೆಳೆ ಬೆಳೆಯಬೇಡಿ ಎಂದು ಕರೆ ನೀಡಲಾಗಿದೆ. ಬೆಂಗಳೂರಿನ ಒಂದೂವರೆ ಕೋಟಿ ಜನರಿಗೆ ನಾಲ್ಕು ದಿನಕ್ಕೊಮ್ಮೆ ನೀರು ನೀಡಲಾಗುತ್ತಿದೆ. ಅಂದರೆ ನಿಜವಾದ ಅರ್ಥದಲ್ಲಿ 50 ಲಕ್ಷ ಜನರಿಗೆ ಮಾತ್ರ ನೀರು ನೀಡಲಾಗುತ್ತಿದೆ. ಡೆಡ್ ಸ್ಟೋರೇಜ್ ಬಿಟ್ಟರೆ 4 ಟಿಎಂಸಿ ನೀರು ಹರಿಸಿದರೆ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತದೆ. ಇದನ್ನು ಸರಿಯಾಗಿ ಮನವರಿಕೆ ಮಾಡಿಕೊಟ್ಟಿಲ್ಲ ಎಂದರು.

ತಮಿಳುನಾಡಲ್ಲಿ ಕಾಂಗ್ರೆಸ್ ಬೆಂಬಲಿತ ಸರ್ಕಾರವಿದೆ. ಕಾಂಗ್ರೆಸ್ ಹೈಕಮಾಂಡ್ ಮೆಚ್ಚಿಸಲು ಕಾವೇರಿ ನೀರನ್ನು ಅಲ್ಲಿಗೆ ಹರಿಸಲಾಗುತ್ತಿದೆ. ಮುಂದಿನ ಹದಿನೈದು ದಿನ ಮಳೆ ಬರುವ ಬಗ್ಗೆ ಗ್ಯಾರಂಟಿ ಇಲ್ಲ. ಸಚಿವ ಸಂಪುಟ ರಚನೆಗೆ, ಜಿರಳೆ ಹೋರಾಟಕ್ಕೆ ದೆಹಲಿಗೆ ಹೋಗುವ ಬದಲು, ಉತ್ತಮ ವಕೀಲರೊಂದಿಗೆ ಮಾತುಕತೆ ನಡೆಸಬೇಕಿತ್ತು. ನಾನು ಹಲವಾರು ಬಾರಿ ಎಚ್ಚರಿಕೆ ಕೊಟ್ಟರೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಇದು ಜನರ ಬದುಕಿನ ಪ್ರಶ್ನೆಯಾಗಿದೆ. ಕೂಡಲೇ ಸರ್ವಪಕ್ಷ ಸಭೆ ಕರೆದು ಯಾಕೆ ವಿಫಲರಾಗಿದ್ದೇವೆ ಎಂದು ತಿಳಿಸಿ ಮುಂದೆ ಏನು ಮಾಡುತ್ತೇವೆಂದು ಹೇಳಬೇಕು. ಕೂಡಲೇ ಮೇಲ್ಮನವಿ ಸಲ್ಲಿಸದಿದ್ದರೆ ತಮಿಳುನಾಡು ಜೊತೆ ಶಾಮೀಲಾಗಿದ್ದಾರೆ ಎಂದುಕೊಳ್ಳಬೇಕಾಗುತ್ತದೆ ಎಂದರು.

ಸಿಎಂ ಜೋಸೆಫ್ ವಿಜಯ್ ವಿಧಾನಸೌಧಕ್ಕೆ ಬರಲಿದ್ದು, ಆಗ ಸಿಎಂ ಡಿ.ಕೆ. ಶಿವಕುಮಾರ್ ಮೌನವಾಗಿರದೆ ಮಾತಾಡಬೇಕು. ಅವರು ಬಂದ ನಂತರ ಸಣ್ಣ ಸುಧಾರಣೆಯೂ ಆಗುವುದಿಲ್ಲ. ವಿಫಲವಾದ ಸಂಧಾನ ಎಂದು ನಂತರ ಸುದ್ದಿ ಬರುತ್ತದೆ. ಇಬ್ಬರೂ ಇಂಡಿ ಒಕ್ಕೂಟದಲ್ಲಿರುವುದರಿಂದ ಧೈರ್ಯವಾಗಿ ಕೇಳಲು ಸಿಎಂ ಡಿ.ಕೆ. ಶಿವಕುಮಾರ್‌ಗೆ ಆಗುವುದಿಲ್ಲ.

# ಶ್ರೀ ವಿಧುಶೇಖರ ಭಾರತಿಯವರು ಸನ್ನಿಧಾನಕ್ಕೆ ನಮ್ಮ ನಮನ

## (On the birthday of Sri Vidhushekara Bharati Swamiji)



**ಶೃಂ**ಗೇರಿಯ ಶ್ರೀ ವಿಧುಶೇಖರ ಭಾರತಿ ಅವರ ಜನನ ತಿರುಪತಿಯಲ್ಲಿ ನಿಷ್ಠಾವಂತ ವೇದ ವಿದ್ವಾಂಸರ ಮನೆಯಲ್ಲಿ 1993ರ ಜುಲೈ 24 ರಂದು ಆಯಿತು. ಅವರ ತಂದೆ ಕುಪ್ಪಾವೇ ಬ್ರ.ಶ್ರೀ.ಶಿವಸುಬ್ರಹ್ಮಣ್ಯ ಅವಧಾನಿ ಮತ್ತು ತಾಯಿ ಶ್ರೀಮತಿ ಸೀತಾ ನಾಗಲಕ್ಷ್ಮಿ. ಈ ದಂಪತಿಗಳ ಕಿರಿಯ ಪುತ್ರರೇ ತಿರುಪತಿಯಲ್ಲಿ ವೆಂಕಟೇಶ್ವರನ ಕೃಪೆಯಿಂದ ಜನಿಸಿ ವೆಂಕಟೇಶ ಪ್ರಸಾದರೆನಿಸಿದರು. ಐದನೇ ವಯಸ್ಸಿನಲ್ಲೇ ಅವರಿಗೆ ಬ್ರಹ್ಮೋಪದೇಶ ಆಯಿತು. ತಾತ ರಾಮಗೋಪಾಲ ಯಾಜಿಯವರಲ್ಲಿ ಬಾಲಕ ಕೃಷ್ಣ ಯಜುರ್ವೇದ ಕ್ರಮಾಂತ ಪಾಠ ಕಲಿಯಲು ಆರಂಭಿಸಿದ್ದು ಉಪನಯನದ ನಂತರ.

2006 ರಲ್ಲಿ ತಂದೆಯವರೊಂದಿಗೆ ಬಾಲಕ ಶೃಂಗೇರಿಗೆ ಮೊದಲ ಬಾರಿ ಆಗಮಿಸಿದಾಗ ಈ ಕ್ಷೇತ್ರ ಬಾಲಕನನ್ನು ಸೆಳೆದಿರಲೇ ಬೇಕು. ಪುನಃ 2008 ರಲ್ಲಿ ತಂದೆಯವರೊಂದಿಗೆ ಬಂದರು. ಆಗಲೇ ತಮಗೆ ಶೃಂಗೇರಿಯೇ ಕರ್ಮಭೂಮಿ ಎಂದವರ ಮನಸ್ಸು ಗಟ್ಟಿ ಮಾಡಿತ್ತು. 2009 ರಲ್ಲಿ ಮತ್ತೆ ಶೃಂಗೇರಿಗೆ ಬಂದಾಗ ಜಗದ್ಗುರುಗಳಿಂದ ತಾನು ಶಾಸ್ತ್ರ ಕಲಿಯಬೇಕು ಎಂಬ ಇಚ್ಛೆ ವ್ಯಕ್ತಪಡಿಸಿದರು. ತಂದೆಯವರ ಅನುಮತಿ ನಂತರ ಜಗದ್ಗುರುಗಳ ಅನುಮತಿಯೂ ದೊರಕಿತು. ಕೇವಲ ಒಂದೂವರೆ ವರ್ಷದಲ್ಲಿ ಸಂಸ್ಕೃತ ಕಲಿತಿದ್ದು ಮಾತ್ರವಲ್ಲ ಕನ್ನಡದಲ್ಲಿ ಉಪನ್ಯಾಸ ನೀಡುವಷ್ಟು ಅವರು ಸಮರ್ಥರಾಗಿದ್ದರು. ಉಳಿದವರಿಗೆ ಒಂದೇ ಭಾಷೆ ಕಲಿಯಲು ಕನಿಷ್ಠ ನಾಲ್ಕು ವರ್ಷದ ಕಲಿಕೆ ಅಗತ್ಯವಾದರೆ ಇವರಿಗೆ ಇಷ್ಟು ಸ್ವಲ್ಪ ಸಮಯದಲ್ಲೇ ಎರಡು ಭಾಷೆಯ ಹಿಡಿತ ಸಿದ್ಧಿಸಿತ್ತು.

ಸಂಸ್ಕೃತ ಕಾವ್ಯ ಮತ್ತು ಸಾಹಿತ್ಯವನ್ನು ಶೃಂಗೇರಿಯ ವಿದ್ವಾನ್ ಶಿವಕುಮಾರಶರ್ಮ ಬೋಧಿಸಿದರೆ ವಿದ್ವಾನ್ ಕೃಷ್ಣ ರಾಜ ಭಟ್ಟರು ವ್ಯಾಕರಣ ಬೋಧಿಸಿದರು. ಎಲ್ಲವೂ ಬಹುಬೇಗ ಕಲಿತ ಬ್ರಹ್ಮಚಾರಿ ಅಚ್ಚರಿಗೆ ಕಾರಣರಾದರು. ಸೂಕ್ಷ್ಮಗ್ರಾಹಿ ಬ್ರಹ್ಮಚಾರಿಯಯ ಗುಣ ಸ್ವಭಾವ, ಜ್ಞಾನ ದಾಹ ಅರಿತ ಜಗದ್ಗುರುಗಳು ತಾವೇ ಶಾಸ್ತ್ರ ಕಲಿಸಲು ನಿರ್ಧರಿಸಿದರು. ಎರಡು ವರ್ಷ ಜಗದ್ಗುರುಗಳಿಂದ ಶಿಕ್ಷಣ ದೊರಕಿತು. ನ್ಯಾಯ ಶಾಸ್ತ್ರ, ಮೀಮಾಂಸ ಮತ್ತು ವೇದಾಂತ ಕಲಿಕೆ ಸಾಗುತ್ತಿದ್ದಾಗಲೇ ಅವರ 22 ನೇ ವಯಸ್ಸಿನಲ್ಲೇ ಜನವರಿ 23, 2015 ರಂದು ಜಗದ್ಗುರುಗಳು ಅವರಿಗೆ ಸನ್ಯಾಸವಿತ್ತು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿ ಶ್ರೀವಿಧುಶೇಖರ ಭಾರತಿ ಎಂಬ ಯೋಗಪಟ್ಟ ನೀಡಿದರು. ಆಗ ಜಗದ್ಗುರುಗಳು ತಮಗೆ ಅತ್ಯಂತ ಪೂಜನೀಯರಾದ ತಮ್ಮ ಪರಮಗುರು ಸ್ಮರಣೆಯಲ್ಲಿ ತಾವು ಶ್ರೀ ವಿಧುಶೇಖರ ಎಂಬ ಯೋಗಪಟ್ಟ ನೀಡುತ್ತಿದ್ದು ವಿಧು ಎಂದರೆ ಚಂದ್ರನೆಂದೇ ಅರ್ಥ ಎಂದು ವಿವರ ನೀಡಿದ್ದರು.

ಮುಂದೆ ಎರಡು ವರ್ಷಗಳ ಕಾಲ ಅವರು ತಮ್ಮ ಗುರುವರ್ಯರಿಂದ ಸಂಪೂರ್ಣ ವೇದಾಂತ ಶಾಸ್ತ್ರ ಹೃದ್ಗತ ಮಾಡಿಕೊಂಡರು. ತಮಿಳು ಶಿಕ್ಷಣವನ್ನೇನೂ ಅವರು ಪಡೆದವರಲ್ಲ. 2017 ರಲ್ಲಿ ತಮ್ಮ ಗುರುವರ್ಯರೊಂದಿಗೆ ಧರ್ಮ ವಿಜಯ ಯಾತ್ರೆ ಕೈಗೊಂಡಾಗ ಅವರು ತಮಿಳುನಾಡಿನಲ್ಲಿ ತಮಿಳಿನಲ್ಲೇ ಅನುಗ್ರಹ ಭಾಷಣ ಮಾಡಿದರು. ಮುಂದೆ ಅವರು ತಮಿಳುನಾಡಿನ ವಿಜಯ ಯಾತ್ರೆಯ ಸಂಧರ್ಭದಲ್ಲೆಲ್ಲಾ ತಾವು ತಮಿಳು ಮಾತೃಭಾಷೆಯವರೇ ಎಂಬ ರೀತಿ ಉಪನ್ಯಾಸ ನೀಡಿದರು. ತಮ್ಮ 25 ನೇ ವಯಸ್ಸಿನಲ್ಲೇ ಜಗದ್ಗುರುಗಳ ಅನುಜ್ಞೆಯಂತೆ ಅವರು ಐದು ತಿಂಗಳ ಧರ್ಮ ವಿಜಯ ಯಾತ್ರೆಯನ್ನು ಕರ್ನಾಟಕ, ಆಂಧ್ರಗಳಲ್ಲಿ ಕೈಗೊಂಡರು. ನಂತರ 4 ತಿಂಗಳ ಮಹಾರಾಷ್ಟ್ರ ವಿಜಯ ಯಾತ್ರೆಯನ್ನು ಮಾಡಿದರು. 2020 ರಲ್ಲಿ ಕೇರಳದಲ್ಲಿ ವಿಜಯ ಯಾತ್ರೆಯನ್ನು ಕೈಗೊಂಡರು ಮತ್ತು ಮಲೆಯಾಳಿಯಲ್ಲೇ ಅನುಗ್ರಹ ಭಾಷಣ ಮಾಡಿದರು. 2022 ರಲ್ಲಿ ತಮ್ಮ ಗುರುವರ್ಯರ ಅನುಜ್ಞೆಯಂತೆ ದ್ವಾರಕೆಗೆ ತೆರಳಿ ದ್ವಾರಕಾ ಮತ್ತು ಬದರೀ ಶಂಕರಾ ಚಾರ್ಯರ ಪಟ್ಟಾಭಿಷೇಕ ನಡೆಸಿ ಅನುಗ್ರಹಿ ಸಿದರು. ಆಗ ಅವರು ಹಿಂದಿ ಭಾಷೆಯ ಉಪನ್ಯಾಸ ಗಮನ ಸೆಳೆಯಿತು. ಅವನಿ ಶೃಂಗೇರಿ ಮಠ, ನೆಲಮಾವು ಮಠಗಳ ಮಠಾಧಿಪತಿಗಳಿಗೆ ಅವರು ಪಟ್ಟಾಭಿಷೇಕ ಮಾಡಿದರು.

ಕಾಶ್ಮೀರದ ಟ್ವೀಟ್ವಾಲ್‌ಗೆ ತಮ್ಮ ಗುರುವರ್ಯರ ಆದೇಶದಂತೆ ತೆರಳಿ ಶಾರದಾಂಬೆಯ ಪ್ರಾಣ ಪ್ರತಿಷ್ಠೆ ಮಾಡಿ ಅಭಿನವ ಶಂಕರಾಚಾರ್ಯರೆನಿಸಿದರು. ಅವರು ಗುರುವರ್ಯರ ಆದೇಶದಂತೆ ಧರ್ಮ ಪ್ರಬೋಧನೆಗಾಗಿ ನಿರಂತರ ಧರ್ಮ ವಿಜಯ ಯಾತ್ರೆಯನ್ನು ಕೈಗೊಳ್ಳುವ ಮೂಲಕ ಪರಿವ್ರಾಜಕಾಚಾರ್ಯರೆನಿಸಿದ್ದಾರೆ. ಅವರು ದೇವಸ್ಥಾನಗಳಲ್ಲಿ ನಡೆಸುವ ಪೂಜೆ, ದೇವಸ್ಥಾನಗಳ ಕುಂಭಾಭಿಷೇಕದಲ್ಲಿ, ಹೋಮ ಹವನಗಳಲ್ಲಿ ಪಾಲ್ಗೊಳ್ಳುವ ರೀತಿ ಭಕ್ತರ ಹೃನ್ಮನ ಸೆಳೆಯುತ್ತದೆ.

ಶೃಂಗೇರಿಯ ಅತ್ಯಂತ ಪ್ರಸಿದ್ಧ ವಾಕ್ಯಾರ್ಥ ಸಭೆಗಳಲ್ಲಿ ಅವರು ಅಧ್ಯಕ್ಷತೆವಹಿಸಿ ನಿರ್ವಹಿಸುವ ರೀತಿ ದೇಶದ ಪ್ರಖ್ಯಾತ ಪಂಡಿತರನ್ನೇ ನಿಬ್ಬೆರಗಾಗುವಂತೆ ಮಾಡಿದೆ. ಧರ್ಮ ಆಚರಣೆಗೆ ಅವರು ನೀಡುವ ಉಪನ್ಯಾಸಗಳು ಮನಸ್ಸಿಗೆ ನಾಟುತ್ತದೆ. ಸತತ ಅಧ್ಯಯನ ಮತ್ತು ಅಧ್ಯಾಪನ ನಡೆಸುವ ಅವರು ತಮ್ಮ ಅನುಗ್ರಹ ಭಾಷಣಗಳಲ್ಲಿ ಭಗವದ್ಗೀತೆ, ಶಂಕರ ಭಾಷ್ಯ, ವೇದ, ಉಪನಿಷತ್, ಶಂಕರ ವಿಜಯ, ಪುರಾಣ ಗಳ ಶ್ಲೋಕಗಳನ್ನು ಪೋಣಿಸುವ ರೀತಿ ಅವರ ಅಪಾರ ವಿದ್ವತ್‌ಗೆ ಸಾಕ್ಷಿ ಹೇಳುತ್ತದೆ.

ಶೃಂಗೇರಿಯ ಗುರುಪರಂಪರೆಯ ಎಲ್ಲಾ ವಿಶೇಷಣಗಳೂ ಅವರಲ್ಲಿ ಮೈತಾಳಿದೆ. 2025 ವರ್ಷದ ಅವರ ಉತ್ತರ ಭಾರತದ ಧರ್ಮ ವಿಜಯ ಯಾತ್ರೆ ಉದ್ದಕ್ಕೂ ಕಂಡ ದೃಶ್ಯ ಭಾರತದ ಧಾರ್ಮಿಕ ಕ್ಷೇತ್ರದಲ್ಲಿ ನವ ನಕ್ಷತ್ರೋದಯವಾಗಿದ್ದಕ್ಕೆ ಸಾಕ್ಷಿ ಒದಗಿಸಿತು. ಪ್ರಯಾಗರಾಜ್ ಮಹಾ ಕುಂಭದಲ್ಲಿ ಅವರು ಮೌನಿ ಅಮವಾಸ್ಯೆಯ ದಿನ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದರು. ಇದಕ್ಕೂ ಮೊದಲು ಅಲ್ಲಿ ಪ್ರತಿದಿನ ಶಾಸ್ತ್ರ ಸಭೆ ನಡೆಸಿದರು. ಸಂತ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ಮೂರು ಆಮ್ನಾಯ ಪೀಠಾದೀಶ್ವರರು ಪಾಲ್ಗೊಂಡ ಧರ್ಮ ಸಂಸತ್ ಅಧ್ಯಕ್ಷತೆ ವಹಿಸಿದರು.

ಕಾಶಿಯಲ್ಲಿ ಮಾತಾ ಅನ್ನಪೂರ್ಣೇಶ್ವರಿಯ ಪ್ರತಿಷ್ಠಾ ಕುಂಭಾಭಿಷೇಕ ನಡೆಸಿದರು. ತಮ್ಮ ಗುರುವರ್ಯರು ಎಲ್ಲೆಲ್ಲಿ ತೆರಳಿ ಅನುಗ್ರಹಿಸಿದ್ದರೋ ಅಲ್ಲೆಲ್ಲಾ ತೆರಳಿ ಅನುಗ್ರಹಿಸಿದರು. ಕಾಶೀ ವಿಶ್ವನಾಥನ ಪೂಜೆ ನೇರವೇರಿಸಿದರು.

ಈಗಾಗಲೇ ಅವರು ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಗಳಾದ ತಿರಚಂದೂರು ಮತ್ತು ಪಳನಿಗೆ ತೆರಳಿ ಪೂಜೆ ನೆರವೇರಿಸಿದ್ದಾರೆ. ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂಬತ್ತು ಕಡೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ದಾರೆ. ದೇಶಾದ್ಯಂತ ನೂರಾರು ದೇವಸ್ಥಾನಗಳ ಕುಂಭಾಭಿಷೇಕ, ಪ್ರತಿಷ್ಠಾ ಕಾರ್ಯಕ್ರಮ ನಡೆಸಿದ್ದಾರೆ. ಎಲ್ಲಕ್ಕೂ ಶಿಖರಪ್ರಾಯವಾಗಿ ಅವರ ಅಚಲ ಗುರುಭಕ್ತಿ ಸಾಟಿ ಇಲ್ಲದ್ದು. ಎಲ್ಲೇ ಶೃಂಗೇರಿಯಿಂದ ದೂರ ತೆರಳಲಿ ತಮ್ಮ ಗುರುವರ್ಯರ ಸ್ಮರಣೆ ಮಾಡದೇ ಅವರು ಅನುಗ್ರಹ ಭಾಷಣ ನೀಡುವುದೇ ಇಲ್ಲ. ಜಗದ್ಗುರು ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳ ಸನ್ಯಾಸ ಸ್ವೀಕರಿಸಿದ ಸುವರ್ಣ ವರ್ಷಾಚರಣೆಯನ್ನು ಅವರು ಅಭೂತಪೂರ್ವವಾಗಿ ಆಚರಿಸಿದರು. ಸುವರ್ಣ ಭಾರತಿ ಕಾರ್ಯಕ್ರಮ ಒಂದು ನವ ಇತಿಹಾಸ ಸೃಷ್ಟಿಸಿತು. ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ "ನಮಃ ಶಿವಾಯ" ಶ್ರೀ ಭಾರತೀತೀರ್ಥ ಮಹಿಸ್ವಾಮಿಗಳ ಸುವರ್ಣ ವರ್ಷದ ಕಾರ್ಯಕ್ರಮದಲ್ಲಿ ಒಂದೂವರೆ ಲಕ್ಷ ಕಂಠಗಳು ಏಕಕಾಲಕ್ಕೆ ಒಂದೆಡೆ ಶಂಕರ ಭಗವತ್ಪಾದರ ಸ್ತೋತ್ರ ಪಠಣ ಮಾಡುವ ಮೂಲಕ ವಿಶ್ವ ದಾಖಲೆ ಸೃಷ್ಟಿಸಿತು. ಶೃಂಗೇರಿಯಲ್ಲಿ ಗುರುವರ್ಯರ ಗೌರವಾರ್ಥ ನಡೆದ ತ್ರಿವೇಣಿ ಸಂಗಮವೂ ಒಂದು ವಿಶ್ವ ದಾಖಲೆಯೇ. ಶೃಂಗೇರಿಯಂತ ಪುಟ್ಟ ಹಳ್ಳಿಯಲ್ಲಿ ಐವತ್ತು ಸಹಸ್ರ ಭಕ್ತರು ಸ್ತೋತ್ರ ಪಠಣ ಮಾಡಿ ಇತಿಹಾಸ ಸೃಷ್ಟಿಸಿದರು.

ದೇಶ ಯುದ್ಧ ಸ್ಥಿತಿಯಲ್ಲಿದ್ದಾಗಲೇ ಜಗದ್ಗುರುಗಳು ಅನೇಕ ದೇವಸ್ಥಾನಗಳಿಗೆ ಭೇಟಿ ನೀಡಿ ಧಾರ್ಮಿಕ ಕಾರ್ಯಕ್ರಮ ನಡೆಸಿದರು. ಆ ಸಂಧರ್ಭ ಅವರು ಪುರ ಪ್ರವೇಶ ಮಾಡುವಾಗ ಸಂಪ್ರದಾಯದಂತೆ ತಮ್ಮ ಶೋಭಾ ಯಾತ್ರೆ ಸಿದ್ಧತೆ ಆಗಿದ್ದರೂ ಅದನ್ನು ನಿರಾಕರಿಸಿದರು. ದೇಶ ಸಂಕಷ್ಟದಲ್ಲಿದೆ ನಮ್ಮ ಶೋಭಾ ಯಾತ್ರೆ ಬೇಡ ಎಂದರು. ದೇಶದ ಒಳಿತಿಗಾಗಿ ಅವಿರತ ಪ್ರಾರ್ಥನೆ ಸಲ್ಲಿಸಲು ಭಕ್ತರಿಗೆ ಉಪದೇಶಿಸಿದರು. ಕಾಶ್ಮೀರದ ಉಗ್ರರ ದಾಳಿಯಲ್ಲಿ ಬಲಿಯಾದ ಎಲ್ಲ ಸಂತ್ರಸ್ತರ ಕುಟುಂಬಗಳಿಗೂ ಶಾರದಾ ಪ್ರಸಾದ ರೂಪವಾಗಿ ತಲಾ ಎರಡು ಲಕ್ಷರೂ ಕಳಿಸಿಕೊಟ್ಟರು. ಅವರ ಅಪ್ರತಿಮ ದೇಶಭಕ್ತಿ ಶ್ರೀ ವಿದ್ಯಾರಣ್ಯರನ್ನು ನೆನಪಿಗೆ ತರುವಂತಿತ್ತು. ಜಗದ್ಗುರು ಶ್ರೀ ವಿಧುಶೇಖರ ಭಾರತಿಯವರನ್ನು ಆಗಲೇ ದೇಶದ ರಾಷ್ಟ್ರಪತಿಗಳು, ಉಪ ರಾಷ್ಟ್ರಪತಿಗಳು, ಅನೇಕ ರಾಜ್ಯದ ರಾಜ್ಯಪಾಲರು, ಗೃಹಸಚಿವರೂ ಸೇರಿದಂತೆ ಕೇಂದ್ರದ ಮಂತ್ರಿಗಳು, ಉತ್ತರ ಪ್ರದೇಶದ ಮುಖ್ಯ ಮಂತ್ರಿ ಯೋಗಿ ಆದಿತ್ಯನಾಥ್ ಒಳಗೊಂಡಂತೆ ಅನೇಕ ಮುಖ್ಯ ಮಂತ್ರಿಗಳು, ಧಾರ್ಮಿಕ ಮುಖಂಡರು, ನ್ಯಾಯ ಮೂರ್ತಿಗಳು, ಎಲ್ಲಾ ಕ್ಷೇತ್ರಗಳ ಮುಖಂಡರು ಭೇಟಿ ಆಗಿ ಅನುಗ್ರಹ ಪಡೆದಿದ್ದಾರೆ. ಸಕಲ ಶಾಸ್ತ್ರ ಪಾರಂಗತರಾಗಿ, ವೇದಾಂತ ಹೃದ್ಗತ ಮಾಡಿಕೊಂಡು ನೈಜ ಸನ್ಯಾಸಿಯಾಗಿ ಸನಾತನ ಧರ್ಮದ ತೋರುಬೆಳಕಾಗಿ ಅವರು ಮೂಡಿ ಬಂದಿದ್ದಾರೆ. ಶೃಂಗೇರಿಯ ಧಕ್ಷಿಣಾಮ್ನಾಯ ಶಾರದಾಪೀಠವನ್ನು ಮುನ್ನೆಡೆಸುವ ಸಮರ್ಥ ಪೀಠಾದೀಶ್ವರರಾಗಿ ಮಠದ ಬಹು ಆಯಾಮದ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವರು ಶಕ್ತಿ ತುಂಬುತ್ತಿದ್ದಾರೆ. ತಮ್ಮ ಶಿಷ್ಯರು ತಮಗೆ ಪ್ರತಿಕ್ಷಣ ಆನಂದ ಉಂಟು ಮಾಡುತ್ತಿದ್ದಾರೆ. ನಮ್ಮ ಮನಸ್ಸಿನಲ್ಲಿದ್ದುದನ್ನು ಅವರ ಓದಬಲ್ಲರು. ಶೃಂಗೇರಿಗೆ ಅತ್ಯಂತ ಯೋಗ್ಯ ಉತ್ತರಾಧಿಕಾರಿಯನ್ನು ಜಗನ್ಮಾತೆ ಶಾರದಾಂಬೆ ಅನುಗ್ರಹಿಸಿದ್ದಾಳೆ ಎಂಬ ಜಗದ್ಗುರು ಶ್ರೀ ಭಾರತೀತೀರ್ಥರ ಮಾತು ಅಕ್ಷರಶಃ ಸತ್ಯವಾಗಿದೆ. ಜಗದ್ಗುರು ಶ್ರೀ ವಿಧುಶೇಖರ ಭಾರತಿಯವರು ಸನಾತನ ಧರ್ಮದ ಸಮರ್ಥ ಮಾರ್ಗದರ್ಶಕರಾಗಿ ಸಾಧನಾ ಪಥದಲ್ಲಿ ಮುನ್ನೆಡೆಯುತ್ತಿದ್ದಾರೆ.

**ಕೃತಜ್ಞತೆ: ಲೇಖಕರಾದ ಪ್ರಭಾಕರ ಕಾರಂತರು, ಹೊಸಕೊಪ್ಪ**

# ಇಂಗ್ಲೆಂಡ್‌ನಲ್ಲಿ ಭಾರತ ಕ್ರಿಕೆಟ್ ತಂಡದ ಸೋಲಿನ ಸರಣಿ




2026ರ ಇಂಗ್ಲೆಂಡ್ ವೈಟ್‌ಬಾಲ್ ಪ್ರವಾಸವನ್ನು ಭಾರತೀಯ ಕ್ರಿಕೆಟ್ ತಂಡ ಮಿಶ್ರ ಫಲಿತಾಂಶದೊಂದಿಗೆ ಮುಕ್ತಾಯಗೊಳಿಸಿದೆ. ಐದು ಟ್ವೆಂಟಿ–20 ಹಾಗೂ ಮೂರು ಏಕದಿನ ಪಂದ್ಯಗಳನ್ನು ಒಳಗೊಂಡ ಈ ಪ್ರವಾಸದಲ್ಲಿ ಟೀಂ ಇಂಡಿಯಾ ಕೆಲವು ಪಂದ್ಯಗಳಲ್ಲಿ ತನ್ನ ಸಾಮರ್ಥ್ಯವನ್ನು ಮೆರೆದಿದ್ದರೂ, ಸರಣಿಯ ನಿರ್ಣಾಯಕ ಕ್ಷಣಗಳಲ್ಲಿ ಸ್ಥಿರ ಪ್ರದರ್ಶನ ನೀಡಲು ವಿಫಲವಾಯಿತು. ವಿಶ್ವಕಪ್‌ಗೆ ಮುನ್ನ ಅತ್ಯಂತ ಮಹತ್ವದ ಸಿದ್ಧತಾ ಸರಣಿಯೆಂದು ಪರಿಗಣಿಸಲಾದ ಈ ಪ್ರವಾಸವು ಭಾರತೀಯ ತಂಡಕ್ಕೆ ಹಲವು ಪಾಠಗಳನ್ನು ಕಲಿಸಿದೆ. ಇಂಗ್ಲೆಂಡ್‌ನ ಪಿಚ್‌ಗಳು ಸಾಮಾನ್ಯವಾಗಿ ವೇಗ, ಬೌನ್ಸ್ ಹಾಗೂ ಸ್ವಿಂಗ್‌ಗೆ ಹೆಸರುವಾಸಿ. ಈ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವುದು ಯಾವುದೇ ತಂಡಕ್ಕೆ ಸುಲಭವಲ್ಲ. ಭಾರತೀಯ ಬ್ಯಾಟರ್‌ಗಳು ಕೆಲ ಪಂದ್ಯಗಳಲ್ಲಿ ಉತ್ತಮ ಆರಂಭ ಪಡೆದರೂ, ಅದನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ.

ವಿಶೇಷವಾಗಿ ಮಧ್ಯಮ ಕ್ರಮಾಂಕದ ಅಸ್ಥಿರ ಪ್ರದರ್ಶನ ತಂಡಕ್ಕೆ ದುಬಾರಿಯಾಯಿತು. ಆರಂಭಿಕ ಜೋಡಿ ಉತ್ತಮ ಅಡಿಪಾಯ ಹಾಕಿದ ಸಂದರ್ಭಗಳಲ್ಲಿಯೂ ಮಧ್ಯದ ಓವರ್‌ಗಳಲ್ಲಿ ವಿಕೆಟ್‌ಗಳು ಸತತವಾಗಿ ಉರುಳಿದ ಪರಿಣಾಮ ದೊಡ್ಡ ಮೊತ್ತ ದಾಖಲಿಸುವ ಅವಕಾಶಗಳು ಕೈತಪ್ಪಿದವು. ಟಿ20 ಕ್ರಿಕೆಟ್‌ನಲ್ಲಿ ಕೊನೆಯ ಐದು ಓವರ್‌ಗಳ ಪ್ರದರ್ಶನವೇ ಪಂದ್ಯದ ದಿಕ್ಕನ್ನು ನಿರ್ಧರಿಸುತ್ತದೆ. ಆದರೆ ಭಾರತ ಡೆತ್ ಓವರ್‌ಗಳಲ್ಲಿ ನಿರೀಕ್ಷಿತ ವೇಗದಲ್ಲಿ ರನ್ ಗಳಿಸಲು ಸಾಧ್ಯವಾಗಲಿಲ್ಲ. ಮತ್ತೊಂದೆಡೆ, ಇಂಗ್ಲೆಂಡ್ ಬೌಲರ್‌ಗಳು ಯಾರ್ಕರ್, ಸ್ಲೋವರ್ ಬಾಲ್ ಹಾಗೂ ವೈವಿಧ್ಯಮಯ ತಂತ್ರಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಭಾರತದ ಬ್ಯಾಟರ್‌ಗಳನ್ನು ನಿಯಂತ್ರಿಸಿದರು. ಅನುಭವಿ ಆಟಗಾರರ ಜೊತೆಗೆ ಯುವ ಬೌಲರ್‌ಗಳೂ ಆತಿಥೇಯರಿಗೆ ಯಶಸ್ಸು ತಂದುಕೊಟ್ಟರು.


ಬೌಲಿಂಗ್ ವಿಭಾಗದಲ್ಲಿಯೂ ಭಾರತಕ್ಕೆ ಕೆಲವು ಸಮಸ್ಯೆಗಳು ಎದುರಾದವು. ಹೊಸ ಚೆಂಡಿನೊಂದಿಗೆ ಆರಂಭದಲ್ಲಿ ವಿಕೆಟ್‌ಗಳು ಸಿಕ್ಕರೂ, ಮಧ್ಯದ ಓವರ್‌ಗಳಲ್ಲಿ ಎದುರಾಳಿಗೆ ಒತ್ತಡ ಹೇರುವಲ್ಲಿ ನಿರಂತರತೆ ಕಾಣಿಸಲಿಲ್ಲ. ಡೆತ್ ಓವರ್‌ಗಳಲ್ಲಿ ಹೆಚ್ಚುವರಿ ರನ್‌ಗಳನ್ನು ಬಿಟ್ಟುಕೊಟ್ಟದ್ದು ಹಲವಾರು ಪಂದ್ಯಗಳಲ್ಲಿ ಫಲಿತಾಂಶದ ಮೇಲೆ ನೇರ ಪರಿಣಾಮ ಬೀರಿತು. ಕ್ಯಾಚ್‌ಗಳನ್ನು ಕೈಬಿಡುವುದು ಮತ್ತು ಸಣ್ಣ ಫೀಲ್ಡಿಂಗ್ ತಪ್ಪುಗಳೂ ಕೆಲ ಸಂದರ್ಭಗಳಲ್ಲಿ ದುಬಾರಿಯಾದವು. ಆದಾಗ್ಯೂ, ಈ ಪ್ರವಾಸದಲ್ಲಿ ಹಲವು ಸಕಾರಾತ್ಮಕ ಬೆಳವಣಿಗೆಗಳೂ ಕಂಡುಬಂದವು. ಯುವ ಆಟಗಾರರು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ಅವಕಾಶ ಪಡೆದರು. ಒತ್ತಡದ ಪರಿಸ್ಥಿತಿಯಲ್ಲಿಯೂ ಕೆಲವು ಯುವ ಬ್ಯಾಟರ್‌ಗಳು ಆತ್ಮವಿಶ್ವಾಸದಿಂದ ಆಡಿದರೆ, ವೇಗದ ಬೌಲರ್‌ಗಳು ಉತ್ತಮ ಸ್ಪೆಲ್‌ಗಳನ್ನು ಎಸೆದು ಆಯ್ಕೆ ಸಮಿತಿಯ ಗಮನ ಸೆಳೆದರು. ಭವಿಷ್ಯದ ಪ್ರಮುಖ ಟೂರ್ನಿಗಳ ದೃಷ್ಟಿಯಿಂದ ತಂಡದ ಬೆಂಚ್ ಸ್ಟ್ರೆಂಗ್ತ್ ಹೆಚ್ಚುತ್ತಿರುವುದು ಭಾರತೀಯ ಕ್ರಿಕೆಟ್‌ಗೆ ಆಶಾದಾಯಕ ಬೆಳವಣಿಗೆಯಾಗಿದೆ. ತಂಡದ ನಾಯಕತ್ವಕ್ಕೂ ಈ ಪ್ರವಾಸ ದೊಡ್ಡ ಪರೀಕ್ಷೆಯಾಯಿತು. ಆಟಗಾರರ ರೋಟೇಶನ್, ಬೌಲಿಂಗ್ ಬದಲಾವಣೆಗಳು ಮತ್ತು ಬ್ಯಾಟಿಂಗ್ ಕ್ರಮಾಂಕದ ನಿರ್ಧಾರಗಳು ಹಲವು ಪಂದ್ಯಗಳಲ್ಲಿ ಚರ್ಚೆಗೆ ಗ್ರಾಸವಾದವು. ಕೆಲ ತಂತ್ರಗಳು ಯಶಸ್ವಿಯಾದರೆ, ಕೆಲವು ನಿರೀಕ್ಷಿತ ಫಲಿತಾಂಶ ನೀಡಲಿಲ್ಲ. ಆದರೂ ಕಠಿಣ ವಿದೇಶಿ ಪರಿಸ್ಥಿತಿಯಲ್ಲಿ ಯುವ ತಂಡವನ್ನು ಮುನ್ನಡೆಸಿದ ಅನುಭವ ಮುಂದಿನ ಸರಣಿಗಳಿಗೆ ಅಮೂಲ್ಯವಾಗಲಿದೆ.

ಈ ಸರಣಿಯ ಮತ್ತೊಂದು ಪ್ರಮುಖ ಅಂಶವೆಂದರೆ ಮಾನಸಿಕ ದೃಢತೆ. ನಿರ್ಣಾಯಕ ಕ್ಷಣಗಳಲ್ಲಿ ಪಂದ್ಯವನ್ನು ತಮ್ಮ ಪರ ತಿರುಗಿಸಿಕೊಳ್ಳುವ ಸಾಮರ್ಥ್ಯದಲ್ಲಿ ಭಾರತ ಇನ್ನಷ್ಟು ಸುಧಾರಿಸಬೇಕಿದೆ. ಸಣ್ಣ ಗುರಿಯನ್ನು ರಕ್ಷಿಸುವುದು ಅಥವಾ ದೊಡ್ಡ ಗುರಿಯನ್ನು ಬೆನ್ನಟ್ಟುವುದು– ಎರಡೂ ಸಂದರ್ಭಗಳಲ್ಲಿ ಒತ್ತಡವನ್ನು ಸಮರ್ಥವಾಗಿ ನಿಭಾಯಿಸುವ ಸಾಮರ್ಥ್ಯವೇ ಅಗ್ರ ತಂಡಗಳನ್ನು ವಿಭಿನ್ನಗೊಳಿಸುತ್ತದೆ. ಈ ಅಂಶದಲ್ಲಿ ಇಂಗ್ಲೆಂಡ್ ಹೆಚ್ಚು ಪರಿಣಾಮಕಾರಿ ಪ್ರದರ್ಶನ ನೀಡಿತು. ಸರಣಿಯ ಬಳಿಕ ನಾಯಕ ಶ್ರೇಯಸ್ ಅಯ್ಯರ್, ತಂಡವು ಈ ಪ್ರವಾಸದಿಂದ ಅಮೂಲ್ಯ ಪಾಠಗಳನ್ನು ಕಲಿತಿದ್ದು, ಭವಿಷ್ಯದಲ್ಲಿ ಇನ್ನಷ್ಟು ನಿರ್ಭಯವಾಗಿ ಕ್ರಿಕೆಟ್ ಆಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಯುವ ಆಟಗಾರರು ಪಡೆದ ಅನುಭವ ಮುಂದಿನ ಟೂರ್ನಿಗಳಲ್ಲಿ ಭಾರತಕ್ಕೆ ನೆರವಾಗಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. ಮುಂದಿನ ಟಿ20 ವಿಶ್ವಕಪ್ ಮತ್ತು ಇತರ ಐಸಿಸಿ ಟೂರ್ನಿಗಳನ್ನು ಗಮನದಲ್ಲಿಟ್ಟುಕೊಂಡರೆ, ಭಾರತದ ಆಯ್ಕೆ ಸಮಿತಿಗೆ ಈ ಪ್ರವಾಸ ಮಹತ್ವದ ಮಾಹಿತಿ ನೀಡಿದೆ. ಯಾವ ಆಟಗಾರರು ಒತ್ತಡದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾರೆ, ಯಾರಿಗೆ ಇನ್ನಷ್ಟು ಅವಕಾಶ ನೀಡಬೇಕು ಮತ್ತು ಯಾವ ವಿಭಾಗದಲ್ಲಿ ಬಲವರ್ಧನೆ ಅಗತ್ಯ ಎಂಬುದು ಸ್ಪಷ್ಟವಾಗಿದೆ. ಮಧ್ಯಮ ಕ್ರಮಾಂಕದ ಸ್ಥಿರತೆ, ಡೆತ್ ಬೌಲಿಂಗ್ ಹಾಗೂ ಫೀಲ್ಡಿಂಗ್‌ನಲ್ಲಿ ಸುಧಾರಣೆ ತಂದರೆ ಭಾರತ ಮತ್ತಷ್ಟು ಬಲಿಷ್ಠ ತಂಡವಾಗಿ ಹೊರಹೊಮ್ಮಬಹುದು. ಒಟ್ಟಾರೆ, 2026ರ ಇಂಗ್ಲೆಂಡ್ ಪ್ರವಾಸವನ್ನು ಕೇವಲ ಗೆಲುವು–ಸೋಲಿನ ಆಧಾರದ ಮೇಲೆ ಅಳೆಯುವುದು ಸರಿಯಲ್ಲ. ಕಠಿಣ ಪರಿಸ್ಥಿತಿಯಲ್ಲಿ ಯುವ ಆಟಗಾರರು ಪಡೆದ ಅನುಭವ, ತಂಡದ ದುರ್ಬಲತೆಗಳು ಸ್ಪಷ್ಟವಾಗಿರುವುದು ಹಾಗೂ ಭವಿಷ್ಯದ ಯೋಜನೆಗಳಿಗೆ ದೊರೆತ ಮಾರ್ಗ ದರ್ಶನ – ಇವೆಲ್ಲವೂ ಈ ಪ್ರವಾಸದ ದೊಡ್ಡ ಲಾಭಗಳಾಗಿವೆ. ಸರಣಿಯ ಫಲಿತಾಂಶ ನಿರಾಶೆ ಮೂಡಿಸಿದ್ದು.

ಈ ಹೈಸ್ಕೋರಿಂಗ್ ಲಾರ್ಡ್ಸ್ ಪಂದ್ಯದಲ್ಲಿ ಇಂಗ್ಲೆಂಡ್‌ನ ಭಾರಿ ಮೊತ್ತಕ್ಕೆ ಉತ್ತರವಾಗಿ ಭಾರತವೂ ದಿಟ್ಟ ಉತ್ತರ ನೀಡಿ ಉತ್ತಮ ಆರಂಭ ಮಾಡಿತ್ತು. ರೋಹಿತ್, ನಾಯಕ ಶುಭಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ ಅವರ ಆಟ ಇದಕ್ಕೆ ಕಾರಣವಾಯಿತು. ಆದರೆ ಮಧ್ಯಮ ಕ್ರಮಾಂಕ ಕುಸಿಯಿತು. ಒಂದು ಹಂತದಲ್ಲಿ 2 ವಿಕೆಟ್‌ಗೆ 304 (43.2 ಓವರ್) ರನ್ ಗಳಿಸಿದ್ದ ತಂಡ ಮುಂದಿನ 25 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಗಳನ್ನು ಕಳೆದುಕೊಂಡು ಒತ್ತಡಕ್ಕೆ ಒಳಗಾಯಿತು.

20–20 ಪಂದ್ಯಗಳಲ್ಲಿ 14 ವರ್ಷದ ಪೋರ ಸೂರ್ಯವಂಶಿರವರು ಭಾರತ ತಂಡಕ್ಕೆ ಪಾದಾರ್ಪಣೆ ಮಾಡಿದ್ದು ಇತಿಹಾಸವಾಗಿದ್ದರೂ ಈ ಪಂದ್ಯ ಗೆಲ್ಲಲಾಗಲಿಲ್ಲ. ಆರಂಭ ಆಟಗಾರರಾದ ರೋಹಿತ್ (138; 1102, 4x17, 6x5) ಹಾಗೂ ಗಿಲ್ (77; 84ಎ) ಮೊದಲ ವಿಕೆಟ್‌ಗೆ 24.2 ಓವರ್‌ಗಳಲ್ಲಿ 147 ರನ್ ಗಳಿಸಿ ಭದ್ರ ಅಡಿಪಾಯ ಹಾಕಿಕೊಟ್ಟರು. ಗಿಲ್ ನಿರ್ಗಮನದ ಬಳಿಕ ವಿರಾಟ್ ಕೊಹ್ಲಿ (74; 60ಎ) ಜೊತೆಯಾದ ರೋಹಿತ್ 113 ರನ್ ಸೇರಿಸಿದರು. ಮೊದಲ ಎರಡು ಪಂದ್ಯಗಳಲ್ಲಿ ವಿಫಲರಾಗಿದ್ದ 'ಹಿಟ್‌ಮ್ಯಾನ್ ಶತಕ ಸಿಡಿಸಿ ಸಂಭ್ರಮಿಸಿದರು. ಈ ಮಧ್ಯೆ ಎರಡು ಪಂದ್ಯಗಳಲ್ಲಿ ವಿರಾಟ್ ಕೊಹ್ಲಿ ಅರ್ಧಶತಕ ಬಾರಿಸಿದ್ದು ತಿಲಕ್‌ವರ್ಮರವರ ಬ್ಯಾಟಿಂಗ್ ಸಾಧನೆ ಮತ್ತು ಭಾರತ ತಂಡದಲ್ಲಿ ಭೂಮ್ರರವರ ಅನುಪಸ್ಥಿತಿಯಲ್ಲಿ ತಂಡಕ್ಕೆ ಸೇರ್ಪಡೆಯಾದ ವೇಗದ ಬೌಲರ್‌ಗಳಾದ ಪ್ರಿನ್ಸ್ ಯಾದವ್ ಮತ್ತು ಗ್ರೋವರ್ ಅವರ ಸಾಧನೆ ಉತ್ತಮವಾಗಿತ್ತು. ಒಟ್ಟಾರೆ ಈ ಸರಣಿ ಭಾರತದ ಮಟ್ಟಿಗೆ ಮರೆಯುವಂತ ಸರಣಿಯಾಗಿ ಉಳಿಯುತ್ತದೆ.




## ಶಿವಾಜಿನಗರ ಬಸ್ ನಿಲ್ದಾಣದ ಪಾದಚಾರಿ ಮಾರ್ಗಕ್ಕೆ ಹೊಸ ಮೆರುಗು

ಜಿಬಿಎ ಬೆಂಗಳೂರು ಸೆಂಟ್ರಲ್ ಸಿಟಿ ಕಾರ್ಪೊರೇಷನ್ (GBA Bengaluru Central City Corporation) ಶಿವಾಜಿನಗರ ಬಸ್ ನಿಲ್ದಾಣದ ಸಮೀಪದ ಪಾದಚಾರಿ ಮಾರ್ಗವನ್ನು ಅತಿಕ್ರಮಣ ತೆರವುಗೊಳಿಸಿ, ಸಂಗ್ರಹವಾಗಿದ್ದ ಕಸವನ್ನು ಸ್ವಚ್ಛಗೊಳಿಸಿ, ಗೋಡೆಗಳಿಗೆ ಹೊಸದಾಗಿ ಬಣ್ಣ ಬಳಿದು, ಸಾರ್ವಜನಿಕ ಸ್ಥಳವನ್ನು ಸುಂದರಗೊಳಿಸಿದೆ.

ಇದರಿಂದ ಸಾರ್ವಜನಿಕರು ಸ್ವಚ್ಛ, ಸುರಕ್ಷಿತ ಮತ್ತು ಸುಂದರ ವಾತಾವರಣದಲ್ಲಿ ಸಂಚರಿಸಲು ಅನುಕೂಲವಾಗಿದ್ದು, ಈ ಪ್ರದೇಶಕ್ಕೆ ಹೊಸ ಮೆರುಗು ದೊರೆತಿದೆ.

GBA BENGALURU ಸ್ವಚ್ಛ ನಗರ | ಸುರಕ್ಷಿತ ನಗರ | ಸುಂದರ ನಗರ

# ಜಿ.ವಿ. ಅಯ್ಯರ್: ಕನ್ನಡ ಮಹಾನ್ ನಿರ್ದೇಶಕ



**ಮೊ**ದಲ ಸಂಸ್ಕೃತ ಸಿನಿಮಾ ಆದಿ ಶಂಕರಾಚಾರ್ಯ ನಿರ್ದೇಶನ ಮಾಡಿದವರು ಕನ್ನಡ ಚಿತ್ರ ಭೀಷ್ಮ ಜಿ.ವಿ.ಅಯ್ಯರ್. ಸಿನಿಮಾ ಭಾರತದ ಅತ್ಯುತ್ತಮ ಚಿತ್ರ ವಿಭಾಗದಲ್ಲಿ ಸ್ವರ್ಣ ಕಮಲ ಪ್ರಶಸ್ತಿ ಗಳಿಸಿತ್ತು. ಮೈಸೂರಿನ ನಂಜುಗೂಡಿನಲ್ಲಿ 1017 ಸೆಪ್ಟೆಂಬರ್ 3 ರಂದು ಜನಿಸಿದ ಜಿ.ವಿ.ಅಯ್ಯರ್ ಅವರ ಪೂರ್ತಿ ಹೆಸರು ಗಣಪತಿ ವೆಂಕಟರಮಣ ಅಯ್ಯರ್ ರಂಗ ಕರ್ಮಿಯಾಗಿ ವೃತ್ತಿ ಆರಂಭಿಸಿದ ಜಿ.ವಿ.ಅಯ್ಯರ್ ಮುಂದೆ ಭಾರತದ ಹೆಸರಾಂತ ನಟ, ನಿರ್ದೇಶಕ, ನಿರ್ಮಾಪಕ, ಗೀತ ರಚನೆಕಾರ ಹಾಗೂ ಸಂಭಾಷಣೆಕಾರರಾಗಿ ಹೆಸರು ಮಾಡಿದರು. ವೃತ್ತಿ ಜೀವನದ ಆರಂಭದಲ್ಲಿ ಸದಾರಮೆ ಹಾಗೂ ಗುಬ್ಬಿ ನಾಟಕ ಕಂಪನಿಯಲ್ಲಿ ಪರಿಚಾರಕರಾಗಿ, ಪೋಸ್ಟರ್ ಬರೆಯುವ ರಂಗಕರ್ಮಿಯಾಗಿ ವೃತ್ತಿಜೀವನ ಆರಂಭಿಸಿದವರು ಇವರು. ಸಿನಿಮಾಗಳಲ್ಲಿ ಅವಕಾಶ ಅರಸಿಕೊಂಡು ಪುಣೆಗೆ ಹೋದ ಅಯ್ಯರ್ ಅಲ್ಲಿ ಹೋಟೆಲ್ ಮಾಣಿ ಕೆಲಸವನ್ನೂ ಮಾಡಿದ್ದರು. ಅವಕಾಶ ಸಿಗದೆ ಮತ್ತೆ ಕರ್ನಾಟಕಕ್ಕೆ ವಾಪಸ್ ಆಗಿದ್ದರು. ವಾಪಸ್ ಅದವರು ಗುಬ್ಬಿ ವೀರಣ್ಣ ನಾಟಕ ಕಂಪನಿ ಸೇರಿಕೊಂಡು ರಂಗಭೂಮಿಯಲ್ಲಿ ಸಕ್ರಿಯರಾಗಿದ್ದರು. ಎಂ.ವಿ ರಾಜಮ್ಮ ನಿರ್ಮಾಣ ಮಾಡಿದ 1943ರಲ್ಲಿ ಬಿಡುಗಡೆಯಾದ ರಾಧಾರಮಣ ಚಿತ್ರದ ಕೇಶಿದೈತ್ಯನ ಪಾತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ, ಇದೇ ಚಿತ್ರದ ಮೂಲಕ ಬಾಲಕೃಷ್ಣ ಅವರು ಕೂಡ ಕನ್ನಡ ಚಿತ್ರರಂಗಕ್ಕೆ ಪರಿಚಯವಾದರು. ಸೋದರಿ, ಮಹಾಕವಿ ಕಾಳಿದಾಸ, ಹರಿಭಕ್ತ, ಹೇಮಾವತಿ, ಜಿ.ವಿ.ಅಯ್ಯರ್. ಅಭಿನಯಿಸಿದ ಕೆಲವು ಚಿತ್ರಗಳು, 1954ರಲ್ಲಿ ಬಿಡುಗಡೆಯಾದ ಅವರೇ ಚಿತ್ರಕಥೆ ಬರೆದ ಬೇಡರ ಕಣ್ಣಪ್ಪ ಸಿನಿಮಾದಲ್ಲಿ ಕೈಲಾಸನಾಥ ಶಾಸ್ತ್ರಿ ಪಾತ್ರದಲ್ಲಿ ಅಭಿನಯಿಸಿದ್ದರು ಜಿ.ವಿ.ಅಯ್ಯರ್. ಈ ಪಾತ್ರ ಸಾಕಷ್ಟು ಜನಮನ್ನಣೆ ಗಳಿಸಿತ್ತು. ಈ ಸಿನಿಮಾ ಡಾ. ರಾಜ್‌ಕುಮಾರ್ ಹಾಗೂ ನರಸಿಂಹರಾಜು ಅವರಿಗೆ ನಟರಾಗಿ ಮೊದಲ ಸಿನಿಮಾಗಿದ್ದರೆ, ಜಿ.ವಿ.ಅಯ್ಯರ್ ಅವರಿಗೆ ಚಿತ್ರಕಥೆಗಾರರಾಗಿ ಮೊದಲ ಸಿನಿಮಾವಾಗಿತ್ತು. ಈ ಸಿನಿಮಾ ರಾಜ್‌ಕುಮಾರ್, ನರಸಿಂಹರಾಜು ಜೊತೆಗೆ ಜಿ.ವಿ.ಅಯ್ಯರ್ ಅವರಿಗೂ ಪ್ರಸಿದ್ಧಿ ತಂದಿತ್ತು.

ಹಾಡುಗಳನ್ನು ಬರೆಯುವ 1955ರಲ್ಲಿ ಬಿಡುಗಡೆಯಾದ ಸೋದರಿ ಸಿನಿಮಾಗೆ ಸಂಭಾಷಣೆ ಹಾಗೂ ಮೂಲಕಚಲನಚಿತ್ರ ಸಾಹಿತಿಯಾಗಿ ಗುರುತಿಸಿಕೊಂಡರು. ಇವರ ಲೇಖನಿಯಿಂದ ಅದೆಷ್ಟೋ ಶ್ರೇಷ್ಠ ಗೀತೆಗಳು ನಮ್ಮ ಕನ್ನಡ ಚಿತ್ರರಂಗದ ಮುತ್ತುಗಳಾಗಿವೆ. ಗೋದಾವರಿ ದೇವಿ ಮೌನವಾಗಿಹೆ ಏಕೆ... ಸನ್ನೆ ಏನೇನೋ ಮಾಡಿತು ಕಣ್ಣು... ಕರುನಾಡ ಕಣ್ಮಣಿಯೇ ಕಂಠೀರವ... ಮುತ್ತಂಥ ಮಗನಾಗಿ ಹೆತ್ತವಳ ಸಿರಿಯಾಗಿ, ನಂಬಿದೇ ನಿನ್ನ ನಾದ ದೇವತೆಯೇ... ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ... ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ... ಬಾ ತಾಯೆ ಭಾರತಿಯೇ ಭಾವ ಭಾಗೀರಥಿಯೇ.. ಮುಂತಾದ ಅದ್ಭುತ ಗೀತೆಗಳನ್ನು ಕೊಟ್ಟವರು ಜಿ.ವಿ.ಅಯ್ಯರ್. 1962ರಲ್ಲಿ ಭೂದಾನ ಸಿನಿಮಾಗೆ ಆಕ್ಷನ್ ಕಟ್ ಹೇಳುವ ಮೂಲಕ ನಿರ್ದೇಶಕನಾಗಿ ಭಡ್ತಿ ಪಡೆದರು. ಈ ಸಿನಿಮಾಗೆ ರಾಷ್ಟ್ರಪ್ರಶಸ್ತಿ ಕೂಡ ಬಂದಿದೆ.

ಕನ್ನಡದ ಕಲಾವಿದರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾಗ ರಾಜಕುಮಾರ್, ಬಾಲಕೃಷ್ಣ, ನರಸಿಂಹರಾಜು ಮುಂತಾದ ಹಿರಿಯ ಕಲಾವಿದರ ಜೊತೆಗೂಡಿ ಕನ್ನಡ ಕಲಾವಿದರ ತಂಡವನ್ನು ರಚಿಸಿಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಿ ಹಲವಾರು ನಾಟಕಗಳನ್ನು ಮಾಡಿ ನೂರಾರು ಕಲಾವಿದರುಗಳಿಗೆ ಆಶ್ರಯದಾತರಾಗಿದ್ದಲ್ಲದೇ, ಅದೇ ಗೆಳೆಯರೊಡನೆ ಸೇರಿ ಕೊಂಡು ರಣಧೀರ ಕಂಠೀರವ ಚಲನಚಿತ್ರದ ಸಹ ನಿರ್ಮಾಪಕರಾಗಿದ್ದಲ್ಲದೇ, ನಿರ್ದೇಶನವನ್ನೂ ಮಾಡಿದರು.

1972ರಲ್ಲಿ ಡಾ. ಎಸ್.ಎಲ್.ಭೈರಪ್ಪ ಅವರ ವಂಶವೃಕ್ಷ ಕಾದಂಬರಿಯನ್ನು ಬಿ.ವಿ.ಕಾರಂತ ಹಾಗೂ ಗಿರೀಶ್ ಕಾರ್ನಾಡ್ ಅವರು ಜೋಡಿಯಾಗಿ ಅದೇ ಹೆಸರಿನಲ್ಲಿ ಸಿನಿಮಾ ಮಾಡಿದ್ದರು. ಈ ಸಿನಿಮಾವನ್ನು ಜಿ.ವಿ.ಅಯ್ಯರ್ ನಿರ್ಮಾಣ ಮಾಡಿದ್ದರು. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಗೆದ್ದು ಸಿನಿಮಾ ಕನ್ನಡ ಚಿತ್ರರಂಗಕ್ಕೆ ಹೆಸರು ತಂದುಕೊಟ್ಟಿತ್ತು.

1975ರಲ್ಲಿ ತರಾಸು ಅವರ ಕಾದಂಬರಿಯನ್ನು ಆಧರಿಸಿ, ಹಂಸಗೀತೆ ಸಿನಿಮಾವನ್ನು ನಿರ್ದೇಶಿಸಿ ನಿರ್ಮಾಣ ಮಾಡಿದ್ದು ಜಿ.ವಿ.ಅಯ್ಯರ್. ಈ ಚಿತ್ರವು ಭಾರತೀಯ ಚಿತ್ರರಂಗದಲ್ಲಿ ಸಂಗೀತದ ಅಲೆಗಳನ್ನೇ ತೇಲಿಸಿತ್ತು. ಈ ಎರಡು ಚಿತ್ರಗಳ ನಂತರ, ಜಿ.ವಿ.ಅಯ್ಯರ್ ಅವರ ಬಾಕ್ಸ್ ಆಫೀಸ್ ಹಿಟ್ ಚಿತ್ರಗಳ ಸುಳಿಯಿಂದ ಹೊರಗೆ ಬಂದು, ಕಲಾತ್ಮಕ ಚಿತ್ರಗಳನ್ನು ಮಾಡಲು ಪ್ರಾರಂಭಿಸಿದರು. 1979ರಲ್ಲಿ ನಾಳೆಗಳನ್ನು ಮಾಡುವವರು ಎಂಬ ಸಿನಿಮಾ ನಿರ್ದೇಶಿಸಿದರು. ಇದಾದ ನಂತರ ಇವರಿಗೆ ತುಂಬಾ ಪ್ರಸಿದ್ಧಿ ತಂದ ಚಿತ್ರ ಆದಿ ಶಂಕಾರಾಚಾರ್ಯ. 1983ರಲ್ಲಿ ಈ ಸಿನಿಮಾವನ್ನು ಅಯ್ಯರ್ ಸಂಸ್ಕೃತ ಭಾಷೆಯಲ್ಲಿ ತಯಾರಿಸಿದ್ದರು. ಇದು ಸಂಸ್ಕೃತ ಭಾಷೆಯ ಮೊದಲ ಸಿನಿಮಾ. ಮಾತ್ರವಲ್ಲ ಅತ್ಯುತ್ತಮ ಚಿತ್ರಕ್ಕಾಗಿ ಸ್ವರ್ಣಕಮಲ, ಅತ್ಯುತ್ತಮ ಚಿತ್ರಕಥೆ. ಅತ್ಯುತ್ತಮ ಛಾಯಾಗ್ರಹಣ ಮತ್ತು ಅತ್ಯುತ್ತಮ ಧ್ವನಿಮುದ್ರಣ ವಿಭಾಗದಲ್ಲಿ ರಾಷ್ಟ್ರಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತ್ತು. 1986ರಲ್ಲಿ ಕನ್ನಡದಲ್ಲಿ ಮಧ್ವಾಚಾರ್ಯ, 1989ರಲ್ಲಿ ರಾಮಾನುಜಾಚಾರ್ಯ ಸಿನಿಮಾವನ್ನು ತಮಿಳಿನಲ್ಲಿ ನಿರ್ದೇಶನ ಮಾಡಿದ್ದರು.

ಸ್ವರ್ಣ ಕಮಲ ಪ್ರಶಸ್ತಿ ಪಡೆದ ಸಂಸ್ಕೃತ ಚಿತ್ರ, ಕನ್ನಡದ ತಾಯಿ ಕರುಳು, ಲಾಯರ್ ಮಗಳು, ಬಂಗಾರಿ, ಪೋಸ್ಟ್ ಮಾಸ್ಟರ್, ಕಿಲಾಡಿ ರಂಗ, ರಾಜಶೇಖರ, ಮೈಸೂರು ಟಾಂಗ, ಚೌಕದ ದೀಪ, ಹಂಸಗೀತೆ ತಮಿಳಿನ ರಾಮಾನು ಜಾಚಾರ್ಯ, ಹಿಂದಿಯಲ್ಲಿ ಸ್ವಾಮಿ ವಿವೇಕಾನಂದ ಹೀಗೆ ಸುಮಾರು 65 ಸಿನಿಮಾಗಳನ್ನು ನಿರ್ದೇಶಿಸಿದ ಹೆಗ್ಗಳಿಕೆ ಇವರದು. ಸ್ವಾಮಿ ವಿವೇಕಾನಂದ ಸಿನಿಮಾಗಾಗಿ ಮಿಥುನ್ ಚಕ್ರವರ್ತಿ ಅವರು ಅತ್ಯುತ್ತಮ ಪೋಷಕ ನಟ ರಾಷ್ಟ್ರಪ್ರಶಸ್ತಿಗೆ ಪಾತ್ರರಾದರು. 1993ರಲ್ಲಿ ಅಯ್ಯರ್ ಭಗವದ್ಗೀತಾ ಸಿನಿಮಾವನ್ನು ಸಂಸ್ಕೃತದಲ್ಲಿ ನಿರ್ದೇಶಿಸಿದ್ದರು. ಈ ಸಿನಿಮಾ ರಾಷ್ಟ್ರಪ್ರಶಸ್ತಿ ಗಳಿಸುವುದಲ್ಲದೆ. ಬೋಗೋಟ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿ ವಿಭಾಗಕ್ಕೆ ಆಯ್ಕೆಯಾಗಿತ್ತು. ಮುಂದೆ ಸಮೇತನ ಹಳ್ಳಿ ರಾಮರಾಯರ ಕೃತಿಯನ್ನು ಆಧರಿಸಿ 'ನಾಟ್ಯರಾಣಿ ಶಾಂತಲ' ಧಾರಾವಾಹಿಯನ್ನು ಹಿಂದಿ ಹಾಗೂ ಕನ್ನಡ ಎರಡರಲ್ಲೂ ನಿರ್ಮಾಣ ಮಾಡಿದ್ದರು.

ಬರಿಗಾಲ ನಿರ್ದೇಶಕ ಎಂದೇ ಕರೆಸಿಕೊಳ್ಳುವ ಅಯ್ಯರ್ 1975ರಲ್ಲಿ ಆಚಾರ್ಯ ಬಿರುದು ಪಡೆದ ನಂತರ ತಮ್ಮ ಬದುಕಿನ ಶೈಲಿಯನ್ನೇ ಬದಲಾಯಿಸಿ ಕೊಂಡರು. ಅಲ್ಲಿಂದ ಚಪ್ಪಲಿ ಧರಿಸುವುದನ್ನು ತ್ಯಜಿಸಿ, ಮುಂದೆ ಬರಿಗಾಲಲ್ಲೇ ನಡೆದಾಡಲು ಆರಂಭಿಸಿದ್ದರು. ರಾಮಾಯಣವನ್ನು ದೃಶ್ಯರೂಪಕ್ಕೆ ತರಲು ನಿರ್ಧರಿಸಿ, ಆ ಚಿತ್ರದಲ್ಲಿ ರಾವಣನ ಪಾತ್ರಕ್ಕೆ ಸಂಜಯ್ ದತ್ ಅವರನ್ನು ಒಪ್ಪಿಸಲು. ಮುಂಬೈಗೆ ತೆರಳಿದ್ದ ಜಿ.ವಿ. ಅಯ್ಯರ್ ಅವರು ಮುಂಬೈನಲ್ಲಿ 2003ರ ಡಿಸೆಂಬರ್ 21ರಂದು ಇಹಲೋಕ ತ್ಯಜಿಸಿದರು.

ನಮ್ಮ ನಾಡಿನ ಹೆಮ್ಮೆಯ ಈ ದೈತ್ಯ ಪ್ರತಿಭೆಗೆ ಕರ್ನಾಟಕ ಸರ್ಕಾರವು ಇಂದಿಗೂ ಯಾವುದೇ ಗೌರವ ಸನ್ಮಾನಗಳನ್ನು ಮತ್ತು ಅವರ ಹೆಸರಿನಲ್ಲಿ ಯಾವುದೇ ಕಲಾತ್ಮಕ ಪ್ರತಿಭಾ ನಿರ್ದೇಶಕ/ನಿರ್ಮಾಪಕರಿಗೆ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಮಾಡಿಲ್ಲ. ಇದೊಂದು ಅತ್ಯಂತ ಶೋಚನೀಯ ವಿಷಯ. ಇನ್ನು ಮುಂದೆಯಾದರೂ ಕರ್ನಾಟಕ ಸರ್ಕಾರವು ಎಚ್ಚೆತ್ತುಗೊಂಡು ಈ ನಮ್ಮ ನಾಡಿನ ದೈತ್ಯ ಕಲಾಪ್ರತಿಭೆಗೆ ಸೂಕ್ತ ಗೌರವ ನೀಡುವುದೇ ಎಂದು ಕಾದು ನೋಡಬೇಕಿದೆ.

# ನಿಗದಿತ ಅವಧಿಯೊಳಗೆ SIR ಕಾರ್ಯವನ್ನು ಪಾರದರ್ಶಕತೆಯಿಂದ ಪೂರ್ಣಗೊಳಿಸಿ: ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್

ಬೆಂಗಳೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಅಪರ ಜಿಲ್ಲಾ ಚುನಾವಣಾಧಿಕಾರಿ ಬೆಂಗಳೂರು ದಕ್ಷಿಣ ವ್ಯಾಪ್ತಿಯಲ್ಲಿ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಕಾರ್ಯದ ಪ್ರಗತಿ ಪರಿಶೀಲನೆ ಸಂಬಂಧ ಅನ್ಬುಕುಮಾರ್ ವಿ., ಮಾನ್ಯ ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕರವರ ಅಧ್ಯಕ್ಷತೆಯಲ್ಲಿ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿ ಕೆ.ಎನ್. ರಮೇಶ್‌ರವರ ಉಪಸ್ಥಿತಿಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯವನ್ನು ಚುನಾವಣಾ ಆಯೋಗದ ಪರಿಷ್ಕೃತ ವೇಳಾಪಟ್ಟಿಯಂತೆ ಹಾಗೂ ಪಾರದರ್ಶಕತೆಯಿಂದ ಪೂರ್ಣಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮುಖ್ಯ ಚುನಾವಣಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬೊಮ್ಮನಹಳ್ಳಿ, ವಿಜಯನಗರ, ಬಿ.ಟಿ.ಎಂ. ಲೇಔಟ್, ಬಸವನಗುಡಿ, ಗೋವಿಂದರಾಜನಗರ, ಜಯನಗರ ಹಾಗೂ ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳಲ್ಲಿನ SIR ಫಾರ್ಮ್ ವಿತರಣೆ, ಸಂಗ್ರಹಣೆ, ಡಿಜಿಟೈಸೇಷನ್ ಕುರಿತು ಪರಿಶೀಲನೆ ನಡೆಸಿದರು. ಮತದಾರರಿಗೆ ಅನಾನುಕೂಲವಾಗದಂತೆ ಮತ್ತು ಯಾವುದೇ ನೈಜ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಅತ್ಯಂತ ಜಾಗರೂಕತೆಯಿಂದ ನಿಗದಿತ ಅವಧಿಯಲ್ಲಿ ಗುರಿ ತಲುಪಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

**ಪ್ರತಿ ದಿನದ ಮಾಹಿತಿಯನ್ನು ತಪ್ಪದೇ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ನೀಡಿ:** ಅಪರ ಜಿಲ್ಲಾ ಚುನಾವಣಾಧಿಕಾರಿಗಳ ಬೆಂಗಳೂರು ದಕ್ಷಿಣ ವ್ಯಾಪ್ತಿಯ 7 ವಿಧಾನಸಭಾ ಕ್ಷೇತ್ರಗಳಲ್ಲಿ ಈವರೆಗೆ 21,44,784 ಎಸ್.ಐ.ಆರ್. ಫಾರ್ಮ್ ವಿತರಣೆ ಮಾಡಲಾಗಿದ್ದು, ಆ ಪೈಕಿ 28/07/2026 ರ 4 ಗಂಟೆ ವೇಳೆಗೆ 8,83,373 ಮತದಾರರ ವಿವರಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಒಟ್ಟಾರೆ ಡಿಜಿಟಲೀಕರಣ ಪ್ರಮಾಣ ಶೇಕಡಾ 41.5 ತಲುಪಿದೆ. ಒಟ್ಟು ASDD ಮತದಾರರು 9,01,349 ಇರುತ್ತಾರೆ ಎಂದು ತಿಳಿಸಿದರು.

ಮುಂದುವರೆದು ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ತರಲು ಮಾನ್ಯತೆ ಪಡೆದ ಎಲ್ಲಾ ರಾಜಕೀಯ ಪಕ್ಷಗಳಿಗೆ, ಕೇವಲ ವಾಟ್ಸಾಪ್ ಅಥವಾ ಇ-ಮೇಲ್ ಮುಖಾಂತರ ಮಾಹಿತಿ ರವಾನಿಸದೆ, ERO ಕಚೇರಿಯಿಂದ ಅಧಿಕೃತ ಕವರಿಂಗ್ ಲೆಟರ್‌ನೊಂದಿಗೆ ದಿನನಿತ್ಯದ ಪ್ರಗತಿ / ASDD ಪಟ್ಟಿ ಮಾಹಿತಿಯನ್ನು ಕಡ್ಡಾಯವಾಗಿ ನೀಡಬೇಕು ಹಾಗೂ ವಾರಕ್ಕೊಮ್ಮೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಸಲಹೆ-ಆಕ್ಷೇಪಣೆಗಳನ್ನು ಸ್ವೀಕರಿಸಬೇಕು ಎಂದು ತಿಳಿಸಿದರು.

**ನಿರ್ವಹಿಸಿದ ಕೆಲಸಕಾರ್ಯಗಳ ದಾಖಲೆ ಇಟ್ಟುಕೊಳ್ಳಿ:** ಮತದಾರರ ನೊಂದಣಾಧಿಕಾರಿಗಳು ಮನೆ ಮನೆ ಪರಿಶೀಲನೆ ವೇಳೆ ಗುರುತಿಸಲಾದ ಆಬ್ಸೆಂಟ್, ಶಿಫ್ಟೆಡ್, ಡೆತ್ ಹಾಗೂ ಡುಪ್ಲಿಕೇಟ್ (ASDD) ಮತದಾರರ ವಿವರಗಳನ್ನು ಅತ್ಯಂತ ನಿಖರತೆಯಿಂದ ನಿರ್ವಹಿಸಬೇಕು. ಈ ಕುರಿತು ಬಿಎಲ್‌ಒ ಮನೆ ಭೇಟಿ ವೇಳೆ ನೆರೆಮನೆಯವರ ಸಹಿ ಮತ್ತು ಮಹಜರು ವರದಿಗಳ ಆಧಾರದ ಮೇಲೆಯೇ ಅಂತಿಮ ನಿರ್ಧಾರ ಕೈಗೊಳ್ಳಬೇಕು ಎಂದು ಸ್ಪಷ್ಟಪಡಿಸಿದರು. ರಾಜಕೀಯ ಪಕ್ಷಗಳೊಂದಿಗೆ ನಡೆಸಲಾದ ಸಭೆಗಳು, ಬಿಎಲ್‌ಒ ಹಂತದ ಕಾರ್ಯ ವೈಖರಿ ಹಾಗೂ ಮಹಜರು ಪ್ರಕ್ರಿಯೆಗಳ ವಿಡಿಯೋ ರೆಕಾರ್ಡಿಂಗ್ ಮತ್ತು ಜಿಯೋ-ಟ್ಯಾಗ್ ಫೋಟೋಗಳನ್ನು ಶೇಖರಿಸಿಡುವಂತೆ ಸೂಚನೆ ನೀಡಿದರು.

**ಕರಡು ಮತದಾರರ ಪಟ್ಟಿ ಪ್ರಕಟವಾದ ನಂತರವೇ ಫಾರಂ 6 ವಿತರಿಸಿ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಪರಿಷ್ಕೃತ ವೇಳಾ ಪಟ್ಟಿಯಲ್ಲಿ ನಿಗದಿಪಡಿಸಿರುವಂತೆ ಕರಡು ಮತದಾರ ಪಟ್ಟಿಯನ್ನು ದಿನಾಂಕ 17/08/2026 ರಂದು ಪ್ರಕಟಗೊಳಿಸಬೇಕಾಗಿರುತ್ತದೆ. ಕರಡು ಪಟ್ಟಿಯಲ್ಲಿ ಕೈ ಬಿಟ್ಟು ಹೋದಂತಹ ಅರ್ಹ ಮತದಾರರುಗಳಿಗೆ ಫಾರಂ 6 ಅನ್ನು ವಿತರಿಸುವಂತೆ ಸೂಚನೆ ನೀಡಿದರು.

# ಫುಟ್‌ಬಾಲ್ ಲೋಕದ ದಿಗ್ಗಜ–ಸ್ಪೈನ್: ವಿಶ್ವ ಚಾಂಪಿಯನ್




ಜುಲೈ 19ರಂದು ಅಮೇರಿಕಾದಲ್ಲಿ ನಡೆದ ವಿಶ್ವಕಪ್ ಫೈನಲ್ ಪಂದ್ಯಕ್ಕಾಗಿ ವಿಶ್ವ ಫುಟ್‌ಬಾಲ್ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದ 2026ರ ಫಿಫಾ ವಿಶ್ವಕಪ್ ಫೈನಲ್‌ನಲ್ಲಿ ಸ್ಪೇನ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಹಾಲಿ ಚಾಂಪಿಯನ್ ಅರ್ಜೆಂಟೀನಾವನ್ನು 1–0 ಗೋಲುಗಳಿಂದ ಮಣಿಸಿದ ಸ್ಪೇನ್, ಹೆಚ್ಚುವರಿ ವೇಳೆಯಲ್ಲಿ ದಾಖಲಿಸಿದ ಏಕೈಕ ಗೋಲಿನ ಬಲದಿಂದ ತನ್ನ ಇತಿಹಾಸದ ಎರಡನೇ ವಿಶ್ವಕಪ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ನ್ಯೂಜೆರ್ಸಿಯ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯ ಆರಂಭದಿಂದಲೇ ಸ್ಪೇನ್ ಚೆಂಡಿನ ಮೇಲೆ ಹಿಡಿತ ಸಾಧಿಸಿ ದಾಳಿಗಳನ್ನು ನಡೆಸಿತು. ಆದರೆ ಅರ್ಜೆಂಟೀನಾ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಸ್ ಅದ್ಭುತ ಸೇವ್‌ಗಳ ಮೂಲಕ ಸ್ಪೇನ್‌ಗೆ ನಿರಾಸೆ ಉಂಟುಮಾಡಿದರು. ಇನ್ನೊಂದೆಡೆ ಲಿಯೋನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ಸ್ಪೇನ್‌ನ ಬಲಿಷ್ಠ ರಕ್ಷಣೆಯನ್ನು ಭೇದಿಸಲು ವಿಫಲವಾಯಿತು.

ನಿಗದಿತ 90 ನಿಮಿಷಗಳಲ್ಲಿ ಉಭಯ ತಂಡಗಳು ಗೋಲು ಗಳಿಸಲು ವಿಫಲವಾದ ಕಾರಣ ಪಂದ್ಯ ಹೆಚ್ಚುವರಿ ವೇಳೆಗೆ ಸಾಗಿತು. 106ನೇ ನಿಮಿಷದಲ್ಲಿ ಪೆಡ್ರೊ ಪೊರೊ ಅವರ ಕ್ರಾಸ್ ಅನ್ನು ನಿಕೋ ವಿಲಿಯಮ್ಸ್ ಹೆಡ್ ಮೂಲಕ ಫೆರಾನ್ ಟೊರೆಸ್‌ಗೆ ತಲುಪಿಸಿದಾಗ, ಟೊರೆಸ್ ಯಾವುದೇ ತಪ್ಪಿಲ್ಲದೆ ಚೆಂಡನ್ನು ಗೋಲಿನ ಬಲೆಗೆ ಸೇರಿಸಿ ಸ್ಪೇನ್‌ಗೆ ಅಮೂಲ್ಯ ಮುನ್ನಡೆ ತಂದು ಕೊಟ್ಟರು. ಅದೇ ಪಂದ್ಯ ನಿರ್ಣಾಯಕ ಕ್ಷಣವಾಯಿತು.

ಪಂದ್ಯದ ಅಂತಿಮ ಕ್ಷಣಗಳಲ್ಲಿ ಅರ್ಜೆಂಟೀನಾ ಸಮಬಲ ಸಾಧಿಸಲು ಪ್ರಯತ್ನಿಸಿದರೂ ಸ್ಪೇನ್‌ನ ಶಿಸ್ತುಬದ್ಧ ರಕ್ಷಣೆಯನ್ನು ಭೇದಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಅಂತಿಮ ಸೀಟಿಯೊಂದಿಗೆ ಸ್ಪೇನ್ ಆಟಗಾರರು ಸಂಭ್ರಮದಲ್ಲಿ ತೇಲಿದರೆ, ಸತತ ಎರಡನೇ ವಿಶ್ವಕಪ್ ಗೆಲ್ಲುವ ಅರ್ಜೆಂಟೀನಾದ ಕನಸು ಭಗ್ನವಾಯಿತು.

ಈ ಗೆಲುವಿನೊಂದಿಗೆ ಸ್ಪೇನ್ 2010ರ ನಂತರ ಮತ್ತೊಮ್ಮೆ ವಿಶ್ವಕಪ್ ಟ್ರೋಫಿಯನ್ನು ಎತ್ತಿಹಿಡಿದಿದ್ದು, ಒಟ್ಟಾರೆ ಎರಡನೇ ಬಾರಿ ವಿಶ್ವ ಚಾಂಪಿಯನ್ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ತರಬೇತುದಾರ ಲೂಯಿಸ್ ಡೆ ಲಾ ಫುಯೆಂಟೆ ಅವರ ಮಾರ್ಗದರ್ಶನದಲ್ಲಿ ಸ್ಪೇನ್ ಸಂಪೂರ್ಣ ಟೂರ್ನಿಯಲ್ಲಿ ತೋರಿದ ಸಂಘಟಿತ ಆಟಕ್ಕೆ ಈ ಪ್ರಶಸ್ತಿ ತಕ್ಕ ಪ್ರತಿಫಲವಾಗಿದೆ.


ಫಿಫಾ ವಿಶ್ವಕಪ್ 2026ರ ಸೆಮಿಫೈನಲ್ ಹಂತಕ್ಕೆ ವಿಶ್ವ ಶ್ರೇಯಾಂಕದ ಅಗ್ರ ನಾಲ್ಕು ಬಲಿಷ್ಠ ತಂಡಗಳಾದ ಅರ್ಜೆಂಟೀನಾ, ಇಂಗ್ಲೆಂಡ್, ಸ್ಪೇನ್ ಮತ್ತು ಫ್ರಾನ್ಸ್ ಲಗ್ಗೆ ಇಟ್ಟಿವೆ. ಕ್ವಾರ್ಟರ್ ಫೈನಲ್‌ನಲ್ಲಿ ರೋಚಕ ಜಯ ಸಾಧಿಸಿದ ಈ ಮಾಜಿ ಚಾಂಪಿಯನ್‌ಗಳ ಮುಖಾಮುಖಿಯಿಂದಾಗಿ, ಈ ಬಾರಿ ಯಾವುದೇ ಹೊಸ ತಂಡ ಚಾಂಪಿಯನ್ ಆಗುವುದಿಲ್ಲ ಎಂಬುದು ಖಚಿತವಾಗಿದೆ.


ಜುಲೈ 15 ಮತ್ತು 16 ರಂದು ಪಂದ್ಯಗಳು ನಡೆದು ವಿಶ್ವಕಪ್‌ನ ಜಿದ್ದಾಜಿದ್ದಿನ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಅರ್ಜೆಂಟೀನಾ ತಂಡ ಇಂಗ್ಲೆಂಡ್ ಅನ್ನು ಸೋಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಈ ಮೂಲಕ ಅರ್ಜೆಂಟೀನಾ ಸತತ ಎರಡನೇ ಬಾರಿಗೆ ವಿಶ್ವಕಪ್ ಫೈನಲ್ ತಲುಪಿದಂತಾಗಿದೆ. ಪಂದ್ಯದ 85ನೇ ನಿಮಿಷದವರೆಗೂ ಒಂದು ಗೋಲಿನಿಂದ ಹಿಂದಿದ್ದ ಅರ್ಜೆಂಟೀನಾ, ಕೊನೆಯ ಕ್ಷಣಗಳಲ್ಲಿ ಎರಡು ಗೋಲುಗಳನ್ನು ಬಾರಿಸಿ ಪಂದ್ಯವನ್ನು ತನ್ನದಾಗಿಸಿಕೊಂಡಿತು.

ಫುಟ್ಬಾಲ್ ಪ್ರೇಮಿಗಳು ಕಾತರದಿಂದ ಕಾಯುತ್ತಿದ್ದ 23ನೇ ಆವೃತ್ತಿಯ ಫಿಫಾ ವಿಶ್ವಕಪ್ (FIFA World Cup 2026) ಕ್ರೀಡಾಕೂಟಕ್ಕೆ ಮೆಕ್ಸಿಕೊ ಸಿಟಿಯ ಐತಿಹಾಸಿಕ ಅಜ್ಟೆಕಾ ಕ್ರೀಡಾಂಗಣದಲ್ಲಿ ಅದ್ಧೂರಿ ಮತ್ತು ವರ್ಣರಂಜಿತ ಚಾಲನೆ ಸಿಕ್ಕಿ ಜೂನ್ 16 ರಂದು ಪಂದ್ಯಗಳು ಪ್ರಾರಂಭವಾಯಿತು. ಇತಿಹಾಸದಲ್ಲೇ ಮೊದಲ ಬಾರಿಗೆ ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ಜಂಟಿಯಾಗಿ ಈ ಜಾಗತಿಕ ಟೂರ್ನಿಗೆ ಆತಿಥ್ಯ ವಹಿಸುತ್ತಿವೆ.

ಉದ್ಘಾಟನಾ ಸಮಾರಂಭ'ದಲ್ಲಿ ವಿಶ್ವಪ್ರಸಿದ್ಧ ಪಾಪ್ ಗಾಯಕಿ ಶಕೀರಾ (Shakira) ಮತ್ತು ನೈಜೀರಿಯಾದ ಸ್ಟಾರ್ ಗಾಯಕ ಬರ್ನಾ ಬಾಯ್ (Burna Boy) ತಮ್ಮ ಅದ್ಭುತ ಗಾಯನ ಮತ್ತು ನೃತ್ಯದ ಮೂಲಕ ಕ್ರೀಡಾಂಗಣದಲ್ಲಿದ್ದ ಲಕ್ಷಾಂತರ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು. ಮೆಕ್ಸಿಕೋದ ಸಾಂಪ್ರದಾಯಿಕ 'ಮರಿಯಾಚಿ' ಸಂಗೀತ, ಜಾನಪದ ನೃತ್ಯಗಳು ಹಾಗೂ ಮೆಕ್ಸಿಕೋದ ಸಾಂಪ್ರದಾಯಿಕ 'ಮರಿಯಾಚಿ' ಸಂಗೀತ, ಜಾನಪದ ನೃತ್ಯಗಳು ಹಾಗೂ ಅತ್ಯಾಧುನಿಕ ಡ್ರೋನ್ ಮತ್ತು ಲೈಟ್ ಶೋಗಳು ಉದ್ಘಾಟನಾ ಸಮಾರಂಭದ ಪ್ರಮುಖ ಆಕರ್ಷಣೆಯಾಗಿದ್ದವು.

ಸಮಾರಂಭ ಮುಗಿದ ಬೆನ್ನಲ್ಲೇ ನಡೆದ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಮೆಕ್ಸಿಕೊ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಕಣಕ್ಕಿಳಿಯಿತು. ತಾಲ್ನಾಡಿನ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಈ ಪಂದ್ಯದೊಂದಿಗೆ ಜಗತ್ತಿನ ಅತಿ ದೊಡ್ಡ ಕ್ರೀಡಾ ಹಬ್ಬಕ್ಕೆ ಅಧಿಕೃತವಾಗಿ ಚಾಲನೆ ದೊರೆತಂತಾಗಿದೆ. ಈ ಬಾರಿ ಒಟ್ಟು 48 ತಂಡಗಳು 104 ಪಂದ್ಯಗಳ ಮೂಲಕ ವಿಶ್ವಕಪ್ ಟ್ರೋಫಿಗಾಗಿ ಸೆಣಸಾಡಿದ್ದವು.



Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157.